<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ಖಂಡ.ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು</u>

<u>ಖಂಡ2 ರಿಂದ 21ರವರೆಗೆ</u>

ಅಧ್ಯಕ್ಷರು :— "ಖಂಡ 2 ರಿಂದ 21ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಖಂಡ 2ರಿಂದ 21ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ 1 ಇತ್ಯಾದಿ</u>

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತವೆ"

<u>ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು</u>

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ``2000ದ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕವನ್ನು" ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ ``2000ದ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕವನ್ನು" ಅಂಗೀಕರಿಸುವುದು.

<u>ಪ್ರಸ್ತಾವವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.</u>

4. ನಿಯಮ 69ರ ಮೇರೆಗೆ

ವಿಷಯ: ರಾಜ್ಯದಲ್ಲಿ ರೈತರು ಬೆಳೆದಿರುವ ಮೆಕ್ಕೆಜೋಳ, ಭತ್ತ, ಆಲೂಗಡ್ಡೆ, ಎಣ್ಣೆ ಕಾಳುಗಳು, ತೊಗರಿ ಹಾಗೂ ತೆಂಗಿನ ಬೆಲೆ ಕುಸಿದಿರುವುದು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿನಂತಿ ಏನೆಂದರೆ, ವಿಶ್ವವಿದ್ಯಾನಿಯಲಕ್ಕೆ ಸಂಬಂಧಪಟ್ಟ ವಿಧೇಯಕದ ಬಗ್ಗೆ ಮಾತನಾಡಲು ನಮ್ಮ ಪಕ್ಷದಿಂದ ಸಾಕಷ್ಟು ಸದಸ್ಯರು ಇದ್ದಾರೆ. ಆ ವಿಧೇಯಕವನ್ನು ತೆಗೆದುಕೊಳ್ಳುವ ಮೊದಲು ರೈತರ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಕಳೆದ ಒಂದು ವಾರದಿಂದಲೂ ನಿಯಮ 69ರ ಅಡಿಯಲ್ಲಿ ವಿಚಾರವನ್ನು ತೆಗೆದುಕೊಂಡು ಬಂದಿದ್ದೇವೆ. ಆದರೆ ಇವತ್ತಿನವರೆಗೆ ಅದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಟ್ಟಿಲ್ಲ. ನಿನ್ನೆ ಮೊನ್ನೆ ಪತ್ರಿಕೆಗಳಲ್ಲಿ ಇದರ ಬಗ್ಗೆ ವರದಿ ಬರುತ್ತಿದೆ. ನಿನ್ನೆ ಬಳ್ಳಾರಿಯಲ್ಲಿ ಉದ್ರಿಕ್ತ ರೈತರಿಂದ ಮೆಕ್ಕೆಜೋಳ ಖರೀದಿ ಕೇಂದ್ರಕ್ಕೆ ಬೀಗವನ್ನು ಹಾಕಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ವಿಶ್ವಬ್ಯಾಂಕ್ ನವರು ಕೊಟ್ಟಿರುವ ಸಾಲದ ಬಗ್ಗೆ ಇಂದು ಹೇಳಿಕೆಯನ್ನು ಕೊಟ್ಟರು. ಆದರೆ ಇವತ್ತಿನವರೆಗೆ ಸರ್ಕಾರ ರೈತರು ಬೆಳೆದ ಉತ್ಪನ್ನದ ಬಗ್ಗೆ ಸ್ಪಂದಿಸದೆ ರೈತರು ತೊಂದರೆಗೆ ಒಳಗಾಗಿದ್ದಾರೆ. ಎಷ್ಟೋ ಕಡೆ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೆಲವರು ಸಾಲವನ್ನು ಮಾಡಿ ಬಹಳ ತೊಂದರೆಯಲ್ಲಿದ್ದಾರೆ. ಖರೀದಿ ಕೇಂದ್ರದಲ್ಲಿ ಸರಿಯಾಗಿ ಕೊಂಡುಕೊಳ್ಳಲಾರದೆ ರೈತರಿಗೆ ತೊಂದರೆಯಾಗಿದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಕೃಷಿ ಸಚಿವರು ಇಲ್ಲವೇ ಆಹಾರ ಸಚಿವರು ತಕ್ಷಣವೇ ಉತ್ತರವನ್ನು ಕೊಡಬೇಕು. ಇದರ ಬಗ್ಗೆ ಸಾಕಷ್ಟು ಜನ ಶಾಸಕರು ಚರ್ಚೆಮಾಡುವವರಿದ್ದಾರೆ. ಕಳೆದ ಒಂದು ವಾರದಿಂದ ಇದು ಅಜೆಂಡಾದಲ್ಲಿ ಬರುತ್ತಿದೆ. ಆದರೆ ಚರ್ಚೆಗೆ ತೆಗೆದುಕೊಳ್ಳುತ್ತಲೇ ಇಲ್ಲ. ಆದ್ದರಿಂದ ಇದರ ಬಗ್ಗೆ ತಕ್ಷಣವೇ ಸ್ಟೇಟ್ ಮೆಂಟ್ ಮಾಡಲಿ. ಮೊನ್ನೆ ಬಿ.ಎಸ್.ಸಿ. ಸಭೆಯಲ್ಲಿ ಇದರ ಬಗ್ಗೆ ಸ್ಟೇಟ್ ಮೆಂಟ್ ಮಾಡುವುದಾಗಿ ಹೇಳಿದ್ದರು. ಆದರೆ ಇದುವರೆಗೆ ಮಾಡಿಲ್ಲ. ರೈತರು ಬಹಳ ತೊಂದರೆಯಲ್ಲಿದ್ದಾರೆ. ಆದ್ದರಿಂದ ಸರ್ಕಾರ ಕೂಡಲೆ ಪರಿಹಾರ ಕೊಡದಿದ್ದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರ ತಕ್ಷಣವೇ ಇದರ ಬಗ್ಗೆ ಸ್ಟೇಟ್‌ಮೆಂಟ್‌ಮಾಡಬೇಕು.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೇ, ಈ ಸದನ ಪ್ರಾರಂಭ ಆದಂತಹ ಸಂದರ್ಭದಲ್ಲಿ, ಪ್ರಾರಂಭದ ದಿನಗಳಲ್ಲಿ ತಮಗೆ ಗೊತ್ತಿರುವ ಹಾಗೆ ಹಾಗೂ ಸದನದ ನಾಯಕರು ಒಪ್ಪಿರುವ ಹಾಗೆ 2-3 ಮಹತ್ವದ ವಿಚಾರಗಳ ಬಗ್ಗೆ ನಾವೆಲ್ಲಾ ಒಂದು ಸರ್ವಾನುಮತದ ಅಭಿಪ್ರಾಯಕ್ಕೆ ಬಂದಿದ್ದೇವೆ. ಅದರಲ್ಲಿ ಬಹಳ ಮುಖ್ಯವಾಗಿರುವಂಥದ್ದು, ಡಾ: ರಾಜ್‌ಕುಮಾರ್ ಅವರ ಅಪಹರಣದ ವಿಚಾರದಲ್ಲಿ ನಮ್ಮ ಒಂದು ಚರ್ಚೆ ರಾಜ್‌ಕುಮಾರ್ ಬಿಡುಗಡೆ ನಂತರ ಆಗಬೇಕು ಎಂಬುದಾಗಿತ್ತು. ಅದನ್ನು ನಾವು ಒಪ್ಪಿಕೊಂಡೆವು. ಸುದೈವದಿಂದ ಅವರ ಬಿಡುಗಡೆಯೂ ಕೂಡ ಆಗಿದೆ. ಅದರ ಬಗ್ಗೆ ಈಗಾಗಲೇ ನಾವು ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ಇದಾದ ನಂತರ ಹೆಚ್ಚಿಗೆ ಮಳೆ ಬಿದ್ದಿರುವುದರಿಂದ ಆಗಿರತಕ್ಕಂಥ ಅನಾಹುತಗಳ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಅದಕ್ಕೆ ಸರ್ಕಾರ ಏನು ಮಾಡಬಹುದು? ಕೇಂದ್ರ ಸರ್ಕಾರದಿಂದ ಏನು ಸಹಕಾರ

ಪಡೆಯಬಹುದು ಎನ್ನುವುದರ ಬಗ್ಗೆಯೂ ಕೂಡ ನಾವು ಚರ್ಚೆ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ನಿಯಮ 69ರ ಅಡಿಯಲ್ಲಿ, ರಾಜ್ಯದಲ್ಲಿನ ಕಾನೂನು ಪರಿಸ್ಥಿತಿಯ ಬಗ್ಗೆ ಕೆಲವೊಂದು ಸಲಹೆಗಳನ್ನು ನೀಡಲು ಚರ್ಚೆ ನಡೆಸುವುದಕ್ಕಾಗಿ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ರೈತರ ಬೆಳೆಗಳಿಗೆ ಬೆಲೆ ಕುಸಿದಿರುವ ಬಗ್ಗೆಯ ಚರ್ಚೆ ಈಗ ಅರ್ಧ ಮುಗಿದಿದೆ. ಈ ಅಧಿವೇಶನದಲ್ಲಿ ಈ ಸದನ ಇನ್ನು 4-5 ಗಂಟೆಗಳ ಕಾಲ ಮಾತ್ರ ನಡೆಯಲಿದೆ. ಆದ್ದರಿಂದ ಕಾನೂನಿನ ಪರಿಸ್ಥಿತಿಯ ಬಗ್ಗೆ ಈ ಸಂದರ್ಭದಲ್ಲಿ ನಾವು ಚರ್ಚೆ ಮಾಡಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ. ಡಾ: ರಾಜ್ ಕುಮಾರ್‌ರವರ ಅಪಹರಣದ ಹಿನ್ನಲೆಯಲ್ಲಿ, ಕೆಲವು ವಿಚಾರಗಳನ್ನು ಸೂಕ್ಷ್ಮವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು, ನಮ್ಮ ಕಡೆಯ ಸದಸ್ಯರೆಲ್ಲರೂ ಸೇರಿ ಮಾತನಾಡುತ್ತಿದ್ದೇವೆ. ಈಗ ಬಹಳ ಮುಖ್ಯವಾಗಿ ಮಾನ್ಯ ಆಹಾರ ಸಚಿವರು ಕೃಷಿ ಸಚಿವರು ಮತ್ತು ಮಾರುಕಟ್ಟೆ ಸಚಿವರುಗಳಿಂದ ನಮಗೆ ಒಂದು ಹೇಳಿಕೆ ಬೇಕಾಗಿದೆ. ಮಾನ್ಯ ಅಧ್ಯಕ್ಷರು ಒಪ್ಪುವುದಾದರೆ ನಾವು 15-20 ನಿಮಿಷಗಳಲ್ಲಿ ನಮ್ಮ ಚರ್ಚೆಯನ್ನು ಮುಗಿಸುತ್ತೇವೆ. ಇದಾದ ನಂತರ ಮಾನ್ಯ ಮಂತ್ರಿಗಳು ೫ ನಿಮಿಷದಲ್ಲಿ ತಮ್ಮ ಉತ್ತರವನ್ನು ಕೊಡಲಿ. ಕೇಂದ್ರ ಸರ್ಕಾರದಿಂದ ಸಹಾಯ ಪಡೆಯಲು ನಮ್ಮ ಸರ್ಕಾರದವರು ಏನು ಮಾಡಿದ್ದಾರೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಿಕೆ ರೂಪದಲ್ಲಿ ಉತ್ತರ ಕೊಡಲಿ. ಆದಾದ ನಂತರ ಉಳಿದಿರತಕ್ಕಂಥ ವಿಧೇಯಕಗಳೇನಿವೆ, ಅವೆಲ್ಲದರ ಮೇಲಿನ ಚರ್ಚೆಯಲ್ಲಿ ನಾವು ಪಾಲ್ಗೊಂಡಾಗ ಒಬ್ಬರು ಹೇಳಿದ್ದನ್ನು ಮತ್ತೊಬ್ಬರು ಹೇಳದೇ ಕೆಲವು ವಿಷಯಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತಂದು, ಅದನ್ನು ಕಾನೂನುಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅಳವಡಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಿ ಎನ್ನುವ ನಿವೇದನೆಯನ್ನು ಮಾಡಿಕೊಂಡು ನಾವು ಸಹಕಾರ ಮಾಡುತ್ತೇವೆ. ದಯವಿಟ್ಟು ನಿಯಮ 69ರ ಅಡಿಯಲ್ಲಿ ಬೆಳೆಗಳ ಬೆಲೆ ಕುಸಿತದ ಬಗ್ಗೆ ಮಾತನಾಡಲಿಕ್ಕೆ ಕೆಲವು ಮಾನ್ಯ ಸದಸ್ಯರಿಗೆ ಅವಕಾಶ ಕೊಟ್ಟು ನಂತರ ಆದಷ್ಟು ಮಾನ್ಯ ಮಂತ್ರಿಗಳಿಂದ ಉತ್ತರ ಕೊಡಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೇ, ನಾವು ತಮಗೆ ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟುಕೊಂಡೇ ಬಂದಿದ್ದೇವೆ. ಎಲ್ಲಾ ವಿಚಾರಗಳಿಗೂ ಕೂಡ ನಮ್ಮ ಸಹಕಾರ ಇದೆ. ರೈತರ ಜ್ವಲಂತ ಸಮಸ್ಯೆಗೆ ನಾವು ಪರಿಹಾರವನ್ನು ಕಂಡುಕೊಂಡೇ ಇಲ್ಲ. ಇವತ್ತು ಇದೇ ದಿವಸ ನಾವು ಬರೀ ವಿಧೇಯಕಗಳ ಮೇಲೆಯೇ ಚರ್ಚೆ ನಡೆಸುವುದು ಸೂಕ್ತವಲ್ಲ. ರೈತರ ಸಮಸ್ಯೆಗೆ ನಾವು ಪರಿಹಾರ ಕಂಡು-ಕೊಂಡಿಲ್ಲದಿರುವುದರಿಂದ ಇದೇ ಅಧಿವೇಶನದಲ್ಲಿ ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ ಎನ್ನುವುದು ಗೊತ್ತಾಗುತ್ತದೆ.

ಅಧ್ಯಕ್ಷರು :— ತಾವು ಹೇಳಿದ್ದು ನನಗೆ ಪೂರ್ಣವಾಗಿ ಅರ್ಥವಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದು ತಮಗೆ ಅರ್ಥವಾದರೆ ಸಾಕು. ತಾವು ಆ ಬಗ್ಗೆ ಅವರಿಗೆ ತಿಳಿಸಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್ :— ಮಾನ್ಯ ಅಧ್ಯಕ್ಷರೇ, ಇದುವರೆಗೂ ತೆಂಗಿನ ಬೆಲೆ ಕುಸಿತದ ಬಗ್ಗೆ ಚರ್ಚೆಯಾಯಿತು. ಇತರ ಬೆಳೆಗಳ ಬೆಲೆ ಕುಸಿತದ ಬಗ್ಗೆಯೂ ಕೂಡ ಇಲ್ಲಿ ಚರ್ಚೆಯಾಯಿತು. ಆದರೆ ಬಿಳಿ ಜೋಳದ ಬೆಲೆ ಕುಸಿತದ ಬಗ್ಗೆ ಇಲ್ಲಿ ಚರ್ಚೆಯಾಗಿಲ್ಲ. ಉತ್ತರ ಕರ್ನಾಟಕದ ಬಾಗಲಕೋಟೆ, ಬಿಜಾಪುರ, ಬೆಳಗಾವಿ ಎಲ್ಲಾ ಕಡೆ ಜೋಳದ ಬೆಲೆ ಕುಸಿದಿದ್ದು ಅದರ ಬಗ್ಗೆ ಇಲ್ಲಿ ವಿಶೇಷವಾದ ಚರ್ಚೆಯಾಗಲೇ ಇಲ್ಲ. ಅದನ್ನು ನಿರ್ಲಕ್ಷಿಸಿದ್ದಾರೆಂದು ನನಗನಿಸುತ್ತಿದೆ. ಅದರ ಬಗ್ಗೆಯೂ ಕೂಡ ಚರ್ಚಿಸಲು ನಮಗೆ 10 ನಿಮಿಷ ಅವಕಾಶ ಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸಿಂಧ್ಯಾರವರು ಈಗ ಏನೊಂದು ಸಲಹೆಗಳನ್ನು ಸದನದ ಮುಂದಿಟ್ಟರೋ ಅದು ಬಹಳ ಸೂಕ್ತವಾಗಿದೆ. ನಾನು ಈ ಬಗ್ಗೆ ನಿನ್ನೆಯೇ ಮಾನ್ಯ ಕೃಷಿ ಸಚಿವರ ಜೊತೆಗೆ ಮಾತನಾಡಿದ್ದೇನೆ. ಈ ವಿಷಯದ ಚರ್ಚೆಯನ್ನು ಈ ದಿವಸ 2 ಗಂಟೆ ಮೇಲೆ ತೆಗೆದುಕೊಳ್ಳಿ, ಈ ಬಗ್ಗೆ ನಾನಾಗಲೀ ಅಥವಾ ಮಾನ್ಯ ಮುಖ್ಯಮಂತ್ರಿಗಳಾಗಲೀ ಹೇಳಿಕೆಯೊಂದನ್ನು ನೀಡುವುದಾಗಿ ಮಾನ್ಯ ಕೃಷಿ ಸಚಿವರು ನನ್ನ ಬಳಿ ಒಪ್ಪಿಕೊಂಡಿದ್ದಾರೆ. ಈಗ ಚರ್ಚೆ ಮುಂದುವರೆಯಲಿ, ನಂತರ ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಒಂದು ವಿಚಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಈಗಾಗಲೇ ಪ್ರಾರಂಭವಾಗಿದೆ. ಆ ಚರ್ಚೆಯಲ್ಲಿ ಇನ್ನೂ ಬಹಳ ಜನ ಪಾಲ್ಗೊಳ್ಳುವವರಿದ್ದಾರೆ.

ಅಧ್ಯಕ್ಷರು :— ರಾತ್ರಿ ಸಮಯವಾಗಿದ್ದರಿಂದ ಯೂನಿವರ್ಸಿಟಿ ಬಿಲ್ ಮೇಲಿನ ಚರ್ಚೆಯನ್ನು ಮುಂದಕ್ಕೆ ಹಾಕಲಾಯಿತು.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ನಾವು ಬಿ.ಎ.ಸಿ.ಯ ಮೀಟಿಂಗ್‌ನಲ್ಲಿ ಒಪ್ಪಿಕೊಂಡಂತೆ ನಿನ್ನೆ ಮೂರು ಬಿಲ್‌ಗಳ ಮೇಲೆ ಚರ್ಚೆಯಾಗಿ ಅವುಗಳು ಪಾಸ್ ಆಗಿವೆ. ನಿಜವಾಗಿ ಹೇಳುವುದಾದರೆ, ನಿನ್ನೆ ಸಾಯಂಕಾಲದವರೆಗೆ ಯೂನಿವರ್ಸಿಟಿ ಬಿಲ್ ಅನ್ನು ನಿನ್ನೆಯೇ ತೆಗೆದುಕೊಳ್ಳಬೇಕೆಂದು ಉದ್ದೇಶಿಸಿರಲಿಲ್ಲ. ಅದನ್ನು ಇವತ್ತು ತೆಗೆದುಕೊಳ್ಳಲು ಉದ್ದೇಶಿಸಲಾಗಿತ್ತು. ಅದು ಅಜೆಂಡಾದಲ್ಲಿ ಮಾತ್ರ ಇತ್ತು. ಬಿ.ಎ.ಸಿ ಮೀಟಿಂಗ್‌ನಲ್ಲಿ ಒಪ್ಪಿಕೊಂಡ ಹಾಗೆ ನಿನ್ನೆ ಸುಗ್ರೀವಾಜ್ಞೆ ಬದಲಿಗೆ ತಂದ ವಿಧೇಯಕಗಳನ್ನು ಪಾಸ್ ಮಾಡಿಕೊಳ್ಳಲಾಯಿತು. ಯೂನಿವರ್ಸಿಟಿ ಬಿಲ್ ಮೇಲೆ ನಿಜವಾಗಿ ಇವತ್ತು ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿತ್ತು. ಅದರ ಬಗ್ಗೆ ಚರ್ಚೆ ಮಾಡುವುದು ಬೇಡವೆಂದು ನಾವು ಹೇಳುವುದಿಲ್ಲ......

ಶ್ರೀ ಕಾಗೋಡು ತಿಮ್ಮಪ್ಪ :— ಯೂನಿವರ್ಸಿಟಿ ಬಿಲ್ ಅನ್ನೂ ಸಹಾ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಬಿ.ಎ.ಸಿ.ನಲ್ಲಿ ನಿರ್ಧರಿಸಲಾಗಿತ್ತು...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :— ..... ಸರ್ಕಾರ ರೈತರ ಬೆಲೆಗಳ ಕುಸಿತದ ಬಗ್ಗೆ ಚರ್ಚೆ ನಡೆಸಲು ಹಿಂದೇಟು ಹಾಕುತ್ತಿದೆ. ಸರ್ಕಾರ ಇದರ ಬಗ್ಗೆ ನಿರ್ಲಕ್ಷ್ಯತನ ತೋರಿಸುತ್ತಿದೆ. ನಾವು ಇದನ್ನು ಪ್ರತಿಭಟಿಸಿ ಧರಣಿ ಮಾಡುತ್ತೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸದನದಲ್ಲಿದ್ದ ಎಲ್ಲಾ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿಂತರು)

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೇ, ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ. ಯೂನಿವರ್ಸಿಟಿಯಲ್ಲಿ ರಾಜಕೀಯ ಮಾಡಬೇಕು, ಸಂವಿಧಾನದ ಗೌರವ ತರುವಂತಹ ರಾಜ್ಯಪಾಲರ ಅಧಿಕಾರವನ್ನು ಕಿತ್ತುಕೊಳ್ಳಬೇಕು ಎಂಬುದು ಇವರ ಉದ್ದೇಶವಾಗಿದೆ. ನಾವು ಈಗಾಗಲೇ ಸುಮಾರು 13-14 ಬಿಲ್‌ಗಳನ್ನು ಪಾಸ್ ಮಾಡಿ ಕೊಟ್ಟಿದ್ದೇವೆ. ಇನ್ನೂ ಕೆಲವು ಬಿಲ್‌ಗಳಿಗೂ ಕೂಡ ನಾವು ಸಹಕಾರ ಕೊಡುವಂತಹ ಪ್ರಯತ್ನ ಮಾಡುತ್ತೇವೆ. ರಾಜ್ಯದ ಜ್ವಲಂತ ಸಮಸ್ಯೆ ರೈತರದಾಗಿದೆ. ಇವತ್ತು ಸಾಯಂಕಾಲದವರೆಗೆ ಬಿಲ್‌ಗಳನ್ನು ಪಾಸ್ ಮಾಡಿಕೊಂಡು ಅಧಿವೇಶನ ಮುಗಿಸಿಬಿಟ್ಟರೆ ಹೇಗೆ? ರೈತರ ಸಮಸ್ಯೆಗಳ ಚರ್ಚೆ ಬೇಡವೇ? ರೈತರಿಗೆ ಉತ್ತರಿಸುವವರ್ಯಾರು?......

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೇ, ಅವರು ಹೇಳಿದ್ದನ್ನು ನಾವು ಕೇಳಿದ್ದು ಆಯಿತು. ನಾವು ಹೇಳಿದ್ದನ್ನೂ ಕೂಡ ಅವರು ಕೇಳಬೇಕಲ್ಲವೇ? ಬಿಸಿನೆಸ್ ಅಡ್ವೈಸರಿ ಮೀಟಿಂಗ್‌ನಲ್ಲಿ ಎಲ್ಲರೂ ಒಪ್ಪಿದ ರೀತಿಯಲ್ಲಿ ತಾವೇ ಈಗ ಅಪ್ಪಣೆ ಕೊಡಿಸಿರುವಂತೆ 2 ಗಂಟೆಗೆ ಹೇಳಿಕೆ ಕೊಡಬೇಕು ಎಂದು ಆಗಿದೆ ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು 2 ಗಂಟೆಗೆ ಹೇಳಿಕೆ ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆಂದು ತಿಳಿಸಿದ್ದಾರೆ. ನಿನ್ನೆ ಕೊನೆಗೆ ಯೂನಿವರ್ಸಿಟಿ ಬಿಲ್ ಚರ್ಚೆಯನ್ನು ಪ್ರಾರಂಭ ಮಾಡಲಾಯಿತು. ಮಾನ್ಯ ವಿರೋಧ ಪಕ್ಷದ ಸದಸ್ಯರೇ ನಿನ್ನೆ ಬಹಳ ತಡವಾಗಿದೆ, ಈ ಚರ್ಚೆಯನ್ನು ನಾಳೆಗೆ ಮುಂದುವರಿಸೋಣ ಎಂದು ಹೇಳಿದ್ದರು. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ನಿನ್ನೆ ತಾವೇ ಒಪ್ಪಿದ ಮೇಲೆ ಈ ಯೂನಿವರ್ಸಿಟಿ

ಬಿಲ್ ಮೂವ್ ಮಾಡಲಾಯಿತು ಮತ್ತು ಅದರ ಮೇಲೆ ಅರ್ಧ ಭಾಗ ಚರ್ಚೆಯೂ ಕೂಡ ಆಗಿ ಅದು ಆ ಹಂತದಲ್ಲೇ ನಿಂತಿದೆ. ಈಗ ವೇಳೆಯಾಯಿತು, ಈ ವಿಧೇಯಕದ ಮೇಲಿನ ಚರ್ಚೆಯನ್ನು ನಾಳೆಗೆ ಮುಂದುವರೆಸೋಣ ಎಂದು ನಿನ್ನೆ ಹೇಳಲಾಗಿತ್ತು. ಆದ್ದರಿಂದ ಇದನ್ನು ಈಗ ತೆಗೆದುಕೊಳ್ಳಲು ಉದ್ದೇಶಿಸಿದ್ದೇವೆ. ರೈತರ ವಿಚಾರದಲ್ಲಿ ನಿಮಗೆ ಎಷ್ಟು ಕಾಳಜಿ ಇದೆಯೋ ನಮಗೂ ಅಷ್ಟೇ ಕಳಕಳಿ ಇದೆ. ಸರ್ಕಾರದ ವತಿಯಿಂದ ಏನೊಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡಬೇಕು ಎಂದು ನೀವು ಹೇಳಿದ್ದೀರೋ ಅದನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಇನ್ನೇನಾದರೂ ಬೇಕಾಗಿದ್ದರೆ ಅದನ್ನೂ ಮಾಡೋಣ. ಮಾನ್ಯ ಸಚಿವರಿಂದ ಹೇಳಿಕೆಯನ್ನೂ ಕೂಡ ಕೊಡಿಸೋಣ. ಮಾನ್ಯ ಸಚಿವರು ಹೇಳಿಕೆ ಕೊಡುವಂತಹ ಸಂದರ್ಭದಲ್ಲಿ ಸರ್ಕಾರದಿಂದ ಇನ್ನೂ ಏನಾದರೂ....

(ಗೊಂದಲ)

ಅಧ್ಯಕ್ಷರು :— ಯಾವುದನ್ನೂ ರೆಕಾರ್ಡ್ ಮಾಡಿಕೊಳ್ಳಬೇಡಿ. ಎಷ್ಟು ಹೊತ್ತಿನವರೆಗೆ ಗಲಾಟೆ ಮಾಡುತ್ತಾರೋ ಎಂಬುದನ್ನು ನೋಡೋಣ.

(ಗೊಂದಲ)

ಅಧ್ಯಕ್ಷರು :— ಐದಾರು ಜನ ಒಟ್ಟಿಗೆ ಮಾತನಾಡುತ್ತಿದ್ದಾರೆ. ಅದು ಯಾವುದನ್ನೂ ಕೂಡ ರೆಕಾರ್ಡ್‌ಗೆ ತೆಗೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :— .... ಯಾವುದು ಆರ್ಡಿನೆನ್ಸ್ ರಿಪ್ಲೇಸಿಂಗ್ ಬಿಲ್‌ಗಳು ಇದ್ದಾವೋ ಅಂತಹವುಗಳನ್ನು ಪಾಸ್ ಮಾಡುವುದಕ್ಕೆ ನಾವು ಆದ್ಯತೆ ಕೊಡುತ್ತೇವೆ ಎಂದು ಹೇಳಿದ್ದೆವು. ಅದರ ಪ್ರಕಾರ ನಿನ್ನೆ ಮೂರೂ ಬಿಲ್‌ಗಳು ಪಾಸ್ ಆದವು....

(ಗೊಂದಲ)

ಅಧ್ಯಕ್ಷರು :— ಎರಡೂ ಕಡೆಯವರು ಮಾತನಾಡಿದ್ದನ್ನೂ ಸಹಾ ನಾನು ಕೇಳಿದ್ದೇನೆ. ಮಾನ್ಯ ಸಿಂಧ್ಯಾರವರು ಏನೋ ಮಾತನಾಡಲಿದ್ದಾರೆ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

12.20 ಪಿ.ಎಂ.

+ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೇ, ಈ ಸದನ ಪ್ರಾರಂಭವಾದಾಗಿನಿಂದ ಬಹಳ ಮಹತ್ವದ ಎರಡ್ಮೂರು ವಿಚಾರಗಳಲ್ಲಿ ಸರ್ಕಾರಕ್ಕೆ ನಾವು ಸಹಕಾರವನ್ನು ಕೊಟ್ಟಿರುವುದು ಮತ್ತು ಅದಕ್ಕೆ ಮುಖ್ಯಮಂತ್ರಿಗಳೂ ಕೂಡ ಅಭಿನಂದನೆ ಸಲ್ಲಿಸಿರುವುದು ಎಲ್ಲರಿಗೂ ಗೊತ್ತಿದೆ. ಇನ್ನುಳಿದಿರತಕ್ಕಂಥ ಮೂರ್ನಾಲ್ಕು ಗಂಟೆಗಳ ಕಾಲವನ್ನು ಯಾವುದೋ ಬೇರೆ

ವಿಚಾರವನ್ನು ಪ್ರಸ್ತಾಪಿಸಿ ಸಮಯವನ್ನು ಹಾಳುಮಾಡಬೇಕೆಂಬ ದುರುದ್ದೇಶ ನಮ್ಮಗಳಿಗ್ಯಾರಿಗೂ ಇಲ್ಲ. ಯಾವುದೇ ಮಸೂದೆಗಳನ್ನು ಪಾಸ್ ಮಾಡಿಕೊಳ್ಳುವ ಸಲುವಾಗಿ ನಮ್ಮನ್ನು ಬಿಟ್ಟು ಪಾಸ್ ಮಾಡಿಕೊಳ್ಳಲು ತಾವು ಬಯಸಿದರೆ ಅದಕ್ಕೆ ಬೇಕಾದ ಸಂಖ್ಯಾಬಲವನ್ನು ನೀವು ಹೊಂದಿದ್ದೀರಿ ಎಂಬ ಅರಿವು ನಮಗಿದೆ. ರೈತರ ಬೆಳೆಗಳ ಬೆಲೆಗಳು ಕುಸಿದಿರುವ ಬಗ್ಗೆ 15-20 ದಿನಗಳಿಂದ ಹಿಂದೆ ಚರ್ಚೆಯಾಗುತ್ತಾ ಅದು ಅರ್ಧದಲ್ಲಿಯೇ ನಿಂತಿದ್ದು ಪ್ರತಿದಿನ ಅಜೆಂಡಾದಲ್ಲಿ ವಿಷಯ ಬರುತ್ತಿದೆ. ನಿಯಮ 69 ಪ್ರಕಾರ ನಾನೇ ಚರ್ಚೆಯನ್ನು ಮಾಡುವಾಗ ಅದು ಅರ್ಧದಲ್ಲಿ ನಿಂತಿದೆ. ಈಗ ನಮ್ಮ ಸ್ನೇಹಿತರುಗಳ ರಸಭಂಗ ಆಯಿತು ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ನಾವು ಚರ್ಚೆಯನ್ನು ನಿಲ್ಲಿಸುವುದಕ್ಕೆ ತಯಾರಿದ್ದೇವೆ. ಆದರೆ ಸರ್ಕಾರದ ವಕ್ತಾರರುಗಳು, ಆಹಾರ ಮಂತ್ರಿಗಳು, ಕೃಷಿ ಮಾರುಕಟ್ಟೆ ಸಚಿವರು ಮತ್ತು ಕೃಷಿ ಇಲಾಖೆ ಸಚಿವರಿಂದ ಅಧ್ಯಕ್ಷರು ಒಂದು ಹೇಳಿಕೆಯನ್ನು ಈ ವಿಷಯದ ಬಗ್ಗೆ ಕೊಡಿಸಬೇಕು. ಇದಾದ ನಂತರ ಅಧ್ಯಕ್ಷರು ಇಷ್ಟಪಟ್ಟಂತೆ ಮಿಕ್ಕೆಲ್ಲಾ ಕಾರ್ಯಕಲಾಪಗಳಿಗೆ ನಾವು ಸಹಕಾರವನ್ನು ಕೊಡುವುದಕ್ಕೆ ತಯಾರಿದ್ದೇವೆ. ಇಂದು ಈಗ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರುಗಳು ಧರಣಿ ಮಾಡುತ್ತಿರುವುದು ಅಧ್ಯಕ್ಷರ ಇಚ್ಛೆಯ ವಿರುದ್ಧವಾಗಿ ಅಲ್ಲ ತಮ್ಮ ಮನಸ್ಸಿಗೆ ನೋವನ್ನುಂಟುಮಾಡಬೇಕೆಂದೂ ಅಲ್ಲ. ರೈತರ ಬೆಳೆಗಳ ಬೆಲೆ ಕುಸಿದಿರುವ ಬಗ್ಗೆ ಹೇಳಿಕೆಯನ್ನು ಮೊದಲು ಕೊಡಿಸಬೇಕೆಂಬುದೇ ಆಗಿದೆ. ಈಗ ಮೊದಲು ಸಂಬಂಧಪಟ್ಟ ಮಂತ್ರಿಗಳಿಂದ ಹೇಳಿಕೆ ಕೊಡಿಸಿ ಅಥವಾ ತಾವೇ ಇದರ ಬಗ್ಗೆ ಹೇಳಿಕೆಯನ್ನು ಕೊಡಿ. ಹೇಳಿಕೆಯನ್ನು ಕೊಟ್ಟಮೇಲೆ ಸದನವನ್ನು ಮುಂದುವರಿಸೋಣ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :— ಅಧ್ಯಕ್ಷರೆ, ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಇಂದು ಎರಡು ಗಂಟೆಗೆ ಹೇಳಿಕೆಯನ್ನು ಕೊಡಲಾಗುವುದೆಂದು ತೀರ್ಮಾನಿಸಲಾಗಿದೆ.

ಅಧ್ಯಕ್ಷರು :— ನನಗೂ ಕೂಡ ಮಾನ್ಯ ಮಂತ್ರಿಗಳು ಈ ವಿಷಯವನ್ನು ಎರಡು ಗಂಟೆಗೆ ತೆಗೆದುಕೊಳ್ಳಿ, ನಾನು ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇನೆ ಎಂದು ನನಗೆ ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಎರಡು ಗಂಟೆಗೆ ಬಂದು ಹೇಳಿಕೆಯನ್ನು ಕೊಡಲಿ. ಅಲ್ಲಿಯವರೆಗೂ ನಮ್ಮ ಕಡೆಯ ಹಲವಾರು ಶಾಸಕರು ರೈತರ ಬೆಳೆಗಳ ಬೆಲೆ ಕುಸಿತದ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಿ. ನಾವು ಸಂಜೆಯವರೆಗೂ ಕೂಡ ಸದನದಲ್ಲಿ ಕುಳಿತುಕೊಳ್ಳಲು ತಯಾರಿದ್ದೇವೆ. ಆದುದರಿಂದ ನೀವು ಸಂಜೆ ವಿಧೇಯಕಗಳನ್ನು ತೆಗೆದುಕೊಳ್ಳಬಹುದು. ನಿನ್ನೆ ರಾತ್ರಿ 8 ಗಂಟೆಯವರೆಗೂ ಕುಳಿತು ಮೂರು ವಿದೇಯಕಗಳನ್ನು ಪಾಸ್ ಮಾಡಿಕೊಟ್ಟಿದ್ದೇವೆ.

ಶ್ರೀ ಬಾಗೋಡು ತಿಮ್ಮಪ್ಪ :— ರಾಜೀವ್‌ಕುಮಾರ್ ಅಪಹರಣದ ಚರ್ಚೆ ಮುಗಿದ ತಕ್ಷಣ ಉಳಿದಿರುವ ಎಲ್ಲಾ ವಿಚಾರಗಳ ಬಗ್ಗೆ ಆಗಲೇ ಚರ್ಚೆ ಮಾಡಿದ್ದಾರೆ ಆಗಲೇ ಉತ್ತರವನ್ನು ಕೊಡಬಹುದಿತ್ತು. ವಿರೋಧ ಪಕ್ಷದವರು ಆ ಅವಕಾಶವನ್ನು ಆಗ ಉಪಯೋಗಿಸಿಕೊಳ್ಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೆ, ತಾವು ಈಗ ನಮ್ಮ ಸಹಕಾರಕ್ಕೆ ಬರಲೇ ಬೇಕಾಗುತ್ತದೆ. ಕಳೆದ 15 ದಿವಸಗಳ ಅಧಿವೇಶನ ಪ್ರಾರಂಭವಾಗುವುದಕ್ಕೆ ಅರ್ಧ ಗಂಟೆ ಮುಂಚೆ ಬಂದು ಪ್ರತಿದಿನ ತಮ್ಮನ್ನು ಭೇಟಿ ಮಾಡಿ ರೈತರ ಬೆಳೆಗಳ ಬೆಲೆಗಳ ಕುರಿತದ ಚರ್ಚೆಯನ್ನು ತೆಗೆದುಕೊಂಡ ನಂತರ ಬೇರೆ ವಿಷಯಗಳನ್ನು ತೆಗೆದುಕೊಳ್ಳಬೇಕೆಂದು ಅತ್ಯಂತ ವಿನಮ್ರತೆಯಿಂದ ತಮ್ಮಲ್ಲಿ ನಾನು ಕೇಳಿಕೊಂಡಿದ್ದೇನೆ. ಆ ಸಂದರ್ಭದಲ್ಲಿ ನಮ್ಮ ಬಿ.ಜೆ.ಪಿ ಮಿತ್ರರೂ ಕೂಡ ಸ್ವಲ್ಪ ನಮ್ಮ ಬಗ್ಗೆ ಬೇಸರವನ್ನು ಮಾಡಿಕೊಂಡಿದ್ದರು. ನಾನು ಪ್ರಾರಂಭದಿಂದಲೂ ಸದರಿ ವಿಷಯದ ಬಗ್ಗೆ ಚರ್ಚೆಯಾಗಬೇಕು ಎಂದು ಹೇಳುತ್ತಲೇ ಬಂದಿರುವುದರಿಂದ ಈಗ ಚರ್ಚೆಗೆ ಅವಕಾಶ ಕೊಡಿ 45 ನಿಮಿಷದಲ್ಲಿ ಚರ್ಚೆ ಮುಗಿಸಿಬಿಡುತ್ತೇವೆ. ಚರ್ಚೆಯಾದ ಮೇಲೆ ಯಾವ ಮಸೂದೆಯನ್ನಾದರೂ ತೆಗೆದುಕೊಳ್ಳಿ, ನಮ್ಮದೇನೂ ಯಾವ ತಕರಾರಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಇಲಾಖಾ ಸಚಿವರು) :— ಮಾನ್ಯ ಅಧ್ಯಕ್ಷರೆ, ಮೊದಲು ತೀರ್ಮಾನವಾದಂತೆ 17ನೇ ತಾರೀಖಿನಂದೇ ಸದನದ ಅಧಿವೇಶನ ಮುಗಿಯಬೇಕಾಗಿತ್ತು. ಅದರೆ ನಂತರ 22ನೇ ತಾರೀಖೆಂದು ಆಯಿತು. ಮೊದಲು 17ನೇ ತಾರೀಖೇ ಅಧಿವೇಶನ ಮುಗಿಯುತ್ತದೆಂದು ತಿಳಿದುಕೊಂಡು ಇಂದು ಸಹಕಾರಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಇದಕ್ಕೆ ಮಾರುಕಟ್ಟೆ ಸಚಿವರು, ಮುಖ್ಯಮಂತ್ರಿಗಳು ಹೋಗಿದ್ದಾರೆ. ಈಗ ಅವರುಗಳು ಅಲ್ಲಿರುವುದರಿಂದ ಇಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರುಗಳು ಪ್ರಸ್ತಾಪ ಮಾಡಿರುವ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಪ್ರಸ್ತಾಪ ಮಾಡುತ್ತಿರಲಿ, ನಾನು ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ. ಇನ್ನು ಸಿಂಧ್ಯಾರವರು ಮಂತ್ರಿಗಳ ಹೇಳಿಕೆಯಾಗಬೇಕೆಂದು ಹೇಳಿದ್ದಾರೆ. ಈಗ ಇನ್ನೂ 12 ಗಂಟೆಯಾಗಿದೆ. ಇನ್ನು ಸಮಯವಿರುವುದರಿಂದ ಮಂತ್ರಿಗಳಿಗೆ ವಿಷಯದ ಬಗ್ಗೆ ತಿಳಿಸಿ ಏನಾದರೂ ವ್ಯವಸ್ಥಿತವಾದ ಅಭಿಪ್ರಾಯಕ್ಕೆ ಬರುವುದಕ್ಕೆ ಅನುಕೂಲ ಮಾಡಿಕೊಡೋಣ. ಈಗ ಇಲ್ಲಿ ಸಂಸದೀಯ ವ್ಯವಹಾರಗಳ ಇಲಾಖೆ ಸಚಿವರು ಕೂಡ ಇಲ್ಲ. ಆದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರುಗಳಿಗೆ ನಾನು ವಿನಂತಿ ಮಾಡುವುದೇನೆಂದರೆ ಈಗ ಸಭೆಯನ್ನು ಮುಂದುವರೆಸಿಕೊಂಡು ಹೋಗಲು ಸಹಕಾರ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ.ಎಂ. ಕೃಷ್ಣಮೂರ್ತಿ :— ಅಧ್ಯಕ್ಷರೆ, ಸರ್ಕಾರದವರು ಹಲವಾರು ವಿಧೇಯಕಗಳನ್ನು ಮಂಡಿಸುವುದಕ್ಕೆ ನಾವು ಸಹಕಾರವನ್ನು ಕೊಟ್ಟಿದ್ದೇವೆ. ಆದರೆ ಈಗ ರೈತರ ಪರಿಸ್ಥಿತಿ ಇಂದು ಹೀನಾಯವಾಗಿರುವ ಬಗ್ಗೆ ಸರ್ಕಾರದವರು ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. ಅಧಿವೇಶನ ಪ್ರಾರಂಭವಾಗಿ ಒಂದು ತಿಂಗಳಾದರೂ ರೈತರ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾಗಲಿ, ಸಂಬಂಧಪಟ್ಟ ಇಲಾಖಾ ಮಂತ್ರಿಗಳಾಗಲಿ ಹೇಳಿಕೆಯನ್ನು ಕೊಟ್ಟಿಲ್ಲವಲ್ಲ, ಇವರಿಗೆ ರೈತರ ಬಗ್ಗೆ ಚಿಂತನೆ ಇದೆಯೇ?

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ :— ಆ ಕಡೆಯವರು ಯಾರೂ ರೈತರ ಮಕ್ಕಳಲ್ಲವಾದ್ದರಿಂದ ಅವರಿಗೆ ರೈತರ ಬಗ್ಗೆ ಚರ್ಚೆ ಬೇಡವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ :— ನಮಗೂ ರೈತರ ಬಗ್ಗೆ ಕಾಳಜಿ ಇದೆ. ಮೊದಲು ವಿಧೇಯಕಗಳನ್ನು ಪಾಸ್ ಮಾಡಿಬಿಡಲಿ. ಇದಾದನಂತರ ಬೇಕಾದರೆ ಮೂರು ಗಂಟೆಯಿಂದ 4 ಗಂಟೆಯವರೆಗೆ ಬೆಳೆಗಳ ಬೆಲೆ ಕುಸಿತದ ಬಗ್ಗೆ ಚರ್ಚೆ ಮಾಡಲಿ. ನಾವೇನು ಬೇಡವೆಂದು ಹೇಳುವುದಿಲ್ಲ. ಈಗಾಗಲೇ ಈ ವಿಷಯದ ಮೇಲೆ ಮಾತನಾಡಬೇಕೆಂದರೆ ಐದೈದು ನಿಮಿಷಗಳಂತೆ ಮೂವರು ಮಾತ್ರ ಮಾತನಾಡುವುದಾದರೆ ಈಗಲೇ ಮಾತನಾಡಲಿ.

ಅಧ್ಯಕ್ಷರು :— ಮೂರು ಜನ ಮಾತನಾಡುವುದಾದರೆ ಮಾತನಾಡಲಿ ಎಂದು ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :— ಒಟ್ಟು 5 ಜನರು ಮಾತನಾಡುವವರಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ಆಗಲಿ, 5 ಜನರೇ ಮಾತನಾಡಲಿ. ಒಂದು ಗಂಟೆಯೊಳಗೆ ಮುಗಿಸಲಿ.

ಅಧ್ಯಕ್ಷರು :— ಆಗ ಮೊದಲು ಸಿಂಧ್ಯಾರವರು ಮಾತನಾಡಲಿ ಒಂದು ಗಂಟೆಯೊಳಗೆ ಎಲ್ಲರೂ ಮಾತನಾಡಿ ಮುಗಿಸಬೇಕು.

(ಧರಣಿ ನಿರತ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ತೆರಳಿದರು)

ಶ್ರೀ ಸಂಪಂಗಿ :— ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ವಿಭಾಗವನ್ನು ಜಿಲ್ಲೆಯನ್ನಾಗಿ ಮಾಡಿಕೊಳ್ಳಬೇಕೆನ್ನುವ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದಿರಿ. ಆದರೆ ಇದುವರೆಗೂ ಅವಕಾಶ ಮಾಡಿಕೊಟ್ಟಿಲ್ಲ.

ಅಧ್ಯಕ್ಷರು :— ಆಮೇಲೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಆಗ ಪ್ರಸ್ತಾಪ ಮಾಡಿ. ಈಗ ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಹಾಗೂ ಮಾನ್ಯ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಆ ಕಡೆ ಕುಳಿತಿರುವ ಯಾವ ಸದಸ್ಯರಿಗೆ ಆಗಲಿ ರೈತರ ಬಗ್ಗೆ ಕಾಳಜಿ ಇಲ್ಲರೆಂದು ಹೇಳಲಿಲ್ಲ. ಆ ರೀತಿ ಹೇಳುವ ಮೂರ್ಖರೂ ಕೂಡ ನಾವಲ್ಲ. ರಾಜ್ಯ ಸರ್ಕಾರದ ಇತಿಮಿತಿಗಳ ಬಗ್ಗೆ ಹಾಗೂ ಕೇಂದ್ರ ಸರ್ಕಾರದ ಇತಿಮಿತಿಗಳ ಬಗ್ಗೆ ನಮಗೂ ಸಹ ಗೊತ್ತಿದೆ. ಸುಮಾರು ಒಂದು ತಿಂಗಳ ಕಾಲ ಸದನವನ್ನು ಮಾನ್ಯ ಅಧ್ಯಕ್ಷರು ಸುಸೂತ್ರವಾಗಿ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಡೆಸಿರುವುದಕ್ಕೆ ಮೊಟ್ಟ ಮೊದಲನೆಯದಾಗಿ ಅಧ್ಯಕ್ಷರಿಗೆ ನಾನು ಅಭಿನಂದಿಸುತ್ತೇನೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಅಭಿಪ್ರಾಯಗಳನ್ನು ಕೂಡ ಸದನದಲ್ಲಿ ಹೇಳುವುದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಾರೆ. ಕೆಲವು ಸಂದರ್ಭದಲ್ಲಿ ಅಧ್ಯಕ್ಷರಿಗೂ ಸಿಟ್ಟು, ಆವೇಶ ಬಂದೇ ಬರುತ್ತದೆ. ಇದು ಸಹಜವೂ ಕೂಡ ಆಗಿರುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಕೂಡ ಅದನ್ನು ಅರ್ಥಮಾಡಿಕೊಳ್ಳುತ್ತೇವೆ. ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಕೆಲಸ ಮಾಡುವುದು ಬಹಳ ಕಷ್ಟದ ಕೆಲಸವೇ ಆಗಿರುತ್ತದೆ. ಹೀಗಿರುವಾಗ ಸರ್ಕಾರದ ಕಲಾಪಗಳು ನಡೆಯಲು ಹಾಗೂ ಸಾರ್ವಜನಿಕ ಅಭಿಪ್ರಾಯಗಳನ್ನು ಕೂಡ ಸದನದಲ್ಲಿ ಮಂಡನೆ ಮಾಡಲು ಅಧ್ಯಕ್ಷರು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದುದರಿಂದ ನಮ್ಮ ಪಕ್ಷದ ಎಲ್ಲಾ ಸದಸ್ಯರ ಪರವಾಗಿ ಅಧ್ಯಕ್ಷರಿಗೆ ಅಭಿನಂದನೆ ಸಲ್ಲಸುತ್ತೇನೆ. ಈಗ ಕಡೆಯ ದಿನದಲ್ಲೂ ಕೂಡ ಬೆಳೆಗಳ ಬೆಲೆಗಳು ಕುಸಿತವಾಗಿರುವ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರದೊಡನೆ ಮಾತನಾಡಲು ನಮ್ಮಲ್ಲಿ ಅನೇಕ ಜನ ಶಾಸಕರು, ಮಂತ್ರಿಗಳು, ರಾಜ್ಯ ಸರ್ಕಾರದ ನಿಯೋಗದೊಂದಿಗೆ ದೆಹಲಿಗೆ ಹೋಗುವವರಿದ್ದೇವೆ. ಈಗಾಗಲೇ ನಮ್ಮ ಪಕ್ಷದ ಮುಖಂಡರುಗಳು ಭೇಟಿ ಮಾಡಿದ್ದಾರೆ. ನಮ್ಮ ಪಕ್ಷದ ಅಧ್ಯಕ್ಷರೂ ಕೂಡ ಕೇಂದ್ರ ಸರ್ಕಾರದ ಮೇಲೆ ಈ ವಿಷಯದ ಬಗ್ಗೆ ಒತ್ತಾಯವನ್ನು ತಂದಿದ್ದಾರೆ. ಇಂದು ಕೂಡ ಆ ಒತ್ತಾಯವನ್ನು ಮುಂದುವರೆಸಿಕೊಂಡು ಹೋಗುವವರಿದ್ದೇವೆ. ಈ ಮಧ್ಯದಲ್ಲಿ ರಾಜ್ಯ ಸರ್ಕಾರ ಏನು ಮಾಡಬೇಕು ಎಂಬುದಕ್ಕೆ ಕೆಲವು ಸೂಚನೆಗಳನ್ನು ನಾವು ಕೊಡಬೇಕಾಗಿದೆ. ಆದುದರಿಂದ ಇದನ್ನು ಹೇಳಲು ನನಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ನಾನು ಈ ವಿಷಯದ ಬಗ್ಗೆ ಅರ್ಧದಲ್ಲಿಯೇ ಮಾತನಾಡುವುದನ್ನು ನಿಲ್ಲಿಸಿದ್ದೆ. ಬಹಳ ಮುಖ್ಯವಾಗಿ ಬೀದರ್‌ನಲ್ಲಿ ತೊಗರಿ, ಜೋಳ, ಹೆಸರು ಮತ್ತು ಉದ್ದಿನ ಬೆಳೆಗಳು ಪ್ರಮುಖವಾಗಿವೆ. ರಾಯಚೂರಿನಲ್ಲಿ ಭತ್ತ, ಕೊಪ್ಪಳದಲ್ಲಿ ಜೋಳ, ಬಳ್ಳಾರಿಯಲ್ಲಿ ಮೆಣಸಿನಕಾಯಿ, ಹಾವೇರಿ, ಧಾರವಾಡ ಮತ್ತು ಗದಗ್ ಜಿಲ್ಲೆಯಲ್ಲಿ ಮೆಣಸಿನಕಾಯಿ

ಹಾಗೂ ಜೋಳ, ಚಿತ್ರದುರ್ಗದಲ್ಲಿ ಈರುಳ್ಳಿ, ತುಮಕೂರು, ಬೆಂಗಳೂರು, ಚಾಮರಾಜನಗರ ಚಿಕ್ಕಮಗಳೂರು, ಮಂಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ತೆಂಗು, ಅಡಿಕೆ ಹಾಗೂ ಇತ್ಯಾದಿ ಪ್ರಮುಖ ಬೆಳೆಗಳನ್ನು ನಾವೆಲ್ಲರೂ ಬೆಳೆದುಕೊಂಡು ಬಂದಿದ್ದೇವೆ. ಒಂದು ಕಾಲದಲ್ಲಿ ಅಡಿಕೆ ಬೆಳೆ ರೈತರ ಪಾಲಿನ ಬಂಗಾರದ ಬೆಳೆಯಾಗಿದ್ದದ್ದು ಇಂದು ಹಾಗೆ ಬಂಗಾರವಾಗಿದೆ. ಈಗಾಗಲೇ ಅಡಿಕೆ ಬೆಳೆಗೆ ಸಂಬಂಧಪಟ್ಟಂತೆ ಚರ್ಚಿಸಲು ಸದಾನಂದಗೌಡರ ನೇತೃತ್ವದಲ್ಲಿ ದೆಹಲಿಯಲ್ಲಿ ಕೇಂದ್ರ ಸರ್ಕಾರದೊಡನೆ ಚರ್ಚಿಸಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಎಂಬುದನ್ನು ನಾನು ಕೇಳಿದ್ದೇನೆ. ನಾನು ಕೂಡ ಸರ್ಕಾರಕ್ಕೆ ಈಗ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಈಗ ಕುಸಿದಿರುವ ಬೆಲೆಗಳನ್ನು ರಾಜ್ಯ ಸರ್ಕಾರ ಗಮನಿಸಿ ಅದಕ್ಕೆ ಬೇಕಾಗಿರತಕ್ಕಂಥ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ಎರಡೂರ್‍ರು ವಿಚಾರಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಕರ್ನಾಟ ಕದಲ್ಲಿ ಬೆಳೆಯುವ ಎಲ್ಲಾ ಬೆಳೆಗಳ ಸಂಬಂಧದಲ್ಲಿ ಬಿಳಿಜೋಳ, ಮ( )ಜೋಳ, ಅಡಿಕೆ, ತೆಂಗು, ಈರುಳ್ಳಿ, ಹಾಗೂ ಇತ್ಯಾದಿ ಪ್ರತಿಯೊಂದು ಬೆಳೆಗಳ ಸಂಬಂಧ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ ತಿಳಿಸಲು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ನಿಯೋಗ ದೆಹಲಿಗೆ ಹೋಗಬೇಕೆಂದು ಹೇಳಬಯಸುತ್ತೇನೆ. ಆದರೆ ಈಗ ಡಿ.ಬಿ. ಇನಾಂದಾರರ ನೇತೃತ್ವದಲ್ಲಿ ಕೇಂದ್ರ ಆಹಾರ ಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ನಿಯೋಗವನ್ನು ಮಾಡಿದ್ದಾರೆ. ಈ ನಿಯೋಗಕ್ಕೆ ನನ್ನನ್ನು, ಎಸ್.ಎಸ್. ಪಾಟೀಲರನ್ನು ಮತ್ತು ಹಂಪನಗೌಡ ಬಾದರ್ಲಿಯವರನ್ನು ನಮ್ಮ ಪಕ್ಷದಿಂದ ಕರೆದಿದ್ದಾರೆ. ನಾವು ಹೋಗುವುದಕ್ಕೆ ತಯಾರಿದ್ದೇವೆ. ಆದರೆ ಈ ನಿಯೋಗದ ನಾಯಕತ್ವವನ್ನು ಮಾನ್ಯ ಮುಖ್ಯಮಂತ್ರಿಗಳೇ ವಹಿಸಿಕೊಳ್ಳಬೇಕೆಂಬುದೇ ನಮ್ಮ ಒತ್ತಾಯ. ಏಕೆಂದರೆ ಮುಖ್ಯಮಂತ್ರಿಯವರು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲಿ. ಇವೊತ್ತು ತಾವೆಲ್ಲಾ ಗಮನಿಸಿರುವ ಹಾಗೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀಮತಿ ಸೋನಿಯಾಗಾಂಧಿಯವರು ಪಾರ್ಲಿಮೆಂಟ್‌ನಲ್ಲಿ ಉತ್ತರಪ್ರದೇಶದಲ್ಲಿ ಪಂಜಾಬ್‌ನಲ್ಲಿ, ಮಧ್ಯಪ್ರದೇಶದಲ್ಲಿ, ರಾಜಸ್ಥಾನದಲ್ಲಿ, ಹರಿಯಾಣದಲ್ಲಿ, ರೈತರಿಗಾಗಿರುವ ಸಂಕಷ್ಟದ ಬಗ್ಗೆ ನಿನ್ನೆಯ ದಿನ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ನಿಮ್ಮ ಪಕ್ಷದ ಅಣತಿಯಂತೆ ಮಾನ್ಯ ಮುಖ್ಯಮಂತ್ರಿಗಳು ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರ ಯಾವ್ಯಾವ ಜಿಲ್ಲೆಗಳಲ್ಲಿ ನಮಗೆ ಎಷ್ಟೆಷ್ಟು ಸಹಾಯ ಮಾಡಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಹೋಗಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಎರಡನೆಯದಾಗಿ, ಈ ಬೆಲೆಗಳ ನಿರ್ಧಾರ ಏನಿದೆ, ಈ ನಿರ್ಧಾರ ಮಾಡಿರತಕ್ಕಂಥಾದ್ದು ಸರಿಯಲ್ಲವೆಂದು ನನ್ನ ವಾದ. ಗೌರವಾನ್ವಿತ ಎಲ್ಲಾ ಸದಸ್ಯರು ಸಹ ಅದೇ ಮಾತನ್ನು ಹೇಳಿದ್ದಾರೆ. ಬೆಳೆಗಳ ಬೆಲೆಗಳನ್ನು ನಿರ್ಧಾರ ಮಾಡಿರತಕ್ಕಂಥ ವಿಚಾರದಲ್ಲಿ ಸರಿಯಾಗಿ ಆಗಿಲ್ಲ. ಈಗ ಕೇಂದ್ರ ಸರ್ಕಾರದವರು ಒಂದು ಅಗ್ರಿಕಲ್ಚರಲ್ ಪ್ರಾಡಕ್ಟ್ಸ್ ಪ್ರೈಸ್ ಫಿಕ್ಸೇಷನ್ ಕಮಿಟಿಯನ್ನು ಮಾಡಿದ್ದಾರೆ. ಇವರು

ಅದರ ಮುಂದೆ ಅಪಿಯರ್ ಆಗತಕ್ಕಂಥ ಸಂದರ್ಭದಲ್ಲಿ ನಮ್ಮ ಸರ್ಕಾರದ ಅಧಿಕಾರಿ ಮಿತ್ರರು ನಮ್ಮ ಸರ್ಕಾರದ ಪರವಾಗಿ ಅಪಿಯರ್ ಆಗುತ್ತಾರೆ. ಅನೇಕ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದಿರತಕ್ಕಂಥದ್ದು ಅಧಿಕಾರಿಗಳ ಬದಲಾವಣೆ ಆಗಾಗ ನಾವು ಆರು ಅಥವಾ ಒಂದು ವರ್ಷಕ್ಕೆ ನಮ್ಮ ಅನುಕೂಲಕ್ಕಾಗಿ ಬದಲಾವಣೆ ಮಾಡುತ್ತಿರುತ್ತೇವೆ. ಅದರ ಬದಲಿಗೆ ಒಂದು ಸದನದ ಸಮಿತಿಯನ್ನು ಮಾಡಬೇಕು. ಈ ಒಂದು ಸದನದಲ್ಲಿ ತೆಂಗು ಬೆಲೆ ಬಗ್ಗೆ ಮತ್ತು ರೇಷ್ಮೆ ಬೆಲೆಯ ಬಗ್ಗೆ ಮಾನ್ಯ ವೈ.ಕೆ. ರಾಮಯ್ಯನವರು ಇರಬಹುದು, ಮೆಣಸಿನ ಕಾಯಿ ಬಗ್ಗೆ ಜೋಳದ ಬಗ್ಗೆ ಎಸ್.ಎಸ್. ಪಾಟೀಲ್ ಅವರು ಇರಬಹುದು, ಬತ್ತದ ಬಗ್ಗೆ ಕಂಪಣ್ಣಗೌಡರು ಇರಬಹುದು, ಬೋಸರಾಜು ಇರಬಹುದು. ಈ ರೀತಿಯ ಪಾರ್ಶ್ವಾಂಶಗಳನ್ನು ತಿಳಿದುಕೊಂಡು ರೈತರಿಗೆ ಯಾವ ರೀತಿಯ ಅನುಕೂಲವಾಗಬೇಕು? ಏನು ಬೆಲೆ ನಿಗಧಿಯಾಗಬೇಕು ಎನ್ನುವುದರ ಬಗ್ಗೆ ಸರ್ಕಾರಕ್ಕೆ ಸಲಹೆ ಮಾಡುವುದಕ್ಕೆ ಸಮಿತಿ ಇರಬೇಕು. ಇಲ್ಲದೆ ಇದ್ದರೆ ಇದು ಒಂದು ಶಾಶ್ವತರಾದ ಸಮಸ್ಯೆಯಾಗುತ್ತದೆ. ಆದ್ದರಿಂದ ಸದನದ ; ಸಮಿತಿ ಮಾಡಬೇಕೆನ್ನುವುದು ನನ್ನ ಒತ್ತಾಯ. ಕೇಂದ್ರ ಸರ್ಕಾರಕ್ಕೆ ಇರಬಹುದು, ರಾಜ್ಯ ಸರ್ಕಾರಕ್ಕೆ ಇರಬಹುದು ಸಲಹೆಗಳನ್ನು ಕೊಡುವುದಕ್ಕೆ ಸದನ ಸಮಿತಿಯನ್ನು ಮಾಡಬೇಕೆಂದು ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಬಯಸುತ್ತೇನೆ. ನಾವು ಏಕೆ ಒತ್ತಾಯ ಮಾಡಿದ್ದು ಎಂದರೆ

(ಈ ಹಂತದಲ್ಲಿ ಮಾನ್ಯ ಅಂಜನಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಿಮ್ಮಿಂದ ಏನು ಅಪೇಕ್ಷೆ ಮಾಡಿದ್ದೆವು ಎಂದರೆ ಮಾನ್ಯ ಬೈರೇಗೌಡರು ನಮ್ಮ ಪಕ್ಷದ ಗೌರವಾನ್ವಿತ ಸದಸ್ಯರು ಮಾತನಾಡತಕ್ಕಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು 720 ಐಟಂಗಳನ್ನು ಇಂಪೋರ್ಟ್ ಮಾಡಿಕೊಳ್ಳುವಂತಹುದರ ಮೇಲೆ ರಿಸ್ಟ್ರಿಕ್ಷನ್ ತೆಗೆದುಹಾಕಿದ್ದಾರೆ. ಅದರ ಬಗ್ಗೆ ಎಲ್ಲಾ ಡಿಟೈಲ್ಸ್ ಕೂಡ ಕೊಟ್ಟಿದ್ದಾರೆ. ನಾವು ಒಂದು ನಿರ್ಣಯವನ್ನು ಈ ಒಂದು ಸದನದಲ್ಲಿ ಸರ್ಕಾರದಿಂದ ಮಂಡಿಸಬೇಕಾಗಿತ್ತು. ನಿರ್ಣಯ ಏನೆಂದರೆ ಕೇಂದ್ರ ಸರ್ಕಾರದವರು ಅನಾವಶ್ಯಕವಾಗಿ ಇಂಪೋರ್ಟ್ ಏನು ಮಾಡಿಕೊಳ್ಳುತ್ತಿದ್ದಾರೆ ಅದನ್ನು ತಕ್ಷಣ ನಿಲ್ಲಿಸಬೇಕು ಎನ್ನುವುದನ್ನು ಸದನದಲ್ಲಿ ಇವತ್ತಿಗೂ ಸಹ ಮಂಡಿಸಬೇಕೆನ್ನುವುದು ನನ್ನ ಸಲಹೆ. ಒಂದನೆಯದಾಗಿ ಕೇಂದ್ರ ಸರ್ಕಾರಕ್ಕೆ ಸರ್ವ ಪಕ್ಷಗಳ ನಿಯೋಗವೊಂದು ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಹೋಗಬೇಕು. ಮತ್ತು ಬೆಲೆಯನ್ನು ನಿರ್ಧಾರ ಮಾಡತಕ್ಕಂಥ ವಿಚಾರದಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಕ್ಕೆ ಒಂದು ಸದನ ಸಮಿತಿಯಾಗಬೇಕು. ಮತ್ತು ಮೂರನೆಯದಾಗಿ ಕೇಂದ್ರ ಸರ್ಕಾರ ಅನ್‌ನೆಸೆಸರಿಯಾಗಿ ಅಗ್ರಿಕಲ್ಚರ್ ಪ್ರಾಡಕ್ಟ್ಸ್‌ನ್ನು ಇಂಪೋರ್ಟ್ ಮಾಡಿಕೊಳ್ಳುವುದು ತಮ್ಮ ಗಮನಕ್ಕೆ ಬಂದಿರಬಹುದು. ಆ 720 ಐಟಂಗಳನ್ನು ನಾವು ಸರಿಯಾಗಿ ಓದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ (ಮಾನ್ಯ ಅರಣ್ಯ ಸಚಿವರು) :— ಮೊನ್ನೆ ಅಡ್ಜರ್ನ್‌ಮೆಂಟ್ ಮೋಷನ್ ಪಾರ್ಲಿಮೆಂಟ್‌ನಲ್ಲಿ ಬಂದಾಗ ಕೇಂದ್ರದ ವ್ಯಾಪಾರ ಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದು ನಿನ್ನೆ ಪತ್ರಿಕೆಯಲ್ಲಿ ಬಂದಿತ್ತು. ಅದನ್ನು ನಾವು ಗಮನಿಸಿರಬಹುದು.

ಅವರು ಏನು ಹೇಳಿದ್ದಾರೆ ಎಂದರೆ ಅದರ ಬಗ್ಗೆ ನಾವು ಕೂಡ ವಿಚಾರ ಮಾಡಬೇಕು. ನಾವು ಹೇಳತಕ್ಕಂಥ ಸಲಹೆ ಕೆಲವು ವಸ್ತುಗಳನ್ನು ಇಂಪೋರ್ಟ್ ಮಾಡಿಕೊಳ್ಳುವುದರಿಂದ ನಮಗೆ ತೊಂದರೆ ಆಗುತ್ತಿರುವುದು ನಿರ್ವಿವಾದವಾದಂತಹ ಮಾತು. ಆದರೆ ಡಬ್ಲ್ಯೂ.ಟಿ.ಓ. ಮತ್ತು ಗ್ಯಾಟ್ ಇದರ ಬಗ್ಗೆ ಒಂದು ಅಗ್ರಿಮೆಂಟ್ ಆಗಿ ನಾವು ತುಂಬ ದೂರ ಹೋಗಿ ಸಿಕ್ಕಿಹಾಕಿಕೊಂಡಿದ್ದೇವೆ. ಯಾವ ರೀತಿ ಸಿಕ್ಕಿಹಾಕಿಕೊಂಡಿದ್ದೇವೆ ಎಂದರೆ ಮಳೆ ಬಂದು ಬೆಟ್ಟದ ಮೇಲೆ ಮೆಳ್ಳಿನಲ್ಲಿ ದನ ಸಿಕ್ಕಿಹಾಕಿಕೊಂಡರೆ ಮೇಲೆ ಏಳದ ಹಾಗೆ ಯಾವ ಪರಿಸ್ಥಿತಿ ಬರುತ್ತದೋ ಆ ಪರಿಸ್ಥಿತಿಯಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಈ ಹಿನ್ನಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿ ಪತ್ರ ಬರೆದಿದ್ದರು. ಕೇಂದ್ರ ಸರ್ಕಾರದವರು ಅಗ್ರಿಕಲ್ಚರ್ ಪ್ರಾಡಕ್ಟ್ಸನ್ನು ಇಂಪೋರ್ಟ್ ಮಾಡಿಕೊಂಡರೂ ಕೂಡ ಅವುಗಳ ಮೇಲೆ ಹಾಕಿರತಕ್ಕಂಥ ಡ್ಯೂಟಿ ದೊಡ್ಡ ಪ್ರಮಾಣದಲ್ಲಿ ಇರಬೇಕೆಂದು ಹೇಳಿದ್ದರು. ಮಾನ್ಯ ಕೃಷಿಮಂತ್ರಿಗಳು ಕೂಡ ನಿನ್ನೆ ಹೇಳುವಾಗ ನಾವು ದೊಡ್ಡ ಪ್ರಮಾಣದಲ್ಲಿ ಡ್ಯೂಟಿ ಹಾಕುತ್ತೇವೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಈ ಹಿನ್ನಲೆಯಲ್ಲಿ ಪ್ರಸ್ತಾಪ ಮಾಡಿದರೆ ಅದು ಸೂಕ್ತ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಹಿರಿಯರಾದ ರಂಗನಾಥರವರು ಮಾಡಿದಂತಹ ಹೇಳಿಕೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಾನು ಒಂದು ವಾರದ ಹಿಂದೆ ದೆಹಲಿಗೆ ಹೋಗಿದ್ದಾಗ, ಈ ಸಂದರ್ಭದಲ್ಲಿ ನಾನು ಇಲ್ಲಿ ಹೆಸರುಗಳನ್ನು ಪ್ರಸ್ತಾಪ ಮಾಡುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡಿದಂತಹ ಬಹಳ ದೊಡ್ಡ ಮುಖಂಡರು ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳ ಜೊತೆ ಹೀಗೆ ಅನೌಪಚಾರಿಕವಾಗಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಈ ಅನಾವಶ್ಯಕ ಇಂಪೋರ್ಟ್ಸ್ ಏನಿದೆ ಅದರ ಬಗ್ಗೆ ನಾವು ನಮ್ಮ ಮೈಂಡ್ ಅನ್ನು ಸರಿಯಾಗಿ ಅಪ್ಲೈ ಮಾಡಿಲ್ಲ. ಇದರಲ್ಲಿ ಏನಾಗಿದೆಯೆಂದರೆ ಕೋಳಿ ಕಾಲುಗಳನ್ನು ಇಂಪೋರ್ಟ್ ಮಾಡಿಕೊಳ್ಳುವುದಕ್ಕೆ ನಾವು ಪರ್ಮಿಷನ್ ಕೊಟ್ಟಿದ್ದೇವೆ. ಅಮೇರಿಕಾದಲ್ಲಿ ಕೋಳಿ ಕಾಲುಗಳನ್ನು ಯಾರೂ ತಿನ್ನುವುದಿಲ್ಲ. ಇಲ್ಲಿ ಕೋಳಿ ಕಾಲು 35 ರೂಪಾಯಿಗೆ ಒಂದು ಕೆ.ಜಿ. ಆಗುತ್ತದೆ. ಆದರೆ ಅಲ್ಲಿ 7-8 ರೂಪಾಯಿಗೆ ಸಿಗುತ್ತದೆ. ಇಲ್ಲಿ ನಮ್ಮ ರೈತರು ಕೋಳಿ ಸಾಗಾಣಿಕೆ ಮಾಡತಕ್ಕಂಥ ಜನ ಹೇಗೆ ಬದುಕಬೇಕು? ಈ ರೀತಿಯ ಇಂಪೋರ್ಟ್ ಏನಿದೆ ಅದನ್ನು ತಕ್ಷಣ ಸ್ಕ್ರಾಪ್ ಮಾಡಬೇಕು. ಎಲ್ಲರದೂ ಸಹ ತಪ್ಪಿದೆ. ನಾನು ಒಂದು ಪಕ್ಷವನ್ನು ಎಂದು ಹೇಳುವುದಿಲ್ಲ. ಒಂಬತ್ತು ವರ್ಷಗಳ ಅವಧಿಯಲ್ಲಿ ಇಂಡಿಯಾ ದೇಶದಲ್ಲಿ ಇರತಕ್ಕಂಥ ಎಲ್ಲಾ ಪಕ್ಷಗಳು ಸಹ ಆಡಳಿತವನ್ನು ನಡೆಸಿವೆ. ಆದುದರಿಂದ ಪರಸ್ಪರ ದೋಷಾರೋಪಣೆ ಮಾಡುವ ವಿಚಾರದಲ್ಲಿ ಯಾವುದೇ ರೀತಿಯಾದಂತಹ ಅರ್ಥವಿಲ್ಲವೆಂದು ನಂಬಿರತಕ್ಕಂಥವನು ನಾನು. ಆದುದರಿಂದ ಕೇಂದ್ರ ಸರ್ಕಾರದ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ನಾವು ಸಪೋರ್ಟ್ ಮಾಡುವ ದೃಷ್ಟಿಯಿಂದ ನಮ್ಮ ಒಂದು ಅಸೆಂಬ್ಲಿಯಲ್ಲಿ ಈ ಅನ್‌ನೆಸಸರಿ ಇಂಪೋರ್ಟ್ಸ್ ಅನ್ನು ನಾವು ತಕ್ಷಣ ನಿಲ್ಲಿಸತಕ್ಕಂಥ ಒಂದು ರೆಸಲ್ಯೂಷನ್ ಮಾಡಿದರೆ

ಉಪಯೋಗವಾಗುತ್ತದೆ. ಇನ್ನು ಎರಡನೆಯದಾಗಿ ತಾವು ಒಪ್ಪಿದ್ದು ನಿಜ. ಗ್ಯಾಟ್, ಡಂಕಲ್ ಇದರ ಬಗ್ಗೆ ನಾನು ಡಿಟೈಲಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನನಗೆ ಒಂದು ಸಂತೋಷವಾಯಿತು. ನಮ್ಮ ಮಾನ್ಯ ಜಯಚಂದ್ರರವರು ಅನೇಕ ಉತ್ತಮವಾಗಿರತಕ್ಕಂಥ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ನಾನು ರಾಜಕೀಯವನ್ನು ಇಲ್ಲಿ ಬೆರೆಸುವುದಕ್ಕೆ ಹೋಗುವುದಿಲ್ಲ. ಅವರು ಮಲ್ಟಿ ನ್ಯಾಷನಲ್ ಕಂಪನಿಗಳ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರು. ನಮ್ಮ ದೇಶದಲ್ಲೆ ಕುದುರೆಗಳು ಬರುತ್ತವೆ. ಚೆನ್ನಾಗಿ ಇಲ್ಲಿ ಮೇಯುತ್ತವೆ, ಹೊರದೇಶಕ್ಕೆ ಹೋಗಿಬಿಟ್ಟು ಚಿನ್ನದ ಲದ್ದಿಗಳನ್ನು ಅಲ್ಲಿ ಹಾಕುತ್ತರೆ ಹೊರತು ಇಲ್ಲಿ ಹಾಕುವುದಿಲ್ಲವೆಂದು ಹೇಳಿದರು. ಮಾನ್ಯ ಜಯಚಂದ್ರ ಅವರ ಹೇಳಿಕೆಯಲ್ಲಿ ನೂರಕ್ಕೆ ನೂರರಷ್ಟು ಸತ್ಯವಿದೆ. ಮಾನ್ಯ ಕಾಶಪ್ಪನವರು ಏಕೋ ಎದ್ದು ಹೊರಟುಹೋದರು. ಅವರು ಈ ಸದನಕ್ಕೆ ಸರಿಯಾದ ಮಾಹಿತಿಯನ್ನು ತರಿಸಿಕೊಂಡು ಹೇಳಲಿಲ್ಲ. ಆದರೆ ಅವರು ಒಂದು ಹೇಳಿಕೆಯನ್ನು ಬಿಜಾಪುರದಲ್ಲಿ ಕೊಟ್ಟಿದ್ದರು. ಏನೆಂದರೆ ಈ ರಾಜ್ಯದಲ್ಲೇ ಅಲ್ಲ, ರಾಷ್ಟ್ರದಲ್ಲಿ ಇರತಕ್ಕಂಥ ಎಲ್ಲಾ ಸಣ್ಣ ಕೈಗಾರಿಕೆಗಳು ಟೋಟಲ್ ಆಗಿ ಡೆಸ್ಟ್ರಾಯ್ ಆಗುತ್ತಿವೆ ಎಂದು. ಅದಕ್ಕೆ ಕಾಶಪ್ಪನವರೆ ಕಾರಣವೇ? ಅದಕ್ಕೆ ಅವರು ಕಾರಣ ಅಲ್ಲ. ಆದಕ್ಕೆ ನಾವೇನು ಒಂದು ಪಾಲಿಸಿಯನ್ನು ಅಡಾಪ್ಟ್ ಮಾಡಿಕೊಂಡು ಬಂದಿದ್ದೇವೆ, ಅದರಿಂದ ಈ ರೀತಿಯಾಗಿದೆ. ಆದೇರೀತಿ ಮಾನ್ಯ ಜಯಚಂದ್ರರವರು ಮತ್ತೊಂದು ವಿಚಾರ ಹೇಳಿದರು. ಈಗ ತಾವು ವಿಧೇಯಕಗಳನ್ನು ತಂದಿದ್ದೀರಿ ಅದರಲ್ಲೇ ಒಂದು ವಿಧೇಯಕವನ್ನು ತರುವುದಕ್ಕೆ ನೀವು ಮರೆತುಹೋಗಿದ್ದೀರಿ. ಮಾನ್ಯ ಕಾನೂನು ಸಚಿವರು ಈಗ ಸದನದಲ್ಲಿ ಇಲ್ಲ. ಮಾನ್ಯ ಜಯಚಂದ್ರರವರು ಏನು ಹೇಳಿದರೆಂದರೆ ಬೆಲೆ ನಿಯಂತ್ರಣ ವಿದೇಯಕವನ್ನು ಈ ಸದನದಲ್ಲಿ ನಾವು ಮಂಡಿಸುತ್ತೇವೆಂದು ಹೇಳಿದ್ದರು. ಅದನ್ನು ಮಂಡಿಸಿದ್ದರೆ ನಾವು ನಿಮ್ಮ ಸರ್ಕಾರದ ಕಾಳಜಿಯನ್ನು ಮೆಚ್ಚುತ್ತಿದ್ದೆ. ಇದನ್ನು ಮಾಡುವುದಕ್ಕೆ ಹೊರಟ್ಟಿದ್ದೀರಿ. ಆದರೆ ಆದು ಆಗಿಲ್ಲ. ತಾವು ಈಗ ಮ್ಯಾನಿಫೆಸ್ಟೋದಲ್ಲಿ ಏನು ಹೇಳಿದ್ದೀರಿ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದು ಹೇಳಿದರೆ ನಮ್ಮ ಸಗೀರ್ ಅಹಮದ್‌ರವರಿಗೆ ಬಹಳ ಸಿಟ್ಟು ಬರುತ್ತದೆ. ಆದರಲ್ಲಿ ಏನು ಹೇಳಿದ್ದೀರಿ ಎಂದರೆ ರೈತರು ಎಷ್ಟೆ ಬೆಳೆಯಲಿ 50 ಪರ್ಸೆಂಟ್ ನಾವು ಅಡ್ವಾನ್ಸ್ ತೆಗೆದುಕೊಂಡು ಕೊಂಡುಕೊಳ್ಳುತ್ತೇವೆಂದು ಹೇಳಿದ್ದೀರಿ. ಆಗ ತಾವು ಇರಲಿಲ್ಲ. ಪ್ರೊ: ಚಂದ್ರಶೇಖರ್ ಅವರು ಆ ಮ್ಯಾನಿಫೆಸ್ಟೋ ಬರೆಯುವ ಕಮಿಟಿಯಲ್ಲಿ ಇದ್ದರು ಎಂದು ನಾನು ಭಾವಿಸಿಕೊಂಡಿದ್ದೇನೆ. ತಪ್ಪಿದ್ದರೆ ತಿದ್ದಿ. ಆ ಕಮಿಟಿಯಲ್ಲಿ ಪ್ರೊ: ಚಂದ್ರಶೇಖರ್ ಇದ್ದರು. ಅದರಲ್ಲಿ ಇವರು ಬರೆದಿದ್ದಾರೆ. ಎಷ್ಟು ಬೆಳೆಯುತ್ತೀರಿ ತೆಂಗನ್ನು ಕಳುಹಿಸಿಕೊಡಿ ನಮ್ಮ ಮನೆಗೆ ಅದರಲ್ಲಿ 50 ಪರ್‌ಸೆಂಟ್ ಹಣವನ್ನು ನಾವು ಅಡ್ವಾನ್ಸ್ ಕೊಡುತ್ತೇವೆ ಎಂದು. It is ever possible to do it? This is all fooling the farmers and the people. ಮ್ಯಾನಿಫೆಸ್ಟೋ ಯಾರೂ ಓದಿ ಓಟು ಹಾಕುವುದಿಲ್ಲ. ಆದರೆ ಇದು ಸರಿಯಲ್ಲ.

ಈಗ ಏನು ನಾವು ಮಾಡಬಹುದು. ಅಗ್ರಿಕಲ್ಚರಲ್ ಪ್ರಾಡಕ್ಟ್ಸ್‌ಗಳನ್ನು ಡಬ್ಲ್ಯೂಟಿಓನಿಂದ ಹೊರಗಡೆ ಬರುವುದಕ್ಕೆ ಸಾಧ್ಯವಿದೆ. ನಿತೀಶ್‌ಕುಮಾರ್ ಅವರು ಕೇಂದ್ರ ಸರ್ಕಾರದ ಮಂತ್ರಿಗಳು, ಅವರ ಜೊತೆಯಲ್ಲಿ ನಿಮಗೆ ಭಿನ್ನಾಭಿಪ್ರಾಗಳು ಇರಬಹುದು. ಆದರೆ ಫಾರ್ಮಿಂಗ್ ಕಮ್ಯೂನಿಟಿ ಬಗ್ಗೆ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಅವರಿಗೆ ಇರತಕ್ಕಂಥ ಕಮಿಟ್‌ಮೆಂಟ್‌ನ್ನು ಯಾರೂ ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಸೆಪ್ಟೆಂಬರ್ 29ನೇ ತಾರೀಖು ಈ ತಜ್ಞರುಗಳು ಮತ್ತು ಕೇಂದ್ರ ಸರ್ಕಾರದ ಅನೇಕ ಮಂತ್ರಿಗಳು ರಾಜಕೀಯ ಪಕ್ಷದ ಮುಖಂಡರುಗಳನ್ನು ಕರೆಸಿ ಒಂದು ಕಾನ್‌ಫರೆನ್ಸ್ ಮಾಡಿ ಅಗ್ರಿಕಲ್ಚರಲ್ ಪ್ರಾಡಕ್ಟ್ಸ್ ಅನ್ನು ಡಬ್ಲ್ಯೂಟಿಓನಿಂದ ಹೊರಗಡೆ ಬರುವುದಕ್ಕೆ ಸಾಧ್ಯ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಬೇಕು ಎಂದು ಆದರ ಹತ್ತಿರ ಹೋಗಿದ್ದಾರೆ. ಆದರೆ ನಾನು ಏನು ಹೇಳುತ್ತೇನೆ. ಆ ತರಹದ ಚರ್ಚೆ ಇಲ್ಲಿ ಆಗಬೇಕೆಂದು ನಾನು ಬಯಸುತ್ತೇನೆ. ಅನೇಕ ಜನ ಇದ್ದರು. ಮಾನ್ಯ ಪ್ರೊ: ನಂಜುಂಡಸ್ವಾಮಿ ಈ ಸದನದಲ್ಲಿ ಇದ್ದರು. ಅವರನ್ನು ನಾನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುತ್ತೇನೆ. ಅವರು ಇದ್ದಂತಹ ಸಂದರ್ಭದಲ್ಲಿ ಗ್ಯಾಟ್ ಎಂದರೆ ಏನು? ಡಂಕಲ್ ಎಂದರೆ ಏನು? ಇದನ್ನು 1948ರಲ್ಲಿ ಯಾರು ಮಾಡಿದರು? 1968ರಲ್ಲಿ ಅಮೇರಿಕಾದಲ್ಲಿ ಫೈಲ್ ಮಾಡೋವರೆಗೂ ಸಹ ಏಕೆ ಕಾದರು? ಈಗ ಏಕೆ ಅವರು ಕಾತುರರಿದ್ದಾರೆ? ಚೈನಾ ಇಷ್ಟು ವರ್ಷ ಆದನಂತರ ಡಬ್ಲ್ಯೂಟಿಓ ಎಂಟರ್ ಆಗಬೇಕೆಂದು ಹೇಳುವಂತಹ ಅವಶ್ಯಕತೆ ಏನಿದೆ? ಡಬ್ಲ್ಯೂಟಿಓನಿಂದ ಹೊರಗಡೆ ಇದ್ದರೆ ನಮ್ಮ ಸಾಫ್ಟ್‌ವೇರ್ ತೆಗೆದುಕೊಳ್ಳುವವರು ಯಾರು? ಈ ಪ್ರಶ್ನೆಗಳು ಬರುತ್ತವೆ.

ಪ್ರೊ: ಬಿ.ಕೆ. ಚಂದ್ರಶೇಖರ್ (ವಾರ್ತಾ ಮತ್ತು ಪ್ರಚಾರ ಸಚಿವರು) :— ಮಾನ್ಯ ಚೇರ್ಮನ್‌ರವರೆ, ಮಾನ್ಯ ಸಿಂಧ್ಯರವರು ಈ ವಿಷಯ ಸದನದಲ್ಲಿ ಚರ್ಚೆಯಾಗಬೇಕೆಂದು ಹೇಳಿದಂಥಾದ್ದು ಬಹಳ ಅತ್ಯುತ್ತಮವಾದಂತಹ ಸಲಹೆಯಾಗಿದೆ. ಇದು ಬಹಳ ವರ್ಷಗಳಿಂದ ಈ ವಿಚಾರ ಬಂದಾಗ ರಾಜ್ಯ ಶಾಸಕಾಂಗ ಸಭೆಗಳಲ್ಲಿ ಏನೋ ಒಂದು ರೀತಿಯ ಸಂಕೋಚ ಇರುತ್ತಿತ್ತು. ಇದನ್ನು ಕೇಂದ್ರ ಸರ್ಕಾರ ಮಾಡುವಂಥಾದ್ದು, ನಮಗೇಕೆ ಎನ್ನುವ ಭಾವನೆ ಇರುತ್ತಿತ್ತು. ಆದರೆ ಜನರು ಎಲ್ಲಾ ವಾಸ ಮಾಡುವಂಥಾದ್ದು ರಾಜ್ಯಗಳಲ್ಲಿ, ಕೇಂದ್ರ ಎಂದು ಬೇರೆ ಯಾವ ಪ್ರದೇಶವೂ ಇಲ್ಲ. ಆದರೆ ಕೇಂದ್ರ ಸರ್ಕಾರವೆಂದು ಮಾತ್ರ ಇರುವಂಥಾದ್ದು. ನಾನು ಒಂದೇ ಒಂದು ವಿಚಾರವನ್ನು ಮಾನ್ಯ ಸಿಂಧ್ಯರವರ ಗಮನಕ್ಕೆ ತರುವಂಥಾದ್ದು ಏನೆಂದರೆ ಡಬ್ಲ್ಯೂಟಿಓನಿಂದ ಹೊರಗೆ ಬರುವಂಥಾದ್ದಕ್ಕೆ ಸಾಧ್ಯವಿದೆ ಎನ್ನುವಂತಹ ಮಾತನ್ನು ಹೇಳಿದ್ದೀರಿ. ನನಗೆ ಇರುವ ಮಾಹಿತಿಯಲ್ಲಿ ತಾವು ಹೇಳುವಂಥಾದ್ದು ಸರಿಯೆಂದು ಅನಿಸುತ್ತದೆ. ಆದರೆ ಇನ್ನು ನಮಗೆ ಇಷ್ಟು ವರ್ಷಗಳು ಇದ್ದಾಗ ಕೇಂದ್ರ ಸರ್ಕಾರದವರು ಏಳು ನೂರು ಐಟಂಗಳನ್ನು ಓ.ಜಿ.ಯಲ್ಲಿ ತಂದದ್ದು ಏಕೆ? ಎನ್ನುವ ಪ್ರಶ್ನೆಯನ್ನು ಕೇಳಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ, ಕೇಂದ್ರದಲ್ಲಿ ಸರ್ಕಾರ ಬಂದು ಎಷ್ಟು ವರ್ಷಗಳಾಯಿತು? ಮಾನ್ಯ ನಿತೀಶ್ ಕುಮಾರ್‌ರವರು

ಸೆಪ್ಟೆಂಬರ್ ತಿಂಗಳಲ್ಲಿ ಸಭೆಯನ್ನು ಕರೆದದ್ದು ಒಪ್ಪುತ್ತೇನೆ. ಇವರು ಇಷ್ಟು ವರ್ಷದಲ್ಲಿ ಅಂದರೆ ಒಂದುವರೆ ವರ್ಷದಲ್ಲಿ, ಅಗ್ರಿಕಲ್ಚರ್ ಐಟಂಗಳನ್ನು ನೆಗೋಷಿಯೇಟ್ ಮಾಡುವುದಕ್ಕಾಗಲಿಲ್ಲವೇ? ಇದು ಏನಾಗುತ್ತದೆಂದರೆ ಸಾಮಾನ್ಯ ಜನರಿಗೆ ರಾಜ್ಯ ಸರ್ಕಾರ ಕಾಣುತ್ತದೆ. ಇಲ್ಲಿ ನಮ್ಮ ಸರ್ಕಾರ; ತಮಿಳುನಾಡಿನಲ್ಲಿ ಅವರ ಸರ್ಕಾರ ಕಾಣುತ್ತದೆ. ರೈತರು ನಮ್ಮನ್ನು ದೂಷಣೆ ಮಾಡುತ್ತಾರೆ. ಇಲ್ಲಿ ಶೇಕಡ 60, 70ರಷ್ಟು ಕೆಲಸವನ್ನು ಕೇಂದ್ರ ಸರ್ಕಾರದವರು ಮಾಡಬೇಕಾಗುತ್ತದೆ. ಹಾರ್ಡ್ ಬಾರ್ಗೈನಿಂಗ್ ಮಾಡಬೇಕು, surplus stocks ಇವತ್ತು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಲ್ಲಿ ಇಟ್ಟುಕೊಳ್ಳುವುದಕ್ಕೆ ಆಗುತ್ತಿಲ್ಲ. ಆದರೂ ಇನ್ನು ಹಲವಾರು ಐಟಂಗಳನ್ನು ತರಿಸಿಕೊಳ್ಳುತ್ತಿದ್ದೇವಲ್ಲಾ, ಇವುಗಳನ್ನು ಏಕೆ ತರಿಸಬೇಕು? ನಾನು ಇದನ್ನು ಯಾವುದೇ ಪಕ್ಷದ ವತಿಯಿಂದ ಮಾತನಾಡುತ್ತಿಲ್ಲ, ನಾನು ಮಾನ್ಯ ಸದಸ್ಯರು ಹೇಳಿದಂತಹ ವಿಚಾರವನ್ನು ಸ್ವಾಗತ ಮಾಡುತ್ತೇನೆ. ಎರಡು ಜವಾಬ್ದಾರಿಗಳು ಇದೆ. ನಾವು ಜರೂರಾಗಿ ಏನು ಮಾಡಬಹುದೆಂಬ ಬಗ್ಗೆ ಸಚಿವ ಸಂಪುಟದಲ್ಲಿ ನೂರು ಕೋಟಿ ರೂಪಾಯಿಗಳನ್ನಾದರೂ ಕೊಡಬೇಕೆಂಬ ಬಗ್ಗೆ ನಿರ್ಧಾರ ಮಾಡಿದ್ದೇವೆ. ಇದು ಸಾಲುವುದಿಲ್ಲವೆಂದು ಹೇಳುತ್ತಾರೆ, ಅದು ನಿಜ. ಆದರೆ ರಾಜ್ಯ ಸರ್ಕಾರದ ಬೊಕ್ಕಸದಿಂದ ನೂರು ಕೋಟಿ ರೂಪಾಯಿಗಳನ್ನು ಕೊಡುವಂಥಾದ್ದು ಅಪರೂಪವೇ, ಕೇಂದ್ರ ಸರ್ಕಾರದವರು ಏನು ಮಾಡಬೇಕೆನ್ನುವ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರಿಗೂ ಮತ್ತು ಅವರ ಪಕ್ಷದ ಸದಸ್ಯರಿಗೂ ಭಿನ್ನಹ ಮಾಡಿಕೊಳ್ಳುತ್ತೇನೆ. ತಾವು ದಯವಿಟ್ಟು ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ತರಬೇಕು, ಅವರು ಡಬ್ಲ್ಯೂಟಿಓ ಫ್ರೇಮ್‌ವರ್ಕ್‌ನಲ್ಲಿ ನೆಗೋಷಿಯೇಟ್ ಮಾಡಲಿ. ನಾವು ಅಲ್ಲಿಂದ ಬೇಜವಾಬ್ದಾರಿಯಿಂದ ಹೊರಗೆ ಬಂದುಬಿಡೋಣವೆನ್ನುವ ಮಾತನ್ನು ಹೇಳುವುದಿಲ್ಲ. ಮಾನ್ಯ ಸಿಂಧ್ಯರವರು ಹೇಳಿದಂತಹ ಮಾತು ಸರಿಯಾಗಿದೆ, ಕೆಲವು ಐಟಂಗಳನ್ನು ಇಲ್ಲಿ ನೆಗೋಷಿಯೇಟ್ ಮಾಡುವ ಅಗತ್ಯವಿಲ್ಲ; ಅಥವಾ ಹಾರ್ಡ್ ಬಾರ್ಗೈನಿಂಗ್ ಮಾಡಬೇಕೆನ್ನುವುದು. ಈ ವಿಚಾರ ಇಲ್ಲೂ ಚರ್ಚೆಯಾದರೆ ಒಳ್ಳೆಯದೆಂದು ನಾನು ಹೇಳುವುದಕ್ಕಿಚ್ಛಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಚೇರ್ಮನ್‌ರವರೇ, ಮಾನ್ಯ ಚಂದ್ರಶೇಖರ್‌ರವರು ಏನು ಒಂದು ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ, ಮತ್ತೆ ಮಾನ್ಯ ಸಿಂಧ್ಯರವರು ತಮ್ಮ ಅಭಿಪ್ರಾಯಗಳನ್ನು ಏನು ವ್ಯಕ್ತ ಮಾಡಿದ್ದಾರೆ, ಈ ವಿಚಾರಗಳಿಗೆ ಕೇವಲ ಕೇಂದ್ರ ಸರ್ಕಾರವನ್ನು ಅಥವಾ ರಾಜ್ಯ ಸರ್ಕಾರದ ಮೇಲೆ ಹಾಕುವಂತಹ ಪ್ರಶ್ನೆಯಲ್ಲ. ನಾನು ಪ್ರಥಮವಾಗಿ ಈ ವಿಷಯವನ್ನು ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಇವೆಲ್ಲವನ್ನು ಪ್ರಸ್ತಾಪ ಮಾಡಿದ್ದೇನೆ. 1991ರಂದು ಡಾ: ಮನಮೋಹನ್‌ಸಿಂಗ್‌ರವರು ಆರ್ಥಿಕ ಸುಧಾರಣೆ ಎಂಬುದನ್ನು ಏನು ಜಾರಿಗೆ ತಂದರು, ಡಬ್ಲ್ಯೂಟಿಓ ಸಹಿ ಮಾಡುವಂಥಾದ್ದು, ಡಂಕೆಲ್ ಪ್ರಸ್ತಾಪ, ಇವಕ್ಕೆಲ್ಲಾ ಸಂಬಂಧಪಟ್ಟಂತೆ ಇದು ಇದೆ. ಇವತ್ತು ಕೇಂದ್ರ ಸರ್ಕಾರದ ಮೇಲೂ ನಾವೆಲ್ಲರೂ ಸೇರಿ ಒತ್ತಡವನ್ನು ತರಬೇಕಾಗುತ್ತದೆ. ಈಗ ಆಮದು ಬರುವಂತಹ ವಸ್ತುಗಳ ಮೇಲೆ ಸುಂಕ

ಹಾಕುವಂಥದ್ದು ಮತ್ತು ತಕ್ಷಣ ಇದು ಜಾರಿಗೆ ಚಟುವಟಿಕೆಯಾಗುವಂಥದ್ದು ಮಾಡಬೇಕಾಗುತ್ತದೆ. ಮೊನ್ನೆ ದಿವಸ ಲೋಕಸಭೆಯಲ್ಲಿ, ಮಾನ್ಯ ನಿತೀಶ್‌ಕುಮಾರ್‌ರವರು ನಿಲುವಳಿ ಸೂಚನೆಯ ಮೇಲೆ ಉತ್ತರವನ್ನು ಕೊಟ್ಟಿರುವಂಥದ್ದರ ಪೂರ್ಣ ಮಾಹಿತಿಯನ್ನು ತರಿಸುತ್ತಿದ್ದೇನೆ. ನಾವು ಪತ್ರಿಕೆಯಲ್ಲಿ ನೋಡಿರುವುದನ್ನು, ನಮ್ಮ ನಾಯಕರು ನಿನ್ನೆ ದಿವಸ ಏನು ಹೇಳಿದರೆಂದರೆ ಮಾನ್ಯ ನಿತೀಶ್ ಕುಮಾರ್‌ರವರು ಬಹಳ ವಿಸ್ತಾರವಾಗಿ ಭಾಷಣವನ್ನು ಮಾಡಿದರೆಂದು ಹೇಳಿದ್ದಾರೆ. ಆದುದರಿಂದ ನಾನು ಅದರ ಪೂರ್ಣ ವರದಿಯನ್ನು ತರಿಸುತ್ತಿದ್ದೇನೆ. ಇದರ ಬಗ್ಗೆ ಮೀಟಿಂಗ್ ನಡೆಯುತ್ತಿದೆಯಂತೆ, ನಮ್ಮ ಪಾರ್ಟಿ ಲೆವೆಲ್‌ನಲ್ಲೂ ಸಹಿತ ಸಾಕಷ್ಟು ಚರ್ಚೆಯಾಗುತ್ತಿದೆ. ಆದುದರಿಂದ ಈ ತಿಂಗಳ 27ನೇ ತಾರೀಖಿನಂದು ಮಾನ್ಯ ಆಹಾರ ಸಚಿವರು ಮತ್ತು ಇನ್ನಿತರರು ಡೆಲಿಗೇಶನ್ ದೆಹಲಿಗೆ ಹೋಗುತ್ತಿದೆ. ಮಾನ್ಯ ಸಿಂಧ್ಯರವರು ಬರುತ್ತಾರೆಂದು ಕಾಣುತ್ತದೆ, ನಮ್ಮ ಜೊತೆಗೆ ಮಾನ್ಯ ಮುಖ್ಯಮಂತ್ರಿಯವರು ನಮ್ಮೊಂದಿಗೆ ಬಂದರೆ ಒಳ್ಳೆಯದು. ಇದಕ್ಕೆ ಮಿನಿಮಮ್ ಸಪೋರ್ಟ್ ಪ್ರೈಸ್ ಫಿಕ್ಸ್ ಮಾಡುವ ಬಗ್ಗೆ ಮಾತನಾಡಬಹುದು. ನಮ್ಮ ರಾಯಚೂರು, ಗುಲ್ಬರ್ಗಾದಲ್ಲಿ ತೊಗರಿ ಬೇಳೆ, ಮೆಕ್ಕೆಜೋಳದ ಬಗ್ಗೆ ಇವತ್ತಿನ ಮಿನಿಮಮ್ ಪ್ರೈಸ್ ಏನು ನಿಗದಿ ಮಾಡಿದ್ದೇವೆ, ಆ ರೀತಿಯಲ್ಲಿ ಪರ್ಚೇಸ್ ಮಾಡಿದರೂ ನಮ್ಮ ರೈತರಿಗೆ ಅನುಕೂಲವಾಗುತ್ತಿಲ್ಲ. ಅವರ ಖರ್ಚು ವೆಚ್ಚ ಇವೆಲ್ಲವನ್ನೂ ನೋಡಿದರೂ ರೈತರು ಉದ್ಧಾರವಾಗುತ್ತಿಲ್ಲ. ಆದುದರಿಂದ ಈ ಮಿನಿಮಮ್ ಸಪೋರ್ಟ್ ಪ್ರೈಸ್ ಇಂಕ್ರೀಸ್ ಮಾಡುವ ಬಗ್ಗೆಯಾಗಲಿ, ಅಥವಾ ಆಮದು ಆಗುವ ವಸ್ತುಗಳಿಗೆ ಹೆಚ್ಚಿನ ಸುಂಕವನ್ನು ಹಾಕುವಂಥದ್ದು ಆಗಬೇಕಾಗಿದೆ. ಇದಕ್ಕೆ ಇಡೀ ದೇಶದ ವಾತಾವರಣವನ್ನು ತಿಳಿದುಕೊಂಡು ಎಲ್ಲೆಲ್ಲಿ ಏನು ಬೆಳೆದಿದ್ದಾರೆಂಬ ಬಗ್ಗೆ ತಿಳಿದುಕೊಂಡು ಮಾಡಬೇಕಾಗಿದೆ.

ಚೇರ್ಮನ್ :— ತಮ್ಮಲ್ಲಿ ನಾನು ಕ್ಲಾರಿಫಿಕೇಶನ್ ಮಾಡುವುದು ಏನೆಂದರೆ, ಈಗ ತಾವು ಏನು ರಿಕ್ವೆಸ್ಟ್ ಮಾಡುತ್ತಿದ್ದೀರಿ, ಅದು ರಾಜ್ಯ ಸರ್ಕಾರದಿಂದ, ಮಾನ್ಯ ಮುಖ್ಯಮಂತ್ರಿಯವರಿಂದ, ಕೇಂದ್ರ ಸರ್ಕಾರಕ್ಕೆ ಡೆಲಿಗೇಶನ್ ಹೋಗೋಣ, ಸಂಬಂಧಪಟ್ಟಂಥ ಮಂತ್ರಿಗಳನ್ನು ಭೇಟಿಮಾಡೋಣ ಎಂದು ಏನು ಹೇಳುತ್ತಿದ್ದೀರಿ, ಮತ್ತೆ ಕೇಂದ್ರ ಸರ್ಕಾರದಿಂದ ರೈತರಿಗೆ ಆಗುವ ತೊಂದರೆ ತಪ್ಪಿಸಲು ಯಾವ್ಯಾವ ವಸ್ತುಗಳನ್ನು ಹೊರಗೆ ಇಡಬೇಕೆಂಬ ವಿಚಾರವನ್ನು ತಾವು ಅಲ್ಲಿ ಮಂಡನೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಚೇರ್ಮನ್‌ರವರೆ, ಈಗ ಏನು ಪ್ರಸ್ತಾಪ ಮಾಡಿದ್ದಾರೆ, ಇದರ ಬಗ್ಗೆ ಚರ್ಚೆಯಾಗಬೇಕು, ಮತ್ತು ಹೆಚ್ಚು ಒತ್ತಡವನ್ನು ಕೊಡಬೇಕು. ಇದಕ್ಕೆ ನಾವು ಕೇಂದ್ರ ಸರ್ಕಾರದ ಬಳಿಗೆ ಡೆಲಿಗೇಶನ್ ಹೋಗುತ್ತಿದ್ದೇವೆ, ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ನಮ್ಮೊಡನೆ ಬಂದರೆ ಒಳ್ಳೆಯದು. ಅಲ್ಲಿ ಮಾನ್ಯ ನಿತೀಶ್ ಕುಮಾರ್‌ರವರನ್ನು ಮತ್ತು ಆಹಾರ ಸಚಿವರಾದ ಮಾನ್ಯ ಶಾಂತಕುಮಾರ್‌ರವರನ್ನು ಭೇಟಿ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಚೇರ್ಮನ್‌ರವರೆ, ನಾನು ಹೇಳಿದ್ದು ಅದನ್ನೇ, ಇದು ರಾಜ್ಯ ಸರ್ಕಾರದಿಂದ ಬಹಳ ಮಹತ್ವವಾದಂತಹ ವಿಚಾರವಾಗಿದೆ,. ಪ್ರೊ: ಬಿ.ಕೆ. ಚಂದ್ರಶೇಖರ್‌ರವರು ಹೇಳಿದಂತಹ ಪ್ರತಿಯೊಂದು ಪಾಯಿಂಟ್‌ಗಳನ್ನು ನಾನು ಅಪ್ರಿಸಿಯೇಟ್ ಮಾಡುತ್ತೇನೆ. In this House, we are missing people like Prof. B.K. Chandrashekar and Prof. Nanjundaswamy. ವೈಚಾರಿಕವಾಗಿ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಇರಬಹುದು, ಆದರೆ ಇದರ ಬಗ್ಗೆ ಡಿಬೇಟ್ ಆಗಬೇಕಾಗಿದೆ. ಈಗ ದೆಹಲಿಗೆ ಹೋಗುವಂತಹ ಡೆಲಿಗೇಶನ್ ನಾಯಕತ್ವವನ್ನು ಮಾನ್ಯ ಮುಖ್ಯಮಂತ್ರಿಯವರು ಹೊರಬೇಕು ಇಲ್ಲದಿದ್ದರೆ ಇದಕ್ಕೆ ಸಿರಿಯಸ್‌ನೆಸ್ ಬರುವುದಿಲ್ಲವೆಂಬ ಮಾತನ್ನು ಹೇಳುತ್ತೇನೆ, ಮತ್ತೆ ಬೆಲೆ ನಿರ್ಧಾರ ಮಾಡುವಂಥಾದ್ದಕ್ಕೆ ಒಂದು ಸದನ ಸಮಿತಿಯನ್ನು ರಚನೆ ಮಾಡಿ, ಮತ್ತೆ ಅನಾವಶ್ಯಕವಾಗಿ ವಸ್ತುಗಳನ್ನು ತರಿಸಿಕೊಳ್ಳುವುದರ ಬಗ್ಗೆ ತಕ್ಷಣ ನಿಲ್ಲಿಸುವುದಕ್ಕೆ ಸದನದಲ್ಲಿ ಇವತ್ತು ಸಂಜೆಯೊಳಗೆ ಒಂದು ರೆಸಲ್ಯೂಶನ್ ಪಾಸ್ ಮಾಡಿ, ಮತ್ತೆ ಡಬ್ಲ್ಯೂ.ಟಿ.ಓ.ನಿಂದ ಅಗ್ರಿಕಲ್ಚರ್ ಪ್ರಾಡಕ್ಟ್ಸ್ ಹೊರಗಡೆ ತೆಗೆಯುವುದರ ಬಗ್ಗೆ ಒಂದು ನಿರ್ಣಯವನ್ನು ಕೇಂದ್ರ ಸರ್ಕಾರದ ಮೇಲೆ ತರಬೇಕಾಗುತ್ತದೆ. ಕೆಲವರು ಆ ರೀತಿಯಾಗಿ ರಿಸ್ಟ್ರಿಕ್ಷನ್ ಹಾಕಿದರೆ ನಾವು ಡಬ್ಲ್ಯೂ.ಟಿ.ಓ.ನಿಂದ ಹೊರಗಡೆ ಬಂದು ಬಿಟ್ಟರೆ ನಾವು ಇಡೀ ಇಂಡಿಯಾದಲ್ಲೇ ಬೆಂಗಳೂರಿನಲ್ಲಿ ಅಷ್ಟೊಂದು ಸಾಫ್ಟ್‌ವೇರ್ ಮಾಡುತ್ತಿದ್ದೇವೆ. ಅದನ್ನು ಯಾರು ತೆಗೆದುಕೊಳ್ಳುತ್ತಾರೆಂದು ಹೇಳುತ್ತಿದ್ದಾರೆ, ಅಂದಹ ವಾದವನ್ನು ಮಂಡಿಸುವಂತಹ ಜನರು ಸಹಿತ ಇದ್ದಾರೆ. There is no doubt. We are leading in the software industry. ಆದರೆ ಸಾಫ್ಟ್‌ವೇರ್ ಇಂಡಸ್ಟ್ರಿಯನ್ನು ನಡೆಸುತ್ತಿರುವವರು 0.5 ಪರ್ಸೆಂಟ್ ಮಾತ್ರ ಇರುವಂಥಾದ್ದು. ಅದು ಆಗಬೇಕು, ಅದು ಆಗಬಾರದೆಂದು ಹೇಳುವುದಿಲ್ಲ, ನಮ್ಮ ಬೆಂಗಳೂರಿನವರಿಗೆ ಗೊತ್ತಿರುವಷ್ಟು ಇಂಗ್ಲೀಷ್ ಭಾಷೆ ಮತ್ತು ಇಂಡಿಯದವರಿಗೆ ಗೊತ್ತಿರುವಷ್ಟು ಇಂಗ್ಲೀಷ್, ನಮಗೆ ಇರುವಷ್ಟು ಬುದ್ಧಿವಂತಿಕೆ ಪ್ರಪಂಚದಲ್ಲಿ ಯಾರಿಗೂ ಇಲ್ಲ, ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ದಿವಸ ಸಭೆಯಲ್ಲಿ ಒಂದು ಮಾತನ್ನು ಹೇಳಿದರು. ಮುಂದಿನ ಒಲಂಪಿಕ್ಸ್ ಅನ್ನು 2008ರಂದು ಬೀಜಿಂಗ್‌ನಲ್ಲಿ ಮಾಡುತ್ತಿದ್ದಾರೆಂದು ಹೇಳಿದರು. ಇವರು 2008ನಲ್ಲಿ ಒಲಂಪಿಕ್ಸ್ ಮಾಡಬೇಕೆಂದರೆ ಇವತ್ತಿನಿಂದ ಎಂಟು ವರ್ಷಗಳ ಕಾಲಾವಧಿಯಲ್ಲಿ ಯಾರ್‍ಯಾರು ಇದಕ್ಕೆ ತಯಾರಿ ಮಾಡುತ್ತಾರೆ, ಅವರೆಲ್ಲರೂ ಇಂಗ್ಲೀಷ್ ಭಾಷೆಯನ್ನು ಕಲಿತುಕೊಳ್ಳಬೇಕೆಂದು ಹೇಳಿದ್ದಾರೆ. They have decided to do that. ನಾವು ಇಂಗ್ಲಿಷ್ ಭಾಷೆಯಲ್ಲಿ ಬಹಳ ಮುಂದೆ ಇದ್ದೇವೆ. ಇದು ಇಂಗ್ಲೀಷ್ ಭಾಷೆ ಗೊತ್ತಿರುವವರಿಗೆ ಮಾತ್ರ ಉಪಯೋಗವಾಗುತ್ತದೆ, ಬೇರೆ ಯಾರಿಗೂ ಇದು ಉಪಯೋಗವಾಗುವುದಿಲ್ಲ. They have to buy from us. There is no alternative for them. ಇದು ಬಹಳ ಅವಶ್ಯಕತೆ ಇದ್ದು ಇದು ಆಗಬೇಕಾಗುತ್ತದೆ. ಇನ್ನು ಟ್ಯಾರೀಫ್ ಅನ್ನು ಇನ್‌ಕ್ರೀಸ್ ಮಾಡುವುದರ ಬಗ್ಗೆ, ಈಗ ಆಮದು ಮಾಡಿಕೊಳ್ಳುವಂಥಾದ್ದು ಏನಿದೆ,

ಆದರಲ್ಲಿ ಕೆಲವಕ್ಕೆ ನಾವು ಜಾಸ್ತಿ ಮಾಡಬೇಕಾಗುತ್ತದೆ, ಅದಕ್ಕೆ ಬೇರೆ ಮಾರ್ಗವಿಲ್ಲ. ಇನ್ನು ನಾನು ಮತ್ತೊಂದು ವಿಚಾರವನ್ನು ಒತ್ತಾಯ ಮಾಡುವುದೇನೆಂದರೆ ತಾವು ಚುನಾವಣಾ ಪ್ರಣಾಳಿಕೆಯಲ್ಲಿ ಶೇಕಡ 50ರಷ್ಟು ಮುಂಗಡವಾಗಿ ಹಣವನ್ನು ಕೊಟ್ಟು ರೈತರ ಉತ್ಪನ್ನಗಳನ್ನು ಪರ್ಚೇಸ್ ಮಾಡುವಂಥಾದ್ದು. ನೀವು ಇದನ್ನು ಹೇಳಿರುವಂಥಾದ್ದು ಈ 12 ತಿಂಗಳಲ್ಲಿ ಎಷ್ಟು ಸತ್ಯವೆಂದು ಪ್ರತಿಪಾದನೆಯಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್ (ಮಾನ್ಯ ಅರಣ್ಯ ಸಚಿವರು) :— ಅದನ್ನು ಹೇಗೆ ಮಾಡಬೇಕೆಂದು ಯೋಚನೆ ಮಾಡಿದರೆ ಕಷ್ಟವಾಗುವುದಲ್ಲ.

ಶ್ರೀ ಪಿ.ಜಿಆರ್ ಸಿಂಧ್ಯ :— ತಾವು ಯೋಜನೆ ಮಾಡಿ 13 ತಿಂಗಳುಗಳು ಕಳೆದಿವೆಯಲ್ಲಾ.. ಇದರಿಂದ ಮಾನ್ಯ ಬೋಸ್‌ರಾಜ್‌ರವರಿಗೆ ತೊಂದರೆಯಾಗಿದೆಯಲ್ಲಾ, ಅವರು ಒಬ್ಬ ನಿಷ್ಠಾವಂತ ಕಾಂಗ್ರೆಸ್ ವರ್ಕರ್ ಆಗಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ :— ಮಾನ್ಯ ಸಿಂಧ್ಯರವರೇ, ನಾನು ಒಂದು ಸಲಹೆ ಹೇಳುತ್ತೇನೆ. ಗ್ರೋಥ್ ಸೆಂಟರ್ಸ್ ಎಲ್ಲಿದೆ ಅಲ್ಲಿ ದೊಡ್ಡ ದೊಡ್ಡ ವೇರ್‌ಹೌಸ್‌ಗಳನ್ನು ಮಾಡಿ ರೈತರು ಅದನ್ನು ಅಲ್ಲಿ ಇಟ್ಟು ಬ್ಯಾಂಕಿನಿಂದ ಶೇಕಡ 50ರಷ್ಟು ಹಣವನ್ನು ಕೊಟ್ಟರೆ it will not be buyer's market: ಆಗ ಬೈಯರ್ಸ್ ಮಾರ್ಕೆಟ್ ಆಗುವುದಿಲ್ಲ, ಸೇಲರ್ಸ್ ಮಾರ್ಕೆಟ್ ಆಗುತ್ತದೆ. ಅದನ್ನು ನಾವು ಮಾಡಲಿಲ್ಲ. ಈಗ ಸಹಕಾರಿ ಬೋರ್ಡಿನಲ್ಲಿ ದುಡ್ಡು ಇದೆ, ಸಹಕಾರಿ ಕ್ಷೇತ್ರದಲ್ಲಿ ದುಡ್ಡು ಇದೆ, ಬೇರೆ ಹಣ ಇದೆ. ಆದರೆ ಅದನ್ನು ನಾವು ಮಾಡಲಿಲ್ಲ, ಅದನ್ನು ಮಾಡಿದರೆ ಶೇಕಡ 50 ಬ್ಯಾಂಕಿನಿಂದಲೂ ಕೊಟ್ಟರೆ ಆಗ ಸರ್ಕಾರ ದುಡ್ಡು ಕೊಟ್ಟು ಕೊಂಡು ಕೊಳ್ಳಬೇಕಾಗುವುದಿಲ್ಲ. ರೈತ ಅವಶ್ಯಕತೆ ಇರುವುದನ್ನು ಶೇಕಡ 50ರಷ್ಟು ವ್ಯಾಲ್ಯುನಷ್ಟು ಮಾಲು ಕೊಟ್ಟು ಪರಿಹಾರ ಮಾಡಿಕೊಳ್ಳುತ್ತಾನೆ. You can hold back his produce.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾವು ಅದನ್ನು ಮಾಡಿದರೆ we will be happiest ones. ಈಗ ಮಾರುಕಟ್ಟೆಯಲ್ಲಿ ಏನಿದೆ ಅದನ್ನು ಶೇಕಡ 50ರಷ್ಟು ಅಡ್ವಾನ್ಸ್ ಕೊಟ್ಟು ಕೊಂಡುಕೊಳ್ಳುತ್ತೇವೆಂದು ಹೇಳಿದ್ದೀರಿ. ಅದನ್ನು ಕೊಟ್ಟು ಬಿಡಿ, ನಾವು ನಿಯೋಗವನ್ನು ಮಾಡುವುದಿಲ್ಲ, ಚರ್ಚೆಯನ್ನು ಮಾಡುವುದಿಲ್ಲ, ಆದರೆ ತಾವು ಇದನ್ನು ಮಾಡುವುದಕ್ಕೆ ಆಗಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ :— ಇದು 5 ವರ್ಷಕ್ಕೆ ಮ್ಯಾನಿಫೆಸ್ಟೋ ಇರುವಂಥಾದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ತಾವು ಐದು ವರ್ಷದವರೆಗೂ ಮಾಡಿಕೊಂಡೆ ಇರುತ್ತೇವೆಂದು ಇದ್ದರೆ ನಮ್ಮದೇನೂ ತಕರಾರು ಇಲ್ಲ. ಇಷ್ಟು ವರ್ಷಗಳಲ್ಲಿ ನಿಮ್ಮದು

ಏನಾಗುತ್ತಿದೆಯೋ ಲಕ್ಷ ಹಾಕಿಕೊಳ್ಳಿ. ಇನ್ನು ಮಾನ್ಯ ಇನಾಂದಾರ್‌ರವರು ಕೆಲವು ಸೆಂಟರ್‌ಗಳನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದರು. ಅಲ್ಲಿ, ನಾಳೆ ಬನ್ನಿ, ನಾಳಿದ್ದು ಬನ್ನಿ, ಎಂದು ಚೀಟಿಗಳನ್ನು ಕೊಡುತ್ತಿದ್ದಾರೆ. ಆದುದರಿಂದ ರೈತರ ವಸ್ತುಗಳನ್ನು ಪ್ರತಿ ದಿವಸ ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದಂತಹ ಸಿಬ್ಬಂದಿ ವ್ಯವಸ್ಥೆಯನ್ನು ಸಹ ಮಾಡಬೇಕಾಗುತ್ತದೆ. ಅದು ಆಗುತ್ತಿಲ್ಲ. ಇನ್ನು ಮತ್ತೊಂದು ವಿಚಾರವೇನೆಂದರೆ ಇವರು "ರೈತರ ಸಂಕಷ್ಟ ನಿಧಿ" ಮಾಡುತ್ತೇವೆಂದು ಹೇಳಿದ್ದಾರೆ. ಇನ್ನು ಸಚಿವ ಸಂಪುಟದಲ್ಲಿ ನೂರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ, ಅದು ಆಗುವುದಿಲ್ಲ. ಈಗ ನೀವು 650 ಕೋಟಿ ರೂಪಾಯಿಗಳ ಪೂರಕ ಬಜೆಟ್‌ನಲ್ಲಿ ತಂದು ಅಷ್ಟರಲ್ಲಿ ಪ್ಲ್ಯಾನ್ ಸೈಜ್ ಅನ್ನು ಕಟ್ ಮಾಡುವವರಿದ್ದೀರಿ. ಅದಕ್ಕೋಸ್ಕರ ನಾನೇನು

12.50 ಪಿ.ಎಂ.

ಸಲಹೆ ಮಾಡುತ್ತೇನೆಂದರೆ, ಕೃಷ್ಣಾ ಜಲಭಾಗ್ಯನಿಗಮಕ್ಕೆ ಬಾಂಡ್‌ಗಳನ್ನು ಮಾರಾಟ ಮಾಡಿ ಹಣವನ್ನು ಸಂಗ್ರಹಣೆ ಮಾಡಿದ್ದೇವೆ, ರೈತರು ಹಣವನ್ನು ಎಲ್ಲಾ ಸಂದರ್ಭದಲ್ಲೂ ಕೊಡುತ್ತಾರೆ, ನೀವು 1000 ಕೋಟಿ ರೂಪಾಯಿಗಳ ಸಂಕಷ್ಟ ನಿಧಿಯನ್ನು ಸ್ಥಾಪನೆ ಮಾಡಿ, ಯಾವಾಗ ರೈತರ ಹತ್ತಿರ ಹಣವಿರುತ್ತದೆ ಆಗ ಅವರ ಬಾಂಡ್ ಅನ್ನು ಖರೀದಿಸುತ್ತಾರೆ, ಅದರಿಂದ ನಿಮಗೆ ಉಪಯೋಗವಾಗುತ್ತದೆಂದು ಹೇಳುತ್ತೇನೆ. ಪ್ರೊ: ಬಿ.ಕೆ. ಚಂದ್ರಶೇಖರ್‌ರವರ ಗಮನಕ್ಕೆ ತರುವುದೇನೆಂದರೆ, ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಕನ್ವೀನ್ ಮಾಡಲು ನಮ್ಮ ಸರ್ಕಾರ ಲೀಡ್ ತೆಗೆದುಕೊಳ್ಳಬೇಕು. ಶ್ರೀಲಂಕಾ, ನೇಪಾಳ, ಭೂತಾನ್, ಬಾಂಗ್ಲದೇಶ್, ಪಾಕಿಸ್ತಾನ್ ಭಾರತ ಈ ಸಾರ್ಕ್ ದೇಶಗಳ ನಡುವೆ 1984-85ರಲ್ಲಿ ಒಂದು ಒಪ್ಪಂದವಾಯಿತು. ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದಂತೆ ನಾವು ಈ ಒಪ್ಪಂದಗಳನ್ನು ಪುನರ್‌ಪರಿಶೀಲನೆ ಮಾಡಬೇಕಾಗುತ್ತದೆ, ಇಲ್ಲದಿದ್ದರೆ, ಸಾರ್ಕ್ ದೇಶಗಳ ಮುಖಾಂತರ ಇವತ್ತು ಸಮೃದ್ಧವಾದ ಅಮೇರಿಕಾದಂತಹ ದೇಶಗಳು ನಮ್ಮನ್ನು ಶೋಷಣೆಗೆ ಒಳಪಡಿಸತಕ್ಕಂಥ ಸ್ಥಿತಿಗೆ ನಮ್ಮನ್ನು ತೆಗೆದುಕೊಂಡು ಹೋಗಲಾಗಿದೆ; ಇದನ್ನು ತಾವು ಎನ್‌ಡಿಸಿ ಸಭೆಯಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ ಏಕೆಂದರೆ, ಮಾವಿನ ಹಣ್ಣಿನ ರಸ, packed in Nepal; made in USA: ಇದು ಕನಕಪುರದಲ್ಲಿರುವ ಒಂದು ಅಂಗಡಿಯಲ್ಲೂ ಸಿಗುತ್ತದೆ. ಯಾವ ಹಣ್ಣಿನ ರಸವಾದರು ಸಿಗುತ್ತದೆ. ಅವರೇನು ಮಾಡುತ್ತಾರೆಂದರೆ, ಅವರು ನೇಪಾಳ, ಭೂತಾನ್, ಶ್ರೀಲಂಕದಲ್ಲಿ ತಂದು ಬಿಸಾಡುತ್ತಾರೆ, ಅದನ್ನು ಭಾರತದವರು ತೆಗೆದುಕೊಂಡು ಬಂದರೆ ಇಲ್ಲಿ ಬೆಳೆದ ನಮ್ಮ ರೈತರು ಬಾಯಿ ಬಡಿದುಕೊಳ್ಳಬೇಕಾಗುತ್ತದೆ. ಎನ್‌ಡಿಸಿ ಸಭೆಯಲ್ಲಿ, ಸಾರ್ಕ್ ಒಪ್ಪಂದಗಳನ್ನು ಪುನರ್ ಪರಿಶೀಲನೆ ಮಾಡುವಂತಹದ್ದನ್ನು ಮುಖ್ಯಮಂತ್ರಿಗಳು ಇನಿಷಿಯೇಟ್ ಮಾಡಬೇಕಾಗುತ್ತದೆ, ಇದು ತುಂಬಾ ಅವಶ್ಯಕ. ನಾನು ಬೆಳಿಗ್ಗೆ ಒಂದು ಅಂಶವನ್ನು

ಪ್ರಸ್ತಾಪ ಮಾಡಿದ್ದ. ನೀವು 12,000 ಕೋಟಿ ರೂಪಾಯಿಗಳ ಸಾಲವನ್ನು ನಾಲ್ಕು ವರ್ಷದ ಅವಧಿಗೆ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದೀರಿ. ಆರುವರೆ ಸಾವಿರ ಕೋಟಿ ರೂಪಾಯಿ ಪವರ್ ರಿಸ್ಟ್ರಕ್ಚರ್ ಮಾಡಲು, ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ರಸ್ತೆಗಳನ್ನು ಮಾಡಲು ಅದರಲ್ಲಿ, ತೆಗೆದುಕೊಳ್ಳುತ್ತಿದ್ದೀರಿ, ಅದನ್ನು ನಾವು ಸ್ವಾಗತ ಮಾಡಿದ್ದೇವೆ, with all our reservations, because there is no alternative. You cannot escape ಐ.ಎಂ.ಎಫ್ ವಿಶ್ವಬ್ಯಾಂಕ್, ಎಡಿಬಿ, ಓವರ್‌ಸೀಸ್ ಸಾಲಗಳನ್ನು ತೆಗೆದುಕೊಂಡು ನಾವು ಬದುಕಬೇಕಾಗುತ್ತದೆ. 1947ರಿಂದ ಇವತ್ತಿನವರೆಗೆ ಕರ್ನಾಟಕದ ಸಾಲ ಸುಮಾರು 15,000 ಕೋಟಿ ರೂಪಾಯಿಗಳಾಗಿದೆ, ಇನ್ನು 12,000 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಂದರೆ ನಮ್ಮ ಯೋಜನೆ ಗಾತ್ರ ಏನಿರುತ್ತದೆ, ಅದರ ಮೇಲಾಗುವ ಪರಿಣಾಮವೇನು, ಮತ್ತೆ ನಾಲ್ಕು ವರ್ಷಗಳಲ್ಲಿ ನೀವು ಮಾಡುವ ಸಾಲವೇನು, ಇದನ್ನೆಲ್ಲಾ ನೋಡಿದರೆ ಡೆತ್‌ಟ್ರಾಪ್ ಹತ್ತಿರ ನಾವು ಹೋಗುತ್ತೀರೇನೊ ಎನ್ನುವ ಸಂಶಯ ಕೂಡ ನನಗಿದೆ. ಅದಕ್ಕೆ ನಾನು ಇದಕ್ಕೆ ಕೇಂದ್ರ ಸರ್ಕಾರದವರು ಸಮ್ಮತಿಯನ್ನು ಕೊಟ್ಟಿದ್ದಾರೆಯೆ ಎಂದು ಕೇಳಿದೆ. ಓವರ್‌ಸೀಸ್ ಒಪ್ಪಂದಗಳನ್ನು ಮಾಡಿಕೊಳ್ಳುವಾಗ, ಇದನ್ನು ನಾವು ಕೇಂದ್ರ ಹಾಗೂ ರಾಜ್ಯಗಳ ಸಂಬಂಧದಲ್ಲಿ ಡಿಸ್ಕಸ್ ಮಾಡಬೇಕಾಗುತ್ತದೆ. ಕೇಂದ್ರದವರು ರಾಜ್ಯಗಳನ್ನು ಈ ವಿಚಾರದಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ. The main point which I would like to make out sir is this.- ನಮ್ಮ ಒಂದು ಫೆಡರಲ್ ಸ್ಟ್ರಕ್ಚರ್‌ನಲ್ಲಿ ಯೂನಿಯನ್ ಗೌರ್ನಮೆಂಟ್ ಈ ರೀತಿಯ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಲ್ಲಿ ನಮಗಾಗಿ ಸಾಲ ತೆಗೆದುಕೊಂಡು ಬರುವಾಗ ರಾಜ್ಯ ಸರ್ಕಾರಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ. every citizen of this counrty who is alike has to bear the burden of that loan. ಕೇಂದ್ರ ಸರ್ಕಾರ ಯಾವ ಒಪ್ಪಂದಕ್ಕೆ ಸಹಿ ಮಾಡುವಾಗಲು ಕೂಡ ಕರ್ನಾಟಕದಲ್ಲಿ ತೆಂಗು, ಭತ್ತ, ಹೀಗೆ ಯಾವ ಬೆಳೆಯನ್ನು ಬೆಳೆಯುತ್ತೇವೆನ್ನುವುದನ್ನು ಯೋಚನೆ ಮಾಡುವುದಿಲ್ಲ, ನಮ್ಮ ಮೇಲಾಗುವ ಪರಿಣಾಮವನ್ನು ಕೂಡ ಅವರು ಯೋಚನೆ ಮಾಡುವುದಿಲ್ಲ. ಈ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಎನ್.ಡಿ.ಸಿ. ಸಭೆಯಲ್ಲಿ ಈ ಅಂಶವನ್ನು ಎತ್ತಬೇಕಾಗುತ್ತದೆ. ಇವತ್ತು ಕೋಯಲಿಷನ್ ಎರಾ, ಇವತ್ತು ಕಾಂಗ್ರೆಸ್ ಆಗಲಿ, ಬಿಜೆಪಿ ಆಗಲಿ on their own they are not in a position to form a Government. It is the question of numbers ಇನ್ನು 10 ವರ್ಷಗಳಲ್ಲಿ ದೊಡ್ಡ ಬದಲಾವಣೆಯಾಗುತ್ತದೆಂದು ನಾವು ಬಯಸುವುದಿಲ್ಲ. ಈ ರೀತಿಯಾದ ಒಪ್ಪಂದಗಳಿಗೆ ಕೇಂದ್ರ ಸರ್ಕಾರದವರು ಸಹಿ ಮಾಡುವ ಸಂದರ್ಭಗಳಲ್ಲಿ ಫೆಡರಲ್ ಸ್ಟ್ರಕ್ಚರ್‌ನಲ್ಲಿ ರಾಜ್ಯ ಸರ್ಕಾರಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಅವಶ್ಯಕತೆ ಬಹಳವಿದೆ ಎಂದು ನಾನು ಹೇಳಬಯಸುತ್ತೇನೆ. ಸಾರ್ಕ್‌ನಿಂದ ತೆಂಗಿನ ಬೆಳೆಗಾರರಿಗೆ ದೊಡ್ಡ ಪೆಟ್ಟಾಗಿದೆ. ಶ್ರೀಲಂಕಾದಿಂದ ಎಷ್ಟು ಬೇಕಾದರು ತೆಂಗು

ಬರುತ್ತದೆ. ಹನುಮೇಗೌಡರು ಚೆನ್ನಾಗಿ ಮಾತನಾಡಿದಂತೆ ನಾನು ಮಾತನಾಡಲಾಗುವುದಿಲ್ಲ, ಅವರ ಪ್ರತಿಯೊಂದು ಮಾತಿನಲ್ಲೂ ಕೂಡ ಇರುವ ನೋವನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಶ್ರೀಮಾನ್ ಖರ್ಗೆ, ಹೆಚ್.ಕೆ. ಪಾಟೀಲ್‌ರವರು ವಿರೋಧಪಕ್ಷದಲ್ಲಿದ್ದಾಗ ರೈತರ ಆತ್ಮಹತ್ಯೆ ಬಗ್ಗೆ ಮಾತನಾಡುವಾಗ ನಾವೇನಾದರು ವಿಷವನ್ನು ಕುಡಿಯುವಷ್ಟು ತಪ್ಪು ಮಾಡಿದ್ದೇವೆನೊ, ಯಾರಿಗಾದರು ಕೊಲೆ ಮಾಡಿದ್ದೇವೆನೊ ಎನ್ನುವ ಮಟ್ಟಿಗೆ ಇವರು ಮಾತನಾಡಿದರು. Why should a delegation go and why should the Chief Minister lead? Punjab got Rs. 300 crores. For Andhra Pradesh - Centre has released money. For Tamilnadu they have released money. For U.P. they have released money. Why they have not released money to us? ಅದು ಮಲತಾಯಿ ಧೋರಣೆಯಲ್ಲವೆ, ಕೇಂದ್ರ ಸರ್ಕಾರದ ಈ ಧೋರಣೆಯನ್ನು ಕೂಡ ನಾವು ಒಪ್ಪುವುದಕ್ಕಾಗುವುದಿಲ್ಲ. ನಾವು ದೆಹಲಿಗೆ ಹೋಗಿ ಲಾಭಿ ಮಾಡುವುದಿಲ್ಲ, ಅದಕ್ಕೋಸ್ಕರವಿರಬಹುದು, ನಮ್ಮ ಎಂಪಿಗಳು ಲಾಭಿ ಮಾಡಲೆಂದು ಅವರಿಗೆ ವಾಹನ, ಕೆಂಪು ದೀಪಗಳನ್ನು ಕೊಡಲಾಗಿದೆಯೊ ಏನೋ ಎನ್ನುವ ಮಟ್ಟಿಗೆ ಮಾತ್ರ ಸ್ವಾಗತ ಮಾಡಬೇಕೆನೊ ನನಗೆ ಗೊತ್ತಿಲ್ಲ, ಇನ್ನು ಮುಂದೆ ಎಂಪಿಗಳು ದೆಹಲಿಯಲ್ಲಿ ಕುಳಿತುಕೊಂಡು ಕಡಿದುಕಟ್ಟೆ ಹಾಕುತ್ತಾರೆಂದು ತಿಳಿದುಕೊಂಡಿದ್ದೇನೆ. ಕೇಂದ್ರ ಸರ್ಕಾರದ ಈ ಮಲತಾಯಿ, ಧೋರಣೆಯನ್ನು ನಾನಂತು ಖಂಡಿಸುತ್ತೇನೆ. ಬೇರೆಯವರಿಗೆಲ್ಲ ಹಣವನ್ನೋ ಕೊಟ್ಟಿರುವ ಸಂದರ್ಭದಲ್ಲಿ ನಮಗೆ ಕೊಡದಿರಲು ಕಾರಣವೇನು? ನಿವೇಕೆ ಕೇಳಲಿಲ್ಲ? ನಿಮ್ಮಲ್ಲು ವೈಫಲ್ಯತೆ ಇದೆ, ಅದಕ್ಕೋಸ್ಕರ ಅವರು ಬೇಕಾದವರಿಗೆ ಕೊಟ್ಟುಕೊಂಡು ಹೋಗುತ್ತಿದ್ದಾರೆ. ನಮ್ಮ ವೈ.ಕೆ.ರಾಮಯ್ಯನವರಿಗೆ ಬಹಳ ಆಪ್ತವಾಗಿರುವ ವಿಚಾರವೇನೆಂದರೆ, ಎರಡು ಮೂರು ತಿಂಗಳಿಂದ, ಟೈವೋಲ್ಲಿನ್ ಬೆಳೆಯುವವರು, ಇತರರು, 160, 170, 185, 210 ರವರೆಗೆ ಒಂದು ಕೆ.ಜಿ. ರೇಷ್ಮೆಗೆ ಬೆಲೆ ಇರುವುದರಿಂದ ಸಾಲ ಮಾಡಿ ಪಂಪ್‌ಸೆಟ್‌ಗಳನ್ನು ಮಾರಿಕೊಂಡವರು ಸ್ವಲ್ಪ ಚೇತರಿಸಿಕೊಳ್ಳುತ್ತಿದ್ದಾರೆ. ನಾನು ಇಬ್ಬರು ಪುಣ್ಯಾತ್ಮರ ಬಗ್ಗೆ ಹೇಳಬೇಕು. ದಯವಿಟ್ಟು ಯಾರು ಕೋಪ ಮಾಡಿಕೊಳ್ಳಬೇಡಿ Jairam Ramesh ರವರು ಈ ಸದನದ ಸದಸ್ಯರಲ್ಲ. ಆದರೆ ಅವರು he is the Vice-Chairman of the Planning Board ಆದರಿಂದ ಒಂದು ಮಾತನಾಡಬಹುದು ಅವರು ಥಿಂಕ್‌ಟ್ಯಾಂಕ್‌ನಲ್ಲಿ ಇತ್ತೀಚೆಗೆ ತಮ್ಮ ಹೇಳಿಕೆಗಳನ್ನು ಕಡಿಮೆ ಮಾಡಿದ್ದಾರೆ ಅವರು ದೆಹಲಿಯಲ್ಲಿ ಕುಳಿತುಕೊಂಡು ರೇಷ್ಮೆ ಆಮದು ಮಾಡಿಕೊಳ್ಳುವುದು ಸರಿ ಎಂದು ಒಂದೇ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ Jairam Ramesh ರವರು ರಾಮನಗರ, ಚನ್ನಪಟ್ಟಣ, ಚಾಮರಾಜನಗರ ಕಡೆ ಅವರು ಹೋಗುವುದು ಸ್ವಲ್ಪ ಕಷ್ಟವಾಗುತ್ತದೆ, ಅದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ನಮ್ಮ ಕೇಂದ್ರದ ಮಂತ್ರಿಗಳಾಗಿರತಕ್ಕಂಥ ಧನಂಜಯಕುಮಾರ್‌ರವರನ್ನು ನಾನು ಭೇಟಿ ಮಾಡಿ ಕೆಲವು ಅಂಕಿಅಂಶಗಳನ್ನು ಒದಗಿಸಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇನೆ. ಏಕೆಂದರೆ ಅವರೂ ಇದೇ ರೀತಿಯ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು

ಸರಿಯಲ್ಲ. ಈರುಳ್ಳಿಯ ಎಕ್ಸ್‌ಪೋರ್ಟನ್ನು ತಕ್ಷಣದಿಂದ ಬ್ಯಾನ್ ಮಾಡಿದ್ದಾರೆ. ಏಕೆ ಹೀಗೆ ಮಾಡಿದರು ಎಂದು ಕೋಲಾರ ಮತ್ತು ಚಿತ್ರದುರ್ಗದ ರೈತರು ಶಾಪ ಹಾಕಿಕೊಂಡು ಕುಳಿತಿದ್ದಾರೆ. ಈರುಳ್ಳಿಯ ಪೈರನ್ನು ಹಿಡಿದು ಎಳೆದರೆ ಈರುಳ್ಳಿ ಬರುವುದಿಲ್ಲ. ಮಳೆ ಜಾಸ್ತಿಯಾಗಿರುವುದರಿಂದ ಬರೀ ಒಂದು ಕಡ್ಡಿ ಬರುತ್ತದೆ. ಆದರೂ ಬೆಳೆದಿರತಕ್ಕಂಥಾದ್ದರಲ್ಲೇ ಒಂದಿಷ್ಟು ಈರುಳ್ಳಿಯನ್ನು ಮಾರೋಣ ಎಂದರೆ, ದೆಹಲಿಯಲ್ಲಿ ಕುಳಿತಿರತಕ್ಕಂಥ ಪುಣ್ಯಾತ್ಮರು ಆದರ ಎಕ್ಸ್‌ಪೋರ್ಟನ್ನೂ ಬ್ಯಾನ್ ಮಾಡಿದ್ದಾರೆ. ಅವರಿಗೆ ಯಾರು ಅಡ್ವೈಸ್ ಮಾಡುತ್ತಾರೋ, ಏನೆಂದು ಮಾಡುತ್ತಾರೋ ಗೊತ್ತಿಲ್ಲ.

ಶ್ರೀ ವೈ.ಕೆ. ರಾಮಯ್ಯ :— ನಾನು ಮಾತನಾಡುವಾಗ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮಲ್ಲಿ ಸಮೃದ್ಧಿಯಾದ ಬೆಳೆಯಾದರೂ ಕೂಡ, ಹೊರದೇಶಗಳಿಂದ ಸುಮಾರು ಶೇಕಡ 80-85ರಷ್ಟು ಭಾಗವನ್ನು ಆಮದು ಮಾಡಿಕೊಳ್ಳುವುದೇ ನಮ್ಮ ರಾಷ್ಟ್ರದಲ್ಲಿ ವ್ಯವಸಾಯೋತ್ಪನ್ನಗಳ ಬೆಲೆ ಕುಸಿತಕ್ಕೆ ಕಾರಣ ಎಂದು ಹೇಳಿದ್ದೇನೆ. ಅದಕ್ಕಾಗಿಯೇ ಬೆಲೆ ಕುಸಿಯುತ್ತದೆ ಎನ್ನುವುದು ನನ್ನ ಖಚಿತವಾದಂಥ ಹಾಗೂ ಸ್ಪಷ್ಟವಾದಂಥ ಅಭಿಪ್ರಾಯ. ಈ ಬೆಲೆ ಕುಸಿತವನ್ನು ತಡೆಯಲು ರಾಜ್ಯ ಸರ್ಕಾರ ಮಾಡಬೇಕಾಗಿರತಕ್ಕಂಥ ಒಂದೇ ಒಂದು ಕೆಲಸವೆಂದರೆ ಮಾರ್ಕೆಟ್ ಇಂಟರ್‌ವೆನ್ಷನ್. ಕೇಂದ್ರ ಸರ್ಕಾರದ ಈ ಅನಿಷ್ಟ ಆಮದು ನೀತಿಯನ್ನು ಹೊರತುಪಡಿಸಬೇಕು. ರಾಜ್ಯ ಸರ್ಕಾರ ಏನೇನು ಮಾಡಬೇಕು ಎನ್ನುವ ಪಟ್ಟಿ ಕೊಟ್ಟರೆ ನಾವು ಸರ್ಕಾರದ ಮೇಲೆ ಒತ್ತಡ ತರಲು ಅವಕಾಶವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಹೋದವಾರ ಮಲೇಶಿಯಾದಲ್ಲಿ ಒಂದು ತೀರ್ಮಾನ ಮಾಡಿದ್ದಾರೆ. ಒಂದು ಕೆ.ಜಿ. ಪಾಮ್-ಆಯಿಲ್ ಅನ್ನು 9 ರೂಪಾಯಿ 10 ಪೈಸೆಗೆ ಮಾರಬೇಕು ಎಂದು ತೀರ್ಮಾನ ಮಾಡಿದ್ದಾರೆ. ಮೊದಲು ಅದು 11 ರೂಪಾಯಿ ಇತ್ತು. ಆದರೆ ನಮ್ಮಲ್ಲಿ ಒಂದು ಕೆ.ಜಿ. ಕಡಲೆಕಾಯಿ ಎಣ್ಣೆಯ ಪ್ರೊಡಕ್ಷನ್ ಕಾಸ್ಟ್ 19 ರೂಪಾಯಿ ಆಗುತ್ತದೆ. ಹೀಗಾದರೆ ಕಡಲೆಕಾಯಿಯನ್ನು ಯಾರು ತೆಗೆದುಕೊಳ್ಳುತ್ತಾರೆ? ಶೇಂಗಾವನ್ನು ಯಾರು ತೆಗೆದುಕೊಳ್ಳುತ್ತಾರೆ? ಎಣ್ಣೆ ಮಾರುವವರು ಪಂಗನಾಮ ಹಾಕಿಕೊಂಡು ಮನೆಗೆ ಹೋಗಬೇಕಾಗುತ್ತದೆ. ಪಾಕಿಸ್ತಾನದಿಂದ 7 ರೂಪಾಯಿ 60 ಪೈಸೆಗೆ ಒಂದು ಕೆ.ಜಿ. ಅಕ್ಕಿ ಬರುತ್ತದೆ. ಸಕ್ಕರೆಯನ್ನು ಒಂದು ಕೆ.ಜಿ.ಗೆ 3 ರೂಪಾಯಿ 30 ಪೈಸೆಗೆ ತಂದು ಬಿಸಾಕಿಬಿಟ್ಟು ಹೋಗುತ್ತಿದ್ದಾರೆ. ಈಗ ಮಾರುಕಟ್ಟೆಗಳಲ್ಲಿ ಆಸ್ಟ್ರೇಲಿಯನ್ ಆಪಲ್ ಸಿಗುತ್ತಿವೆ. ಎಲ್ಲಾ ರೀತಿಯ ತರಕಾರಿಗಳು, ಅಂದರೆ ಆಲೂಗಡ್ಡೆ, ಟಮೋಟೊ, ಹಸಿಮೆಣಸಿನಕಾಯಿ ಎಲ್ಲವೂ ಆಸ್ಟ್ರೇಲಿಯಾದಿಂದ ಬರುತ್ತಿವೆ. ಅವರೆಕಾಯಿಯನ್ನು ಕೆನಡಾದಲ್ಲಿ ಬೆಳೆದು ಕಳುಹಿಸಿದ್ದಾರೆ. ಅಂದರೆ, our land has become a place for dumping all their wastes. ಒಂದು ರೀತಿಯಲ್ಲಿ ನಾವು ಸ್ಲಂ ರೀತಿ ಆಗುತ್ತಿದ್ದೇವೇನೋ ಎಂದು ಅನಿಸುತ್ತದೆ. ಮಾನ್ಯ ಶಿವಕುಮಾರ್‌ರವರು ಬಹಳ ಉತ್ಸಾಹದಿಂದ ಏನೇನನ್ನೋ ಆಚೆ ತಂದುಬಿಡಬೇಕು ಎಂದು

ಕೆ.ಎಂ.ಎಫ್ ಬಗ್ಗೆ ಒಂದು ಪ್ರಶ್ನೆಯನ್ನು ಹಾಕಿದ್ದರು. ಈಗ ಅವರು ಇಲ್ಲಿ ಇಲ್ಲ. ಒಂದು ದೊಡ್ಡ ಸಹಕಾರ ಸಮ್ಮೇಳನವನ್ನು ಮಾಡಲು ಹೊರಟಿದ್ದಾರೆ. ಇನ್ನು ಮುಂದೆ ನಮಗೆ ಡೈರಿಗಳನ್ನು ಮಾಡಲು ಹಸು-ಕರುಗಳು ಬೇಕಾಗುವುದಿಲ್ಲ, ಮಿಲ್ಕ್ ಡೈರಿಗಳ ಅವಶ್ಯಕತೆ ಇಲ್ಲ. ಮಿಲ್ಕ್ ಪೌಡರ್ ಬಹಳ ಚೀಪ್ ಆಗಿ ಸಿಗುವಾಗ ನಮಗೆ ಹಸು-ಕರುಗಳು ಏಕೆ? ಮಿಲ್ಕ್ ಪೌಡರ್ ಅನ್ನು ಎಷ್ಟು ಬೇಕಾದರೂ ಇಂಪೋರ್ಟ್ ಮಾಡಿಕೊಳ್ಳುತ್ತಾರೆ. ಅದನ್ನು ಒಂದು ಬಕೆಟ್‌ನಲ್ಲಿ ಹಾಕಿ ನೀರು ಬೆರೆಸಿಬಿಟ್ಟರೆ ಎಷ್ಟು ಹಾಲು ಬೇಕಾದರೂ ತಯಾರಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ, (ಕೃಷಿ ಸಚಿವರು) :— ಯಥೇಚ್ಛವಾಗಿ ವಿದೇಶಗಳಿಂದ ಆಮದಾಗುತ್ತಿದೆ, ಇಲ್ಲಿ ಡಂಪ್ ಆಗುತ್ತಿದೆ ಎಂದು ತಾವು ಹೇಳುತ್ತಿದ್ದೀರಿ. ಒಂದು ವಿಶೇಷವೆಂದರೆ, ಮೊನ್ನೆಯ ದಿವಸ ಕೇಂದ್ರ ಸರ್ಕಾರದವರು ಆಯಿಲ್ ಮೇಲಿನ ತೆರಿಗೆಯನ್ನು ಶೇಕಡ 15ರಿಂದ ಶೇಕಡ 35 ರವರೆಗೆ ಮಾಡಿದರೂ ಕೂಡ ಮಲೇಶಿಯಾದವರು, ತಾವು ಹೇಳಿದಂತೆ 9 ರೂಪಾಯಿಗೆ ಅಲ್ಲ, 7 ರೂಪಾಯಿಗೇ ಕಳುಹಿಸುವುದಕ್ಕೆ ತಯಾರಾಗಿದ್ದಾರೆ. ಒಂದು ಕಡೆ ಅವರಿಗೆ ನಾವು ತೆರಿಗೆ ಜಾಸ್ತಿ ಮಾಡಿದರೂ ಕೂಡ ಅವರು ಇನ್ನೂ ಬೆಲೆ ಕಡಿಮೆ ಮಾಡುತ್ತೇವೆ ಎಂದು ಹೇಳಲು ಕಾರಣವೆಂದರೆ, ಆ ದೇಶದವರು ಎಕ್ಸ್‌ಪೋರ್ಟ್‌ಗೆ ಕೊಡುತ್ತಿರತಕ್ಕಂಥ ಸಬ್ಸಿಡಿಯ ಪ್ರಮಾಣವನ್ನು ಜಾಸ್ತಿಮಾಡಿರುವುದರಿಂದಲೇ ಅವರು ಆ ರೀತಿ ಮಾಡುವುದಕ್ಕೆ ಆಗುತ್ತಿದೆ. ಆದರೆ ನಾವೇಕೆ ಚೌಕಾಸಿ ಮಾಡುತ್ತಿದ್ದೇವೆ ಎಂದು ನಮಗೆ ಅರ್ಥವಾಗುತ್ತಿಲ್ಲ. ತೆರಿಗೆ ಶೇಕಡ 15ರಿಂದ ಶೇಕಡ 35ರವರೆಗೂ ಹೆಚ್ಚಾಗಿದೆ. ಶೇಕಡ 300 ರವರೆಗೂ ಕೊಡಲು ಅವಕಾಶವಿದೆ. ಈ ಸಾರಿ ಮಲೇಶಿಯಾದಲ್ಲಿ, ಅನ್ ಪ್ರಿಸೆಡೆಂಟೆಡ್ ಪ್ರೊಡಕ್ಷನ್ ಆಗಿದೆ. 8 ವರ್ಷಗಳಿಗೊಮ್ಮೆ ಈ ರೀತಿಯಾದಂಥ ಪ್ರೊಡಕ್ಷನ್ ಬರುತ್ತದೆ. ಅಲ್ಲಿ ಅಷ್ಟು ಯಥೇಚ್ಛವಾಗಿದೆ. ನಾವು ಯಾವ ಬೆಲೆಗಾದರೂ ಕೊಡಲು ತಯಾರಾಗಿದ್ದೇವೆ ಎಂದು ಗೊತ್ತಿದ್ದಾಗ್ಯೂ, ನಾವು ಅದರ ಟ್ಯಾರಿಫ್ ಅನ್ನು ಜಾಸ್ತಿ ಮಾಡದೇ ಇರತಕ್ಕಂಥದ್ದೇ ಇದಕ್ಕೆ ಒಂದು ಮುಖ್ಯ ಕಾರಣ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ದಾವೂಸ್ ಕಾನ್ಫರೆನ್ಸ್‌ನಲ್ಲಿ ನಾನು ಒಂದು ಆರ್ಟಿಕಲ್ ನೋಡಿದೆ. ಮಲ್ಟಿ-ನ್ಯಾಷನಲ್‌ಗಳವರೆಲ್ಲಾ ಅಲ್ಲಿಗೆ ಹೋಗುತ್ತಾರೆ. ಅವರು ಒಂದು ಬೋರ್ಡ್ ಹಾಕಿಕೊಂಡಿದ್ದಾರೆ. ಅದೇನೆಂದರೆ, ``The shapers of the future of this Planet" ಅಂದರೆ ಅವರು ಈ ಪ್ಲಾನೆಟ್‌ನ ಫ್ಯೂಚರ್ ಅನ್ನು ಶೇಪ್ ಮಾಡತಕ್ಕಂಥ ಮಹಾಶಯರಂತೆ. These are all the agents of multi-national companies who wants to exploit us and finish us. ಹೀಗಾದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳದೇ ಇನ್ನೇನು ಮಾಡುತ್ತಾರೆ? ನಾನು ಗೃಹಮಂತ್ರಿಯಾಗಿದ್ದವನು. ನನಗೆ ಗೊತ್ತಿದೆ. ಈ ವಿಷಯವನ್ನು ಹೇಳುವಾಗ ಇಲ್ಲಿ ಮಾನ್ಯ ಅಧ್ಯಕ್ಷರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಏಕೆಂದರೆ, ವುಮೆನ್ಸ್ ಆರ್ಗನೈಸೇಷನ್‌ನವರು ಬೆಂಗಳೂರಿಗೆ ಬಂದು ಅಧ್ಯಕ್ಷರನ್ನು ಭೇಟಿ ಮಾಡಿದ್ದರು. ಬೆಂಗಳೂರಿನಲ್ಲಿ ಹೆಣ್ಣುಮಕ್ಕಳ ಅಸಹಜ ಸಾವು ಎಷ್ಟಾಗುತ್ತದೆ ಎನ್ನುವುದಕ್ಕೆ ತಾವು ದಯಮಾಡಿ ಗಮನಿಸಿ. ಈ ರೀತಿಯ ಅಸಹಜವಾದ ಸಾವುಗಳು ಬೆಂಗಳೂರಿನಲ್ಲಿ, ಒಂದು ವರ್ಷದಲ್ಲಿ ಒಂದು ಸಾವಿರ ಆಗುತ್ತವೆ. ಅವರು ಹಾಗೆ ಸಾಯುವುದು ಎಷ್ಟು ಹೊತ್ತಿಗೆ ಎಂದರೆ, ರಾತ್ರಿ 12

ಗಂಟೆಯ ಮೇಲೆ, ಬೆಳಗಿನ ಜಾವ 4 ಗಂಟೆಯ ಒಳಗಡೆ. ಆಗ ಅವರು ಅಡಿಗೆ ಮಾಡುತ್ತಿದ್ದರು, ಸ್ಟೌವ್ ಬರ್ಸ್ಟ್ ಆಗುತ್ತದೆ. ಇದರ ಅರ್ಥ ಏನು? ಬೇರೆ ಇನ್ನೇನೂ ಅಲ್ಲ, ಇವು ಡೌರಿ ಡೆತ್ಸ್. ಆದರೆ ಇವುಗಳನ್ನು ಡೌರಿ ಡೆತ್ ಎಂದು ತೆಗೆದುಕೊಳ್ಳುವುದಿಲ್ಲ, ಅನ್‌ನ್ಯಾಚುರಲ್ ಡೆತ್ ಎಂದು ತೆಗೆದುಕೊಳ್ಳುತ್ತಾರೆ. ಹಾಗೆಯೇ ಈ ರೈತರ ಆತ್ಮಹತ್ಯೆಯನ್ನೂ ಸಹ ಅನ್‌ನ್ಯಾಚುರಲ್ ಡೆತ್ ರೀತಿಯಲ್ಲಿ, ನ್ಯಾಚುರಲ್ ಆಗಿ ಅವರೆಲ್ಲಾ ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಿದ್ದಾರೆ. ನಾನು ಬಹಳ ಸವಿಸ್ತಾರವಾಗಿ ಮಾತನಾಡಬಹುದು. ಆದರೆ ಸಮಯದ ಅಭಾವದಿಂದ ಹೆಚ್ಚು ಮಾತನಾಡಲು ಹೋಗುವುದಿಲ್ಲ. ದೆಹಲಿಗೆ ಹೋಗುತ್ತಿರುವ ಡೆಲಿಗೇಷನ್ನಿನ ಲೀಡರ್‌ಶಿಪ್‌ಅನ್ನು ಮುಖ್ಯಮಂತ್ರಿಗಳೇ ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ನಾನು ಮೇಲೆ ಹೇಳಿರುವ 2-3 ವಿಚಾರಗಳ ಕಡೆ ಸರ್ಕಾರ ಗಮನಕೊಡಬೇಕು. ಇಲ್ಲದಿದ್ದರೆ ಉಪಯೋಗವಾಗುವುದಿಲ್ಲ. ಜಯಚಂದ್ರರವರೇ, ನೀವು ಕೆಲವು ಸ್ಪೆಷಲ್ ಸ್ಟೇಟ್‌ಮೆಂಟ್ಸ್ ಕೊಟ್ಟಿದ್ದೀರಿ ಎಂದು ನಾನು ನಿಮ್ಮ ಅಧೀನದಲ್ಲಿ ಹೇಳಿದೆ. ಏಕೆಂದರೆ ನೀವು ಅವುಗಳನ್ನು ಮಾಡಲು ಆಗಲ್ಲ. ಬೆಲೆ ನಿಯಂತ್ರಣದ ಮಸೂದೆಯನ್ನು ಮಂಡಿಸುತ್ತೇವೆ ಎನ್ನುವ ಮಾತನ್ನು ನೀವು ಹೇಳಿದ್ದೀರಿ. ಅದನ್ನು ನೀವು ಮಂಡಿಸಲಿಲ್ಲ. ಬಾಕಿ ಎಲ್ಲ ಮಸೂದೆಗಳನ್ನು ತೆಗೆದುಕೊಂಡು ಬರುತ್ತಿದ್ದೀರಿ. ಆ ಮಸೂದೆಯನ್ನು ಏಕೆ ತೆಗೆದುಕೊಂಡು ಬರಲಿಲ್ಲ, ಎನ್ನುವುದು ನನಗೆ ಅರ್ಥವಾಗಲಿಲ್ಲ. ಇಷ್ಟು ಮಾತುಗಳನ್ನು ನಾನು ಈ ಸಂದರ್ಭದಲ್ಲಿ, ಹೇಳಿ, ಇದರ ಕಡೆ ರಾಜ್ಯ ಸರ್ಕಾರ ಗಮನ ಕೊಡಬೇಕೆಂದು ಹೇಳುತ್ತೇನೆ. ನಿಮ್ಮ ಕಮಿಟ್‌ಮೆಂಟನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. We are not questioning your commitment to the cause of the farmers. ಆದರೆ ನಾವು ಆ ದಿಕ್ಕಿನಲ್ಲಿ ಹೋಗಬೇಕಾಗುತ್ತದೆ. ಆ ದಿಕ್ಕಿನಲ್ಲಿ ಹೋದರೆ 5-10 ವರ್ಷಗಳ ಒಳಗಡೆ ಈ ಸಮುದಾಯಕ್ಕೂ ಸಹ ಒಂದು ನ್ಯಾಯ ಸಿಗಬಹುದು ಎನ್ನುವ ಭಾವನೆಯಿಂದ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಮಾತನಾಡಲು ತಾವು ಅವಕಾಶ ಕೊಟ್ಟಿದ್ದೀರಿ, ಅದಕ್ಕಾಗಿ ಅಭಿನಂದನೆಗಳು.

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ವೈಸ್ ಛೇರ್ಮನ್‌ರವರೇ, ಇದರ ಬಗ್ಗೆ ಚರ್ಚೆಗೆ ಒಂದು ಗಂಟೆಯವರೆಗೆ ಸಮಯ ನಿಗದಿ ಮಾಡಿದ್ದೀರಿ. ಈಗಾಗಲೇ 1 ಗಂಟೆ 10 ನಿಮಿಷವಾಗುತ್ತಾ ಬಂದಿದೆ. ಆದ್ದರಿಂದ ದಯಮಾಡಿ ಒಂದು ಸಮಯ ನಿಗದಿ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ :— ಇನ್ನೂ ಒಂದು ದಿವಸ ಸದನವನ್ನು ಮುಂದೂಡಿ ಪರವಾಗಿಲ್ಲ, ಇದರ ಬಗ್ಗೆ ಪೂರ್ಣ ಚರ್ಚೆಯಾಗಬೇಕು. ನಮಗೂ ಅವಕಾಶ ಕೊಡಬೇಕು. ಒಂದು ಗಂಟೆಯಲ್ಲ, ಮೂರು ಗಂಟೆಯಾಗಲಿ, ಬೇಕಾದರೆ ಒಂದು ದಿವಸ ಸದನವನ್ನು ಎಕ್ಸ್‌ಟೆಂಡ್ ಮಾಡಿ.

ಛೇರ್ಮನ್:— ಪಾಟೀಲರೇ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಹಿರಿಯ ಸಚಿವರ ಮೂಲಕ ತಾವು ಒಂದು ಜೆಂಟಲ್‌ಮೆನ್ ಅಗ್ರೀಮೆಂಟ್ ಮಾಡಿಕೊಂಡಿರುವ ಪ್ರಕಾರ...

ಶ್ರೀ ಎಸ್.ಎಸ್. ಪಾಟೀಲ್:— ಸಮಯ ಎಷ್ಟಾದರೂ ಸರಿ. ಅದರ ಬಗ್ಗೆ ನಮ್ಮದೇನೂ ತಕರಾರಿಲ್ಲ. ಅದಕ್ಕೆ ಸಮಯದ ರಿಸ್ಟ್ರಿಕ್ಷನ್ ಹಾಕಲು ಹೋಗಬೇಡಿ. ನಾವು ಮಾತನಾಡುತ್ತೇವೆ. ಎಲ್ಲರಿಗೂ ಅವಕಾಶ ಕೊಡಿ. ನಾವೆಲ್ಲಾ ಮಾತನಾಡಬೇಕಾಗುತ್ತದೆ. ನಾವೆಲ್ಲ ರೈತರ ಮಕ್ಕಳು.

ಡಾ: ಜಿ ಪರಮೇಶ್ವರ್:— ನೀವೊಬ್ಬರೇ ರೈತರ ಮಕ್ಕಳಲ್ಲ, ನಾವೂ ರೈತರ ಮಕ್ಕಳೇ. ಆದರೆ ಈಗ ಸುಮ್ಮನೆ ಸಮಯವನ್ನು ವ್ಯರ್ಥ ಮಾಡುವುದು ಬೇಡ.

ಛೇರ್ಮನ್:— ಪಾಟೀಲರೇ ತಾವು ಕುಳಿತುಕೊಳ್ಳಿ. ತಮ್ಮ ಅಗ್ರೀಮೆಂಟ್ ಪ್ರಕಾರ 5 ಜನ ಮಾತನಾಡಬಹುದು ಎಂದು ತೀರ್ಮಾನವಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್:— ವೈಸ್ ಛೇರ್ಮನ್‌ರವರೇ, ನಾವು ಆಗಲೇ ಪ್ರೊಟೆಸ್ಟ್ ಮಾಡಿದ್ದೇವೆ. ನಮ್ಮ ಕಡೆಯ ಸದಸ್ಯರುಗಳಿಗೆ ಅವಕಾಶ ಮಾಡಿಕೊಡಬೇಕು ಎಂದು ಆಗಲೇ ಹೇಳಿದ್ದೇವೆ.

ಛೇರ್ಮನ್:— ವಿರೋಧ ಪಕ್ಷದ ನಾಯಕರೇ, ನಾನು ನಿಮ್ಮ ರಕ್ಷಣೆಗೇ ಬರುತ್ತಿದ್ದೇನೆ. ತಾವು 10 ಜನರ ಲಿಸ್ಟನ್ನು ಕೊಟ್ಟಿದ್ದೀರಿ. ತಮಗೆಲ್ಲಾ ಗೊತ್ತಿರುವ ಪ್ರಕಾರ ಸದನದ ಕಾರ್ಯಕಲಾಪ ಇವತ್ತು ಮುಗಿಯಬೇಕಾಗಿದೆ. ವಿಧೇಯಕಗಳು ಮಂಡನೆಯಾಗಿ ಪಾಸ್ ಆಗಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:— ಇನ್ನೂ ಒಂದು ದಿನ ಹೆಚ್ಚಿಗೆ ಮಾಡಿ, ಯಾರು ಬೇಡವೆನ್ನುತ್ತಾರೆ?

ಛೇರ್ಮನ್:— ಎಸ್.ಎಸ್. ಪಾಟೀಲರೇ ಅದನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡಬೇಕು. ಅದನ್ನು ನಾವು ಇಲ್ಲಿ ಕುಳಿತುಕೊಂಡು ಅಥವಾ ನೀವು ಅಲ್ಲಿಂದ ಹೇಳಿ ಮಾಡುವುದಲ್ಲ. ವಿರೋಧ ಪಕ್ಷದ ನಾಯಕರೇ ನಿಮ್ಮ ಕಡೆಯವರಿಗೆ ಒಬ್ಬೊಬ್ಬರಿಗೆ ಎಷ್ಟೆಷ್ಟು ಟೈಂ ಕೊಡಬೇಕು ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್:— ಒಬ್ಬೊಬ್ಬರು ಐದೈದು ನಿಮಿಷ ಮಾತನಾಡುತ್ತಾರೆ ಅಷ್ಟೇ.

ಛೇರ್ಮನ್:— ಅಷ್ಟು ಸಮಯದಲ್ಲಿ ಮಾತನಾಡಬೇಕುಎಂದು ನಿಮ್ಮ ಕಡೆಯವರನ್ನು ನೀವು ಕಂಟ್ರೋಲ್ ಮಾಡಬೇಕು. ಈಗ ಲಕ್ಷ್ಮೀನಾರಾಯಣ್‌ರವರು ಮಾತನಾಡಲಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಮಾನ್ಯ ವೈಸ್ ಛೇರ್ಮನ್‌ರವರೇ, ಸಂಯುಕ್ತ ಜನತಾದಳದ ಪರವಾಗಿ ಸಿಂಧ್ಯಾರವರು ಮಾತನಾಡಿದ್ದಾರೆ. ಬಿ.ಜೆ.ಪಿ.ಪರವಾಗಿ ಅವರ ನಾಯಕರು ಮಾತನಾಡಲಿ. ಜಾತ್ಯಾತೀತ ಜನತಾದಳದ ಪರವಾಗಿ ನಾವು ಮಾತನಾಡುತ್ತೇವೆ. ಒಟ್ಟಿನಲ್ಲಿ ಎಲ್ಲರಿಗೂ ನೀವು ಅವಕಾಶ ಕೊಡಬೇಕು. ಈ ಮೂರು ಜನರದ್ದು ಆದಮೇಲೆ ಬಾಕಿಯವರಿಗೆ ನೀವು ಅವಕಾಶ ಕೊಡುತ್ತೀರೋ, ಬಿಡುತ್ತೀರೋ ಎನ್ನುವುದನ್ನು ಆಮೇಲೆ ತೀರ್ಮಾನ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ :— ಮಸೂದೆಯನ್ನು ಅಂಗೀಕರಿಸುವುದಕ್ಕೆ ನಾನು ತಕರಾರು ಮಾಡುವುದಿಲ್ಲ. ಆದರೆ, ರೈತರ ಪ್ರಶ್ನೆ ಬಂದಾಗ ಇವರು ಸಮಯದ ಬಗ್ಗೆ ಹೇಳುತ್ತಾರೆ. ಇದುವರೆಗೆ ಇಷ್ಟು ದಿನಗಳು ಅಧಿವೇಶನ ನಡೆದಿದ್ದರೂ, ರೈತರ ಬಗ್ಗೆ ಎಷ್ಟು ಗಂಟೆಗಳವರೆಗೆ ಚರ್ಚೆ ನಡೆದಿದೆ? ಇನ್ನು ಮುಂದಿನ ಅಧಿವೇಶನದಲ್ಲಿಯಾದರೂ, ಬೇರೆ ವಿಷಯವನ್ನು ಬದಿಗಿಟ್ಟು, ರೈತರ ಬಗೆಗಿನ ಚರ್ಚೆಯಾಗಿಯೇ ಎರಡು ದಿವಸಗಳನ್ನು ಸಂಪೂರ್ಣವಾಗಿ ಮೀಸಲಿಡಬೇಕೆಂದು ಕೇಳುತ್ತೇನೆ.

ಶ್ರೀ ಕರಿಯಣ್ಣ :— ಕಾರ್ಯಕಲಾಪಗಳ ಸಲಹಾ ಸಮಿತಿ ಇದೆ. ತಾವು ಒಳಗಡೆ ಕುಳಿತು ಯಾವ ರೀತಿ ಚರ್ಚೆ ಮಾಡಬೇಕೋ ಮಾಡಬಹುದು. ಅದರಲ್ಲಿ ಅವರ ನಾಯಕರೂ ಸಹ ಇದ್ದಾರೆ. ಚರ್ಚಿಸಲು ಎಷ್ಟು ಗಂಟೆಗಳು ಬೇಕೆಂಬುದನ್ನು ಅವರು ನಿರ್ಧರಿಸುತ್ತಾರೆ.

+ ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) :— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ತೆಂಗು ಮತ್ತು ಕೊಬ್ಬರಿ ಹಾಗೂ ಅಡಿಕೆ ಬೆಲೆ ಇಂದು ಅರ್ಧಕ್ಕಿಂತಲೂ ಕಡಿಮೆಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ರಾಜ್ಯದಲ್ಲಿ ತೆಂಗು ಬೆಳೆಯನ್ನು ಸುಮಾರು 14-16 ಜಿಲ್ಲೆಗಳಲ್ಲಿ ಬೆಳೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ರಾಜ್ಯದಲ್ಲಿ ತೆಂಗಿನ ಮಾರ್ಕೆಟ್ 60-70 ಕಡೆ ಇದ್ದರೂ, ಕೊಬ್ಬರಿಗೆ ತಿಪಟೂರು, ತುರುವೇಕೆರೆ, ಅರಸೀಕೆರೆಯಲ್ಲಿ ಮಾತ್ರ ಮಾರ್ಕೆಟ್ ಇದೆ. ಈ ಸಂದರ್ಭದಲ್ಲಿ, ರಾಜ್ಯದಲ್ಲಿರುವ ಎಲ್ಲಾ ಕೊಬ್ಬರಿ ಮತ್ತು ತೆಂಗು ಬೆಳೆಗಾರರು ಇಡೀ ಮಾಲನ್ನು ರಾಜ್ಯದ ಮೂಲೆ ಮೂಲೆಗಳಿಂದ ಮಾರ್ಕೆಟಿಗೆ ತರುವ ಸಂದರ್ಭದಲ್ಲಿ ಹೋದವರ್ಷ ಮತ್ತು ಇದಕ್ಕಿಂತ ಹಿಂದಿನ ವರ್ಷಗಳಲ್ಲಿ, ಕೊಬ್ಬರಿ ಬೆಲೆ ಆರು ಸಾವಿರ ರೂಪಾಯಿಗಳು ಜಾಸ್ತಿಯಾಗಿರುವುದನ್ನು ನಾವು ಗಮನಿಸಬಹುದು. ಆದರೆ, ಇವತ್ತು ಮಾರ್ಕೆಟ್‌ನಲ್ಲಿ 3,000-3,200 ಬೆಲೆ ಇದೆ. ಇವತ್ತು ಬೆಳಿಗ್ಗೆ ನಾನು ಮಾರ್ಕೆಟಿಗೆ ಫೋನ್ ಮಾಡಿದಾಗ, ಅದರ ಬೆಲೆ 3,200 ಇರುವುದನ್ನು ಗಮನಿಸಿದೆ. ಮೊನ್ನೆ ತಾನೇ ನಾನು ಮಾತನಾಡುವ ಸಂದರ್ಭದಲ್ಲಿ, ಕೃಷಿ ಸಚಿವರು ಸರ್ಕಾರದ ವತಿಯಿಂದ ನಫೆಡ್‌ನಿಂದ ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ. 3,500 ರೂಪಾಯಿಗಳಿಗಿಂತ

ಕಡಿಮೆ ಆಗಲ್ಲವೆಂದು ಹೇಳಿದರು. ಆ ಧಾರಣೆ 3,200 ರೂಪಾಯಿಗಳವರೆಗೆ ಬಂದಿರುವುದನ್ನು ನಾವು ಕಾಣುತ್ತಿದ್ದೇವೆ. ಇವತ್ತಿನ ಸಂದರ್ಭದಲ್ಲಿ ಕೃಷಿ ಮತ್ತು ಮಾರುಕಟ್ಟೆ ಸಚಿವರಿಗೆ ನಾನು ಹೇಳುವುದೇನೆಂದರೆ, ಈಗಾಗಲೇ ಅನೇಕ ಕೃಷಿ ಉತ್ಪನ್ನಗಳ ಬಗ್ಗೆ ಆಮದು ನೀತಿ ಏನು ತಂದಿದ್ದಾರೆ, ಅದಕ್ಕೆ ಕೇಂದ್ರಸರ್ಕಾರದ ಮೇಲೆ ಒತ್ತಡ ತರುತ್ತಿರುವುದನ್ನು ನಾವು ಕಾಣುತ್ತಿರುವ ಸಂದರ್ಭದಲ್ಲಿ ನಾನೇನು ಹೇಳುತ್ತಿದ್ದೇನೆಂದರೆ, ತಮ್ಮ ಸರ್ಕಾರ ಬರುವುದಕ್ಕಿಂತ ಮುಂಚೆ, ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿನ ವಿಚಾರ ಧಾರೆಗಳನ್ನು ಕೃಷಿ ಬೆಳೆಯುವ ರೈತರಿಗೆ, ಕೃಷಿ ಮಾರ್ಕೆಟ್ ಅನ್ನು ಯಾವ ರೀತಿ ತೆಗೆದುಕೊಂಡು ಬರುತ್ತೇವೆನ್ನುವುದನ್ನು ಉಲ್ಲೇಖಿಸಿದ್ದೀರಿ. ರೈತ ಬೆಳೆದ ಮಾಲಿಗೆ ಧಾರಣೆ ಕಡಿಮೆಯಾದ ಸಂದರ್ಭದಲ್ಲಿ ಸುಮಾರು ಶೇಕಡ 75ಭಾಗದಷ್ಟು ಸಾಲವನ್ನು ಕೃಷಿ ಮಾರುಕಟ್ಟೆವತಿಯಿಂದ ಕೊಡಿಸಿ, ಅದನ್ನು ಇರುವ ರೀತಿಯಲ್ಲಿ ಘೋಷಣೆ ಮಾಡಿದ್ದನ್ನು ನೆನಪಿಸಿಕೊಳ್ಳಬಹುದು. ಇವತ್ತಿನವರೆಗೆ ರಾಜ್ಯದಲ್ಲಿ ಯಾವುದೇ ಮಾರ್ಕೆಟ್‌ನಲ್ಲಿ ಇದಾಗಲಿಲ್ಲವೆಂದು ನಾನು ಹೇಳುತ್ತಿದ್ದೇನೆ. ತಮ್ಮ ಸರ್ಕಾರ ಬರುವುದಕ್ಕಿಂತ ಮುಂಚೆ ಕೊಬ್ಬರಿ ಮತ್ತು ತೆಂಗಿಗೆ ಕೇವಲ 2 ಪರ್ಸೆಂಟ್ ತೆರಿಗೆ ಇತ್ತು. ಇದನ್ನು ತಾವು ಗಮನಿಸಬೇಕು. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೂ ಸಹ, ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಯಾವುದೇ ಹೆಚ್ಚಿನ ತೆರಿಗೆ ವಿಷಯವನ್ನು ಪ್ರಸ್ತಾಪಿಸಲಿಲ್ಲ. ಆದರೆ, ಏಕಾ ಏಕಿ ಆಗಸ್ಟ್ ತಿಂಗಳಲ್ಲಿ ಅದನ್ನು 4 ಪರ್ಸೆಂಟ್‌ಗೆ ಏರಿಸಿದ್ದಾರೆ. ಮಂತ್ರಿಗಳು ಇದನ್ನು ಗಮನಿಸಬೇಕು. ನಾನು ವರ್ತಕರ ಪರವಾಗಿ ಮಾತನಾಡುತ್ತಿಲ್ಲ. ಅಲ್ಲಿರುವ ಎಲ್ಲರೂ ರೈತರ ಮಕ್ಕಳು. ಕೊಬ್ಬರಿ, ತೆಂಗಿನ ಮಂಡಿಗಳನ್ನು ತೆರೆದಿದ್ದಾರೆ. ಮೊನ್ನೆ ಹಣಕಾಸು ಸಚಿವರು, ಚಲನಚಿತ್ರ, ಮಂದಿರ ನಿರ್ಮಾಪಕರ ಅಥವಾ ವರ್ತಕರಿಗೆ ಸುಮಾರು ಐದೂವರೆ ಕೋಟಿ ರೂಪಾಯಿಗಳನ್ನು ಮನ್ನಾ ಮಾಡಲು ಬಿಲ್ ತಂದರು. ಆಗ ಕೂಡ ನಾನು ಪ್ರತಿಭಟನೆ ಮಾಡಿದ್ದೆ. ಕೇವಲ 100-200 ಜನ ಚಲನಚಿತ್ರ ನಿರ್ಮಾಪಕರಿರಬಹುದು, ಚಲನಚಿತ್ರ ನೋಡುವವರಿಗೆ ಸರ್ಕಾರದಿಂದ ಐದೂವರೆ ಕೋಟಿ ರೂಪಾಯಿಗಳನ್ನು ತರಾತುರಿಯಲ್ಲಿ ಮನ್ನಾ ಮಾಡಿರುವುದನ್ನು ಖಂಡಿಸಿದೆ. ಇವತ್ತು ರೈತ ಬೆಳೆಯುವ ತೆಂಗು ಮತ್ತು ಕೊಬ್ಬರಿಗೆ, ರೈತರಿಂದ ಸರ್ಕಾರಕ್ಕೆ ಬರುವ ತೆರಿಗೆ 6 ಕೋಟಿ 40 ಲಕ್ಷ ರೂಪಾಯಿಗಳು ಮಾತ್ರ. ಇದನ್ನು ಮಂತ್ರಿಗಳು ಗಮನಿಸಬೇಕು. ಆ ದೃಷ್ಟಿಯಲ್ಲಿ ವರ್ಷದ ಮಧ್ಯಂತರದಲ್ಲಿ, ಹಾಕಿರುವ ತೆರಿಗೆಯನ್ನು ಪೂರ್ಣಮಟ್ಟದಲ್ಲಿ 4 ಪರ್ಸೆಂಟ್ ಮನ್ನಾ ಮಾಡಿದರೆ ಒಳ್ಳೆಯದು. ಮಾರ್ಕೆಟ್ ಮೇಲಾಗಿರುವ ಕಿರುಕುಳದ ಬಗ್ಗೆ ಹೇಳುತ್ತೇನೆ. ಅನೇಕ ಸಲ ವರ್ತಕರಿಗೆ, ಮಾರಾಟ ಮಾಡಲು ರೈತರು ಮಾಲು ತಂದ ಸಂದರ್ಭದಲ್ಲಿ ಬೆಳಿಗ್ಗೆ 10 ಗಂಟೆಗೆ ಏಲಾವಿಕೆ ನುಗ್ಗಿದಾಗ, ಸುಮಾರು 3,800, 3,700 ಕೊಬ್ಬರಿಗಿದ್ದ ಧಾರಣೆ, ಇದ್ದಕ್ಕಿದ್ದ ಹಾಗೆ, 3,200ಕ್ಕೆ ಬರುವ ವ್ಯವಸ್ಥೆಯಾಗುತ್ತದೆ. ಮಾ. ಸಗೆ ಬಂದ ರೈತ ಇದರಿಂದ ದಿಗ್ಭ್ರಾಂತನಾಗುತ್ತಾನೆ. 'ಸಿ' ಫಾರಂ ಕೊಟ್ಟು, ವರ್ತಕರಿಗೆ ಮಾರಾಟ ತೆರಿಗೆ ಇಲಾಖೆಯವರು ಕಿರುಕುಳ ಕೊಡುತ್ತಿರುವ ಬಗ್ಗೆ ಮುಖ್ಯಮಂತ್ರಿಗಳಿಗೆ

ತಿಳಿಸಿ, ಇದನ್ನು ಪೂರ್ಣಮಟ್ಟದಲ್ಲಿ ತೆಗೆಯಬೇಕು, ವರ್ತಕರಿಂದ ಆಗುತ್ತಿರುವ ಕಿರುಕುಳ ತಪ್ಪಿಸಬೇಕು, ರೈತಮಕ್ಕಳು ಅನೇಕ ಮಂಡಿಗಳನ್ನು ತೆರೆದು, ರೈತರಿಗೆ ಅನುಕೂಲ ಮಾಡಲು ಹೋಗುತ್ತಾರೆಂದು ಹೇಳಿದೆ. ಇವತ್ತಿನ ದಿವಸ ರೈತ ಕಂಗಾಲಾಗಿದ್ದಾನೆ. ನಮ್ಮ ಜಿಲ್ಲೆಯವರಾದ ಕೃಷಿ ಸಚಿವರಿದ್ದಾರೆ, ಉನ್ನತ ಶಿಕ್ಷಣ ಸಚಿವರಿದ್ದಾರೆ, ತಿಮ್ಮಪ್ಪೂರ್‌ರವರಿದ್ದಾರೆ. ರಾಜ್ಯದಲ್ಲಿರುವ ಏಕೈಕ ಮಾರುಕಟ್ಟೆ ಎಂದರೆ ತಿಪಟೂರು. ಈ ವಿಚಾರವನ್ನು ಕೂಲಂಕುಷವಾಗಿ ತಿಳಿದು, ಒಂದು ದಿವಸ ತಾವು ಮೂವರು ಅಲ್ಲಿಗೆ ಬಂದು ರೈತರ ನಿವೇದನೆ ಕೇಳಿ, ಅಲ್ಲಿರುವ ಕೊಬ್ಬರಿ ಮಾರ್ಕೆಟ್ ಅನ್ನು ಸಂಪೂರ್ಣವಾಗಿ ಬದಲಾವಣೆ ಮಾಡಿ, ಅನುಕೂಲಗಳನ್ನು ಕಲ್ಪಿಸಿಕೊಟ್ಟರೆ, ಅವರಿಗೆ ಒಳ್ಳೆಯ ಬೆಲೆ ಕೊಡಲು ಸಾಧ್ಯವಾಗುತ್ತದೆ. ಅದು ಸರ್ಕಾರದಿಂದಾಗುತ್ತದೆ. ಆ ದೃಷ್ಟಿಯಿಂದ ತಾವು ಮೂವರು ಒಂದು ದಿವಸದ ಮಟ್ಟಿಗೆ ಅಲ್ಲಿನ ಬೆಳೆಗಾರರ, ಶಾಸಕರ ಸಭೆ ಕರೆದು ಯಾವ ರೀತಿ ಇದರ ಬಗ್ಗೆ ಚರ್ಚೆ ಮಾಡಬಹುದು ಎಂಬುದನ್ನು ತಿಳಿಸಿದರೆ, ಕುಸಿದಿರುವ ಕೊಬ್ಬರಿ, ತೆಂಗಿನ ಬೆಲೆಗಳನ್ನು ಜಾಸ್ತಿ ಮಾಡಬಹುದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ, ನಾನು ಮೊನ್ನೆ ತುರುವೇಕೆರೆ ಮಾರ್ಕೆಟ್ ಬಗ್ಗೆ ಸಚಿವರಿಗೆ ತಿಳಿಸಲು ಶೂನ್ಯವೇಳೆಯಲ್ಲಿ ಒಂದು ಪ್ರಶ್ನೆ ಎತ್ತಿದ್ದೆ. ಒಂದೇ ರಾತ್ರಿಯಲ್ಲಿ ಮಾರ್ಕೆಟ್ 11 ಮಂಡಿಗಳಿಗೆ ನುಗ್ಗಿ ಚಾಕು ತೋರಿಸಿ ದರೋಡೆ ಮಾಡಲಾಗಿದ್ದು, ಅದರ ಫೋಟೋಗಳನ್ನು ನಾನು ತಂದಿದ್ದು, ಅದನ್ನು ಸಚಿವರಿಗೆ, ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸುತ್ತೇನೆ. ಇದರಲ್ಲಿ ಪೋಲೀಸರ ವೈಫಲ್ಯವನ್ನು ನಾನು ಮಾನ್ಯ ಗೃಹಸಚಿವರಿಗೆ ತಿಳಿಸಿದ್ದೇನೆ. ಇಂಥ ಒಂದು ವಾತಾವರಣದಲ್ಲಿ ನಾವು ಅವರಿಗೆ ಸಹಕರಿಸಬೇಕು. ರೈತರ ದೃಷ್ಟಾಂತವೇನಿದೆ, ಅದನ್ನು ಹೋಗಲಾಡಿಸಲು ಸರ್ಕಾರ ಮುಂದಾಗಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

1.20 ಪಿ.ಎಂ.

+ ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :— ಮಾನ್ಯ ಅಧ್ಯಕ್ಷರೇ, ಅಧಿವೇಶನದ ಕೊನೆಯ ದಿವಸಕ್ಕೆ ನಾವು ತಲುಪಿದ್ದೇವೆ. ಈ ಅಧಿವೇಶನದಲ್ಲಿ ರೈತರ ಮತ್ತು ಡಾ: ರಾಜ್‌ಕುಮಾರ್‌ರವರ ಅಪಹರಣದ ಬಗ್ಗೆ ಚರ್ಚೆ ಮಾಡಲು ಸರ್ಕಾರ ಅವಕಾಶ ಕೊಡುತ್ತದೆಂದು ನಾನು ತಿಳಿದಿದ್ದೆ. ಡಾ: ರಾಜ್‌ಕುಮಾರ್‌ರವರ ಅಪಹರಣದ ವಿಚಾರ ಗಂಭೀರವಾಗಿದ್ದು, ಅದರ ಬಗ್ಗೆ ಇನ್ನೊಂದು ಸಾರಿ ಚರ್ಚಿಸೋಣ. ಆದರೆ, ರೈತರ ಬಗ್ಗೆ ಅಧಿವೇಶನದ ಕೊನೆಯ ದಿವಸ ಪ್ರತಿಭಟನೆ ಮಾಡಿ, ಧರಣಿ ಮಾಡುವ ಮೂಲಕ ನಾವು ಚರ್ಚೆ ಮಾಡಬೇಕಾದ ಪ್ರಸಂಗವನ್ನು ನೋಡಿದರೆ, ನಿಜಕ್ಕೂ ಬಹಳ ವ್ಯಥೆಯಾಗುತ್ತದೆ. ಈ ಸದನದಲ್ಲಿ 100ಕ್ಕೆ 75 ಜನರು ರೈತರ ಮಕ್ಕಳಿದ್ದೇವೆ. ರೈತರ ಬಗ್ಗೆ ಚಿಂತನೆ ಮಾಡುವಂಥ ಶಾಸಕರಿದ್ದೇವೆ. ಆದರೆ, ರೈತರ ಬಗ್ಗೆ ಚರ್ಚೆ ನಡೆಯಲಿಲ್ಲ. ಅಧಿವೇಶನ ನಡೆಯುತ್ತಿರಬೇಕಾದರೆ, ಮೆಕ್ಕೆಜೋಳವನ್ನು ರಸ್ತೆಗೆ ಸುರಿದರು, ತೆಂಗಿಗೆ ಹೊಸದುರ್ಗದಲ್ಲಿ

ಬೆಂಕಿ ಹಚ್ಚಿದರು, ಹಾವೇರಿಯಲ್ಲಿ, ಪ್ರತಿಭಟನೆ ಮಾಡಿದರು. ಇದರ ಬಗ್ಗೆ ಸರ್ಕಾರ ಯಾವುದೇ ಚಿಂತನೆ ಮಾಡಲಿಲ್ಲ. ಇವತ್ತು ರೈತರ ಪರಿಸ್ಥಿತಿ ಏನಾಗಿದೆಯೆಂದರೆ, ರಾಜ್ಯದಲ್ಲಿ, ವ್ಯವಸಾಯ ಮಾಡುವವರು ಮನೆಯವರೆಲ್ಲಾ ದುಡಿದರೂ ಒಂದು ಹೊತ್ತಿನ ಊಟ ಪಡೆಯಲು ಅಸಮರ್ಥರಾಗಿದ್ದು, ನಾವು ಅವರ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗುತ್ತದೆ. ಉದಾಹರಣೆಗೆ ಇವತ್ತು ತೆಂಗಿನಕಾಯಿ ಬೆಲೆ ಏನಾಗಿದೆಯೆಂದರೆ, ಒಂದು ನಿಂಬೆ ಹಣ್ಣಿನ ಬೆಲೆಯಾಗಿದೆ. ಒಂದು ಮಾವಿನ ಹಣ್ಣಿನ ಬೆಲೆ ಹತ್ತು ರೂಪಾಯಿಯಾದರೆ, ಒಂದು ತೆಂಗಿನ ಕಾಯಿ ಬೆಲೆ ಒಂದು ರೂಪಾಯಿಯಾಗಿದೆ. ತೆಂಗು ಬೆಳೆಯನ್ನು ವರ್ಷದಲ್ಲಿ ನಾಲ್ಕು ಸಾರಿ ಉತ್ತು, ಗೊಬ್ಬರ, ನೀರು ಹಾಕಿ, ಕೀಟ ಬಾಧೆಯನ್ನು ನಿರ್ಮೂಲನೆ ಮಾಡಿ, ಅವರು ಬೆಳೆದ ತೆಂಗಿನಕಾಯಿಯನ್ನು ಮಾರ್ಕೆಟ್‌ಗೆ ತಂದರೆ, 2,800, 2,900 ರೂಪಾಯಿ ದರ ಇರುತ್ತದೆ. ಇವತ್ತು ರೈತ ಮಾಡುವ ವಸ್ತುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಗಿದೆ. ಅವನು ತೆಗೆದುಕೊಳ್ಳುವ ವಸ್ತುಗಳನ್ನು ಅದರ ಮೂರುಪಟ್ಟು ದುಬಾರಿಯಾಗಿ ಕೊಳ್ಳಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಲಕ್ಷ್ಮೀನಾರಾಯಣರವರು ಹೇಳಿದಹಾಗೆ, ಎಲ್ಲಿಯವರೆಗೆ ರೈತ ಯೋಚಿಸಿದ್ದಾನೆಂದರೆ, ನಾವು ಕೂಲಿ ಮಾಡುವುದೊಳ್ಳೆಯದು, ಇವತ್ತು ವ್ಯವಸಾಯವನ್ನು ಬಿಟ್ಟುಬಿಡಬೇಕೆನ್ನುವ ತೀರ್ಮಾನಕ್ಕೆ ಬಂದಿದ್ದಾನೆ. ಬಹಳ ಹಿಂದಿನ ಸರ್ಕಾರ ರೈತ ದೇಶದ ಬೆನ್ನೆಲುಬು, "ಜೈ ಜವಾನ್ ಜೈ ಕಿಸಾನ್" ಎಂದು ಹೇಳಿದ್ದು ಘೋಷಣೆಯೇ ಹೊರತು ರೈತರ ಬಗ್ಗೆ ಯಾರೂ ಚಿಂತನೆ ಮಾಡಲಿಲ್ಲ. ಅವನು ವಸ್ತುಗಳನ್ನು ಮಾರ್ಕೆಟ್‌ಗೆ ತಂದರೆ, ಅವನಿಗೆ ಮಧ್ಯವರ್ತಿಗಳ ಕಾಟವಿದೆ, ಶೋಷಣೆಯಾಗುತ್ತದೆ. ಇವತ್ತು ಸದನದಲ್ಲಿ ರೈತರ ಬಗ್ಗೆ ಬೇಕಾದಷ್ಟು ಮಸೂದೆ ತಂದು ತಿದ್ದುಪಡಿ ಮಾಡಿದ್ದೇವೆ. ಅದರಿಂದೇನೂ ಪ್ರಯೋಜನವಾಗಲಿಲ್ಲ. ಅದರ ಬಗ್ಗೆ ಅಧಿಕಾರಿಗಳು ಚಿಂತನೆ ಮಾಡಲಿಲ್ಲ. ತಿದ್ದುಪಡಿ ತಂದಿದ್ದು ಪುಸ್ತಕದಲ್ಲೇ ಉಳಿಯಿತು. ಕೊಬ್ಬರಿ ಮಾಡಲು 11 ತಿಂಗಳು ತೆಂಗಿನಕಾಯಿಯನ್ನು ಪೋಷಣೆ ಮಾಡಿಡಬೇಕಾಗುತ್ತದೆ. ಅದನ್ನು ಮಾರ್ಕೆಟ್‌ಗೆ ತಂದರೆ ಅದರ ಬೆಲೆ 3,100, 3,200 ರೂಪಾಯಿಗಳಿರುತ್ತದೆ. ಇವತ್ತು ರಾಜ್ಯದಲ್ಲಿ ಅತ್ಯಂತ ಭೀಕರವಾದ ನುಸಿರೋಗ ಬಂತು. ಒಂದು ವರ್ಷದಿಂದ ಚುನಾವಣಾ ಪ್ರಣಾಳಿಕೆಯಲ್ಲಿ, ನಾವು ಶೇಕಡ 50 ರಷ್ಟು ಭಾಗವನ್ನು ಕೊಟ್ಟು ಖರೀದಿಸುತ್ತೇವೆ ಎಂದಿರಿ. ನೀವು ಶೇಕಡ 50ರಷ್ಟನ್ನು ಖರೀದಿಸುವುದು ಬೇಡ, ನಾವೇನು ಮಾರ್ಕೆಟ್‌ಗೆ ತಂದಿದ್ದೇವೆ, ಅದಕ್ಕೆ ಸರಿಯಾದ ಬೆಲೆ ಕೊಟ್ಟು ಕೊಂಡರೆ ಸಾಕು. ಅದರ ಬಗ್ಗೆ ಮಾನ್ಯ ಮಾರುಕಟ್ಟೆ ಸಚಿವರು ಚಿಂತಿಸಬೇಕು. ಇವತ್ತು ಕೇಂದ್ರ ಸರ್ಕಾರ ಆಮದು ನೀತಿಯನ್ನು ಜಾರಿಗೆ ತಂದರೂ ಸಹ ರೈತರು ನೋಡುವುದು ರಾಜ್ಯಸರ್ಕಾರವನ್ನೇ. ಈ ಬಗ್ಗೆ ರಾಜ್ಯ ಸರ್ಕಾರವೇನಾದರೂ ಕ್ರಮ ತೆಗೆದುಕೊಳ್ಳುತ್ತಿದೆಯೇ? ಅದರ ಬಗ್ಗೆ ಚಿಂತನೆ ಮಾಡಲಾಗುತ್ತಿದೆಯೇ? ನಾವು ಕಳುಹಿಸಿದ ಪ್ರತಿನಿಧಿಗಳು ವಿಧಾನಸಭೆಯಲ್ಲಿ ಇದನ್ನು ಪ್ರಸ್ತಾಪಿಸುತ್ತಿದ್ದಾರೆಯೇ? ಎಂದು ನೋಡುತ್ತಾರೆ. ಇವತ್ತು ತಿಪಟೂರು ತಾಲ್ಲೂಕಿನಲ್ಲಿ 8 ಲಕ್ಷ ಮರಗಳಿಗೆ ಕಪ್ಪು ತಲೆ

ಹುಳು ರೋಗ ಬಂದಿದ್ದು, ರೋಗ ಕಾಣಿಸಿಕೊಂಡು 10 ವರ್ಷಗಳಾಯಿತು. ನಮ್ಮ ಸರ್ಕಾರವಿದ್ದಾಗಲೂ ಮಂತ್ರಿಗಳಿಗೆ ಒತ್ತಾಯಿಸಿದ್ದೆವು, ಈಗಲೂ ಒತ್ತಾಯ ಮಾಡುತ್ತಿದ್ದೇವೆ. ನೀವೇನೂ ಮಾಡಬೇಕಾಗಿಲ್ಲ. ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಹೋಗಬೇಕಾದರೆ ಯಾವುದೇ ಶಾಸಕರಾಗಲೀ, ಸಚಿವರಾಗಲೀ ಮರಗಳನ್ನು ಗಮನಿಸಿದರೆ ಅವರು ರೈತರಲ್ಲದಿದ್ದರೂ, ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾಗುತ್ತದೆ. ಇದರ ಜೊತೆಗೆ, ನುಸಿರೋಗ ಕೀಟದ ಸಾರಿ ಬಂದು, ಆ ರೋಗಕ್ಕೆ ಕೀಟನಾಶಕಗಳನ್ನು ಸರ್ಕಾರದ ವತಿಯಿಂದ ಕೊಡುವ ವ್ಯವಸ್ಥೆ ಮಾಡಿಲ್ಲ, ಇನ್ನೂ ಅದು ನಿರ್ಮೂಲನೆಯಾಗಿಲ್ಲ. ಆದುದರಿಂದ, ಇವತ್ತು ಮುಖ್ಯಮಂತ್ರಿಗಳು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದನ್ನು ಅನುಷ್ಠಾನಕ್ಕೆ ತರಲು ಕಷ್ಟವಾಗಿರಬಹುದಾದರೂ, ಅದರ ಬಗ್ಗೆ ಚಿಂತಿಸಿ ಶೇಕಡ 50 ಭಾಗ ಹಣವನ್ನು ಕೊಡಲು ಅವಕಾಶವಿದ್ದರೆ, ನಾನು ವಿರೋಧ ಮಾಡುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :— ಮಾನ್ಯ ಅಧ್ಯಕ್ಷರೇ, ನುಸಿ ರೋಗ ಬಂದ ಸಂದರ್ಭದಲ್ಲಿ, ಸರ್ಕಾರ ಏನೂ ಮಾಡಿಲ್ಲವೆಂದು ತಿಳಿಸಿದ್ದಾರೆ. ನುಸಿ ರೋಗ ಹೋದ ವರ್ಷ ವ್ಯಾಪಕವಾಗಿದ್ದ ಸಂದರ್ಭದಲ್ಲಿ, ನಾವೇನು ಮಾಡಿದ್ದೇವೆಂದರೆ, ಅದಕ್ಕೆ ರೈತರಿಂದ ಎಷ್ಟರಮಟ್ಟಿಗೆ ಸ್ಪಂದನೆ ಆಯಿತೆಂಬ ವಿವರಣೆ ನಾನು ಕೊಡಬೇಕಾಗುತ್ತದೆ. ನಾವು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ, ಟಾಸ್ಕ್‌ಫೋರ್ಸ್ ರಚಿಸಿ, ಎಲ್ಲಾ ಇಲಾಖಾಧಿಕಾರಿಗಳನ್ನು ಸ್ಥಳಕ್ಕೆ ಡೆಪ್ಯೂಟ್ ಮಾಡಿ, ಮೆಡಿಸಿನ್ ಕೊಟ್ಟಿದ್ದೇವೆ. 75 ಪರ್ಸೆಂಟ್ ಸಬ್ಸಿಡಿ ಕೊಟ್ಟು, 25 ಪರ್ಸೆಂಟ್ ಮಾತ್ರ ಕೊಡಬೇಕಾಗಿ ಬಂತು. ಒಳ್ಳೆಯ ಕ್ವಾಲಿಟಿ ಮೆಡಿಸಿನ್ ಕೊಟ್ಟರೆಂದು ಇದೇ ಸದನದಲ್ಲಿ ಚರ್ಚೆಯಾಯಿತು. ಅದನ್ನು ಪ್ರಯೋಗ ಮಾಡುವ ಸಂದರ್ಭದಲ್ಲಿ, ಕೆಲವು ಕಡೆ ರೈತರಿಂದ ಸ್ಪಂದನೆ ಸಿಗಲಿಲ್ಲ. ಕೆಲವು ಕಡೆ ಎಲ್ಲಾ ರೈತರು ಸಾಮೂಹಿಕವಾಗಿ ಭಾಗವಹಿಸಲಿಲ್ಲ. ಆ ಕಾರಣದಿಂದಾಗಿ, ಆ ರೋಗ ನಿಯಂತ್ರಣ ಮಾಡುವುದಕ್ಕಾಗಲಿಲ್ಲ. ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ, ನಾವು ಸಪ್ಲೈ ಮಾಡಿದ ಮೆಡಿಸಿನ್‌ನಲ್ಲೇ 90 ಪರ್ಸೆಂಟ್ ಖರ್ಚು ಮಾಡಿ ಅದರ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಅವಕಾಶವಾಯಿತು. ಈಗ ರೋಗ ಸ್ವಲ್ಪ ಕಡಿಮೆಯಾಗಿದೆ. ನೂರಕ್ಕೆ ನೂರರಷ್ಟು ರೋಗ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನಾವು ರೋಗ ನಿಯಂತ್ರಣ ಮಾಡಬಹುದೇ ವಿನಃ ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಇದನ್ನು ಸ್ಪ್ರೇ ಮಾಡಬೇಕಾದಾಗ ಎಲ್ಲ ರೈತರೂ ಸಾಮೂಹಿಕವಾಗಿ ಸೇರಿ ಮಾಡಬೇಕಾಗುತ್ತದೆ. ರೈತರ ಮುಂದೆ ಹೋದಾಗ, ಅವರಿಂದ ಸ್ಪಂದನೆ ಸಿಗಲಿಲ್ಲವೆಂದು ತಿಳಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಇವತ್ತೇನು ಕೃಷಿ ಸಚಿವರು ಹೇಳುತ್ತಿದ್ದಾರೆ, ಅದನ್ನು ನಾನು ಕೃಷಿ ಸಚಿವರ ಹತ್ತಿರ ಪ್ರಸ್ತಾಪಿಸಿದ್ದೆ. ನಮ್ಮಲ್ಲಿ 2,000 ತೆಂಗಿನ ಗಿಡ ನೆಟ್ಟವರೂ, 100 ಗಿಡ ನೆಟ್ಟವರೂ ಇದ್ದಾರೆ. 100 ತೆಂಗಿನ ಗಿಡ ನೆಟ್ಟವರಿಗೆ ಪೆಸ್ಟಿಸೈಡ್

ಅನ್ನ 25 ಪರ್ಸೆಂಟ್ ಕೂಡ ತೆಗೆದುಕೊಳ್ಳುವುದಕ್ಕೆ ಅವನಿಗೆ ಸಾಧ್ಯವಾಗುತ್ತಿಲ್ಲ. ಆದುದರಿಂದ, ನೀವು ಸಾಮೂಹಿಕವಾಗಿ ಎಷ್ಟು ಸಮಯದವರೆಗೆ ಸ್ಪ್ರೇ ಮಾಡುವುದಿಲ್ಲವೋ, ಅಲ್ಲಿಯವರೆಗೆ ನಿಮಗೆ ಈ ರೋಗವನ್ನು ನಿಯಂತ್ರಿಸಲಾಗುವುದಿಲ್ಲ, ಪೂರ್ಣವಾಗಿ ತೆಗೆಯಲೂ ಆಗುವುದಿಲ್ಲ. ಆದುದರಿಂದ ನೀವು ಶೇಕಡ 100ಕ್ಕೆ 100ಭಾಗ ರೈತರಿಗೆ ಸತ್ತ ಮೇಲೆ, ಆತ್ಮಹತ್ಯೆ ಮಾಡಿಕೊಂಡ ನಂತರ ಪರಿಹಾರ ಕೊಡೋದಕ್ಕಿಂತ, ಅವರು ಬದುಕಿದ್ದಾಗಲೇ ಪರಿಹಾರ ಕೊಡೋಣ. ಅದರ ಬಗ್ಗೆ ಚಿಂತಿಸಿ, ಇವತ್ತು ಕಡೂರು ತಾಲ್ಲೂಕಿನಲ್ಲಿ ಕಪ್ಪು ತಲೆ ಹುಳು ರೋಗ ಬಂದಿದ್ದು, ಕನಿಷ್ಠ 8-9 ಲಕ್ಷ ಮರಗಳು ಹೋಗಿವೆ. ಅದು ರೈತರದಾದರೂ, ಅದು ಸರ್ಕಾರದ ಆಸ್ತಿ. ನಮ್ಮ ಜಿಲ್ಲೆಗೆ ಬಂದಾಗ ಇದರ ಬಗ್ಗೆ ತೋಟಗಾರಿಕಾ ಸಚಿವರಲ್ಲಿ ನಿವೇದಿಸಿದ್ದೆ. ನಿಮ್ಮ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿದ್ದರೆ ಕಪ್ಪು ತಲೆ ಹುಳು ರೋಗ ನಿರ್ಮೂಲನೆ ಮಾಡಬಹುದೆಂದು ಹೇಳಿದ್ದು, ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಲಿಲ್ಲ. ಇವತ್ತು ವಾಸ್ತವವಾಗಿ ಕಡೂರು ತಾಲ್ಲೂಕಿನಲ್ಲಿ ಕಂಬಳಿ ಹುಳುವಿನ ಹಾವಳಿಯಿದೆ. ನೆಲಗಡಲೆ ಬೆಳೆಗೆ ಈ ಕಂಬಳಿ ಹುಳದ ಹಾವಳಿ ನಮಗೆ ಏಪ್ರಿಲ್ ತಿಂಗಳಲ್ಲಿ, ಎಷ್ಟು ಬರುತ್ತದೆಂದರೆ, ರೈತ ಬೆಳೆದಂಥ ಬೆಳೆಯಲ್ಲಿ ಶೇಕಡ 10ರಷ್ಟು ಕೂಡ ಅವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅವನು ಕೊಟ್ಟಂಥ ಗೊಬ್ಬರವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ರೈತ, ರೈತನ ಹೆಂಡತಿ, ಅವನ ಮಕ್ಕಳು ಹಾಗೂ ಅವನಲ್ಲಿರುವ ದನಕರುಗಳು ಪಟ್ಟಿರುವ ಶ್ರಮಕ್ಕೆ ನಾವು ಸರಿಯಾದ ಬೆಲೆ ನಿಗದಿ ಮಾಡದಿದ್ದರೆ ನಾವು ಯಾವ ರೀತಿ ರೈತರ ಬಗ್ಗೆ ಚಿಂತನೆ ಮಾಡುತ್ತೇವೆ? ಯಾವ ರೀತಿಯಲ್ಲಿ ರೈತರಿಗೆ ನಾವು ಸಹಕಾರ ನೀಡುತ್ತೇವೆ? ರಾಜ್ಯ ಸರ್ಕಾರ ಇರಬಹುದು ಅಥವಾ ಕೇಂದ್ರ ಸರ್ಕಾರ ಇರಬಹುದು ಇವತ್ತು ನೀವು ಪರರಾಷ್ಟ್ರದಿಂದ ಆಮದು ಮಾಡಿಕೊಂಡರೆ ನಮ್ಮ ರಾಷ್ಟ್ರದಲ್ಲಿನ ರೈತ ಬೆಳೆದ ಮಾಲನ್ನು ಯಾರು ತೆಗೆದುಕೊಳ್ಳುತ್ತಾರೆ? ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಇವತ್ತು ಪಾಮಾಯಿಲ್ ಏಳೂವರೆ ರೂಪಾಯಿಗೆ ಸಿಗುವ ಹಾಗೆ ಇದ್ದರೆ ನಮ್ಮ ರೈತರು ಬೆಳೆದ ನೆಲಗಡಲೆಯನ್ನು ಯಾರು ತೆಗೆದುಕೊಳ್ಳುತ್ತಾರೆ? ಇಲ್ಲಾಂದ್ರೆ, ರಾಜ್ಯ ಸರ್ಕಾರವಾಗಲಿ ಅಥವಾ ಕೇಂದ್ರ ಸರ್ಕಾರವಾಗಲಿ ಒಂದು ನಿರ್ಧಾರ ಮಾಡಿ. ರೈತರು ಏನು ಬೆಳೆಯುವುದು ಬೇಡ ಪರದೇಶದಿಂದ ನಾವು ಆಮದನ್ನು ಮಾಡಿಕೊಂಡು ನಿಮಗೆಲ್ಲಾ ಸಬ್ಸಿಡಿ ರೂಪದಲ್ಲಿ ಕೊಡುತ್ತೇವೆ ಎನ್ನುವಂಥ ಒಂದು ತೀರ್ಮಾನ ತೆಗೆದುಕೊಳ್ಳಿ. ಕೇಂದ್ರ ಸರ್ಕಾರದವರು, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಏನು ಇದೆ ಅವರು ರಾಜ್ಯದ ಮುಖ್ಯಮಂತ್ರಿ ಅಥವಾ ಕೃಷಿ ಸಚಿವರನ್ನು ಕರೆದು ಇದರ ಬಗ್ಗೆ ಚರ್ಚಿಸಬೇಕು. ಯಾವ ಬೆಳೆಯನ್ನು ನಾವು ಆಮದು ಮಾಡಿಕೊಂಡರೆ ನಮ್ಮ ರೈತರ ಸ್ಥಿತಿಗೆ ಕಷ್ಟ ಬರುತ್ತದೆ, ಎಂಬುದನ್ನು ಕೂಡ ಆಲೋಚಿಸಬೇಕಾಗುತ್ತದೆ. ನಾನು ಕೇವಲ ರಾಜ್ಯ ಸರ್ಕಾರಕ್ಕೆ ಮಾತ್ರ ಹೇಳುತ್ತಿಲ್ಲ, ಈ ಮಾತನ್ನು ನಾನಿಂದು ಕೇಂದ್ರ ಸರ್ಕಾರಕ್ಕೂ ಕೂಡ ಹೇಳಬೇಕಾಗುತ್ತದೆ. ಈ ವಿಷಯದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಇದರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ :— ತಾವು ಒಳ್ಳೆಯ ಸಲಹೆಯನ್ನು ಕೊಡುತ್ತಿದ್ದೀರಿ. ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ, ಆಮದು ಮಾಡುವ ವಿಚಾರದಲ್ಲಿ ಸಂಬಂಧಪಟ್ಟ ರಾಜ್ಯದ ಮುಖ್ಯಮಂತ್ರಿ ಹಾಗೂ ಕೃಷಿ ಸಚಿವರನ್ನು ಗಮನಕ್ಕೆ ತೆಗೆದುಕೊಂಡು ಅವರ ಸಲಹೆಗಳನ್ನು ಪಡೆದುಕೊಂಡು ಆ ಕೆಲಸ ಮಾಡಬೇಕು ಎನ್ನುವ ತಮ್ಮ ಸಲಹೆ ಬಹಳ ಮುಖ್ಯವಾದುದು. ನಾನು ಮೊನ್ನೆ ಕೃಷಿ ಸಚಿವರ ಸಭೆ ನಡೆದಂಥ ಸಂದರ್ಭದಲ್ಲಿ ಭಾಗವಹಿಸಿ, ರಾಜ್ಯ ಸರ್ಕಾರವನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡು, ಟ್ಯಾರಿಫ್ ಅನ್ನು ಜಾಸ್ತಿ ಮಾಡಬೇಕು ಎನ್ನುವ ಸಲಹೆ ನಾನು ಕೊಟ್ಟರೆ, ಕೆಲವು ರಾಜ್ಯದವರು ಆಮದು ಜಾಸ್ತಿಯಾಗಬೇಕೆಂದರು, ಇನ್ನು ಕೆಲವು ರಾಜ್ಯದವರು ನಮ್ಮ ಸಲಹೆಯನ್ನು ಸ್ವಾಗತಿಸಿದರು. ನಮ್ಮ ಒಕ್ಕೂಟದ ವ್ಯವಸ್ಥೆಯಲ್ಲಿ, ನಮ್ಮ ತೊಂದರೆ ಹಾಗೂ ಬೇಡಿಕೆ ಒಂದು ರೀತಿ ಇದ್ದರೆ, ಮತ್ತೊಂದು ರಾಜ್ಯದ್ದು ಬೇರೆ ರೀತಿಯಾಗಿರುತ್ತದೆ. ಹೀಗಾಗಿ ಇಂಥ ವ್ಯವಸ್ಥೆಯಲ್ಲಿ ನಾವು ಹೇಗೆ ಒತ್ತಾಯ ಮಾಡುವುದು ಎನ್ನುವುದೇ ಬಹಳ ಮುಖ್ಯವಾಗಿರುವ ಅಂಶ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಮಾನ್ಯ ಅಧ್ಯಕ್ಷರೆ, ನಾವು ಮತ್ತು ಮಾನ್ಯ ಹನುಮೇಗೌಡರವರು ರಾಜಸ್ಥಾನದ ಕೆಲವು 4-5 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದಂಥ ಸಂದರ್ಭದಲ್ಲಿ, ನೋಡಿದಾಗ ಅಲ್ಲಿ ಏನೂ ಬೆಳೆಯುವುದಿಲ್ಲ. ಅವರಿಗೆ ಆಮದು ಮಾಡಿಕೊಳ್ಳದಿದ್ದರೆ ಬೇರೆ ದಾರಿಯೇ ಇಲ್ಲ. ಆದರೆ, ನಮ್ಮ ರಾಜ್ಯದಲ್ಲಿ ನಮ್ಮ ರೈತರು ಬೆಳೆಯದೇ ಇರತಕ್ಕಂಥ ಬೆಳೆಯೇ ಇಲ್ಲ. ಒಂದು ಭಾಗದಲ್ಲಿ ಜೋಳ ಬೆಳೆದರೆ ಮತ್ತೊಂದು ಭಾಗದಲ್ಲಿ ಮೆಕ್ಕೆಜೋಳ ಬೆಳೆಯುತ್ತಾರೆ, ಮಂಡ್ಯದಲ್ಲಿ ಭತ್ತ ಬೆಳೆಯುತ್ತಾರೆ, ತಿಪಟೂರು, ಅರಸೀಕೆರೆ, ಕಡೂರು, ಈ ಭಾಗದಲ್ಲಿ ತೆಂಗಿನ ಬೆಳೆ ಜಾಸ್ತಿ ಬೆಳೆಯುತ್ತಾರೆ. ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಕಡೂರು ತಾಲ್ಲೂಕಿನಲ್ಲಿ 1999ರಲ್ಲಿ ಕಂಬಳಿ ಹುಳದ ಹಾವಳಿ 250 ಹೆಕ್ಟೇರ್‌ನಲ್ಲಿ ಇದ್ದುದ್ದು ಇವತ್ತು ಸುಮಾರು ಮೂರು ಸಾವಿರ ಹೆಕ್ಟೇರ್‌ನಲ್ಲಿ ಕಾಣಿಸಿಕೊಂಡಿದೆ. ಇದನ್ನು ನಿರ್ಮೂಲನೆ ಮಾಡಲಿಕ್ಕೆ ಕೇಂದ್ರ ಸರ್ಕಾರದಿಂದ ಎಂಡಾಮಿಕ್ ಏರಿಯಾ ಎಂದು ಮಾಡಲಿಕ್ಕೆ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರದವರು ಒತ್ತಡ ತರಬೇಕು ಎನ್ನುವ ವಿಚಾರವನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ರೈತರು ಬೆಳೆದಂಥ ಹಣ್ಣುಗಳಿಗೆ ಕೆಲವು ತಾಲ್ಲೂಕು ಕೇಂದ್ರಗಳಲ್ಲಿ ಶೀಥಲೀಕರಣದ ವ್ಯವಸ್ಥೆ ಮಾಡಿ, ಬೆಲೆ ಬಂದಂಥ ಸಂದರ್ಭದಲ್ಲಿ ರೈತರಿಗೆ ಕೊಡಲಿಕ್ಕೆ ಅವಕಾಶ ಮಾಡಿಕೊಡಬೇಕು. ತೆಂಗಿನಕಾಯಿಗಳನ್ನು ಕೊಳ್ಳುವುದಕ್ಕೆ ಕೇಂದ್ರಗಳನ್ನು ಸರ್ಕಾರ ಸ್ಥಾಪಿಸಿ, ತೆಂಗಿನಕಾಯಿಗಳನ್ನು ವ್ಯವಸ್ಥಿತವಾದ ಗೋದಾಮ್‌ನಲ್ಲಿ ಇಟ್ಟು, ನಂತರ ರೈತರಿಗೆ ಶೇಕಡ 50ರಷ್ಟು ಹಣ ಏನು ಕೊಡುತ್ತೇವೆಂದು ಹೇಳಿದ್ದೀರಿ ಅದನ್ನಾದರೂ ಮಾಡಬೇಕೆಂದು ಮಾನ್ಯ ಸಚಿವರಿಗೆ ತಮ್ಮ ಮೂಲಕ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸುಣಗಾರ್ ಶರಣಪ್ಪ ತಿಪ್ಪಣ್ಣ (ಸಿಂಧಗಿ) :— ಮಾನ್ಯ ಅಧ್ಯಕ್ಷರೆ, ನಮ್ಮ

ಭಾಗದಲ್ಲಿ ಅತಿ ಹೆಚ್ಚಾಗಿ ಜೋಳ, ಸಜ್ಜೆ, ತೊಗರಿ ಬೇಳೆ, ಈ ರೀತಿಯ ಬೆಳೆಗಳನ್ನು ಬೆಳೆದು ರೈತ ತಾನು ಊಟ ಮಾಡುವುದರ ಜೊತೆಗೆ ಇಡೀ ದೇಶಕ್ಕೆ ಅನ್ನ ಹಾಕುವ ಗುರುತರವಾದ ಜವಾಬ್ದಾರಿಯನ್ನು ಹೊಂದಿರುತ್ತಾನೆ. ಅದೇ ರೀತಿಯಲ್ಲಿ ಈ ಭಾಗದಲ್ಲಿ ಕೊಬ್ಬರಿ, ಭತ್ತ, ಮುಂತಾದ ಬೆಳೆಗಳನ್ನು ಬೆಳೆಯುವುದನ್ನು ನಾವಿಂದು ಕಾಣುತ್ತಿದ್ದೇವೆ. ಈ ಕಡೆ ನೀರಾವರಿ ಪ್ರದೇಶವಾಗಿದೆ ಆದರೆ ನಮ್ಮ ವಿಜಾಪುರ ಜಿಲ್ಲೆಯಲ್ಲಿ ನೀರಾವರಿ ಬಹಳ ಕಡಿಮೆ ಇದ್ದು, ನೀರನ್ನು ಕಾಣದೇ ಇರುವ ರೈತರು ಒಣ ಬೇಸಾಯವನ್ನು ಅವಲಂಬಿಸಿಕೊಂಡಿರುವವರು ಇದ್ದಾರೆ. ಇಂಥ ಪ್ರದೇಶಗಳಲ್ಲಿ ಪ್ರಮುಖ ಬೆಳೆಗಳಾದ ಜೋಳ, ಸಜ್ಜೆ, ಮುಂತಾದ ಬೆಳೆಗಳಲ್ಲಿ ಇಂದು ಜೋಳವನ್ನು ಒಂದು ಎಕರೆಯಲ್ಲಿ ಬೆಳೆಯಬೇಕಾದರೆ ಅವನು ಸುಮಾರು 1500-00 ರೂಪಾಯಿ ಖರ್ಚು ಮಾಡಿದ್ದರೆ ಅವನು ಅದನ್ನು ಮಾರಾಟ ಮಾಡಿದರೆ ಸುಮಾರು 1900-00 ರೂಪಾಯಿ ಸಿಗುತ್ತದೆ. ಅಂದರೆ ಇಡೀ ಒಂದು ವರ್ಷದಲ್ಲಿ ಬೆಳೆಯತಕ್ಕಂಥ ಮಾಲು ಈ ಪ್ರದೇಶಗಳಲ್ಲಿ ಇದ್ದರೆ, ಅವರಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆ ಎಂದು ಎರಡು ಬೆಳೆಯನ್ನು ಏನು ಬೆಳೆಯುತ್ತಾರೆ ಇಂಥ ಬೆಳೆಗಳ ಬೆಲೆ ಇಂದು ಸಂಪೂರ್ಣವಾಗಿ ಕುಸಿದಿದೆ. ಇವತ್ತು ಜೋಳಕ್ಕೆ ಮಾರುಕಟ್ಟೆಯಲ್ಲಿ ಸುಮಾರು 300, 400, ರೂಪಾಯಿ ಇದ್ದರೂ ಇದನ್ನು ಕೇಳುವವರು ಯಾರು ಇಲ್ಲ. ಆದರೆ, ಈ ಕಡೆಯಲ್ಲಿ, ಇಲ್ಲಿಯ ರೈತರು ಬೆಳೆದಂಥ ಭತ್ತವನ್ನು ಸರ್ಕಾರದವರು ರೇಷನ್ ಡಿಪೋದ ಮೂಲಕ ಏನು ಕೊಡುತ್ತಾರೋ ಅದೇ ರೀತಿಯಲ್ಲಿ ಜಿಲ್ಲೆಯವರು ಬೆಳೆದಂಥ ಬೆಳೆಗಳನ್ನು ಒಂದು ನ್ಯಾಯಯುತವಾದ ಬೆಂಬಲ ಬೆಲೆಯ ಮೂಲಕ ಖರೀದಿಸಿ ಆ ಮೂಲಕವಾಗಿ ಜನಗಳಿಗೆ ವಿತರಣೆ ಮಾಡತಕ್ಕಂಥ ವಿಚಾರ ಸರ್ಕಾರ ಇವತ್ತು ಮಾಡಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ, ಇವತ್ತು ಒಂದು ಎಕರೆಗೆ ಎರಡು, ಮೂರು, ಚೀಲ ಮಾತ್ರ ಬೆಳೆಯುತ್ತೇವೆ ಇಂಥ ಸಂದರ್ಭದಲ್ಲಿಯೇ ಬೆಲೆಗಳು ಕುಸಿದಿದ್ದರಿಂದ ರೈತರ ಗೋಳು ಹೇಳತೀರದಾಗಿದೆ. ನಮ್ಮ ಬೀದರ್, ಗುಲ್ಬರ್ಗಾ, ವಿಜಾಪುರ, ಜಿಲ್ಲೆಗಳಲ್ಲಿ ಅತಿ ಹೆಚ್ಚಾಗಿ ತೊಗರಿ ಬೇಳೆಯನ್ನು ಬೆಳೆಯುತ್ತೇವೆ, ಅದರಲ್ಲೂ ಸಿಂಧಗಿ ಕ್ಷೇತ್ರದಲ್ಲಿ ಸುಮಾರು 40 ಸಾವಿರ ಎಕರೆ ತೊಗರಿ ಬೇಳೆಯನ್ನು ಇವತ್ತು ರೈತರು ಬೆಳೆದಿರುತ್ತಾರೆ. ಇಷ್ಟೊಂದು ಪ್ರಮಾಣದಲ್ಲಿ ಅಲ್ಲಿ ಬೆಳೆಯುತ್ತಿದ್ದರೂ, ಇವತ್ತು ಅಲ್ಲಿ ಬರುತ್ತಿರುವ ಬೆಳೆಯ ಇಳುವರಿ ಎಷ್ಟು? ಇದಕ್ಕೆ ತಗಲುವ ವೆಚ್ಚ ಎಷ್ಟು? ಇದರಿಂದಾಗಿ ರೈತರಿಗೆ ಬರುವ ಲಾಭ ಎಷ್ಟು? ಇದಕ್ಕೆ ತಗಲುವ ವೆಚ್ಚ ಎಷ್ಟು? ಇದನ್ನೆಲ್ಲಾ ಸಂಪೂರ್ಣವಾಗಿ ವಿಚಾರ ಮಾಡಿ ನೋಡಿದಾಗ, ರೈತ ತಾನು ಬೆಳೆದಂಥ ಬೆಳೆಗೆ ಎಷ್ಟು ಔಷಧಿಯನ್ನು ಖರೀದಿ ಮಾಡಿ, ಸಿಂಪಡಿಸಿ, ಎಷ್ಟು ಖರ್ಚು ಮಾಡಿರುತ್ತಾನೆ, ಆದರೆ ಕೊನೆಯಲ್ಲಿ ಬೆಳೆದಂಥ ಮಾಲನ್ನು ಮಾರಿದಾಗ ಅವನಿಗೆ ಆ ಬೆಳೆಗೆ ಔಷಧಿಗಾಗಿ ಖರ್ಚು ಮಾಡಿರುವಷ್ಟು ಹಣ ಕೂಡ ಸಿಗಲಾರದಂಥ ಪರಿಸ್ಥಿತಿ ಇಂದು ಒದಗಿದೆ. 1998ನೇ ಸಾಲಿನಲ್ಲಿ ಅತಿವೃಷ್ಟಿಯಾದಂಥ ಸಂದರ್ಭದಲ್ಲಿ ಸಂಪೂರ್ಣವಾಗಿ ಬೆಳೆಗಳು ನಾಶವಾಗಿ,

ಒಡ್ಡುಗಳು ಒಡೆದು ಹೋಗಿ, ಮನೆಗಳು ಬಿದ್ದು, ಹೊಲ ಗದ್ದೆಗಳಲ್ಲಿ ನೀರು ಸಾಕಷ್ಟು ಪ್ರಮಾಣದಲ್ಲಿ ಹರಿದಿದ್ದರಿಂದ ಫಲವತ್ತತೆಯನ್ನು ಕಳೆದುಕೊಂಡಿರುವ ಭೂಮಿ-ಯನ್ನು ಹಾಗೂ ಅದರಿಂದಾಗಿ ನೋವನ್ನು ಅನುಭವಿಸುವ ರೈತರನ್ನು ನಾವು ಅಂದು ನೋಡಬೇಕಾಯಿತು. ಆ ಬಗ್ಗೆ ಸಂಪೂರ್ಣವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆ ದಿವಸ ಸಂಪೂರ್ಣವಾಗಿ ರೈತರು, ಜಾನುವಾರುಗಳನ್ನು ಹಾಗೂ ಮಾಲನ್ನು ಕಳೆದುಕೊಂಡಿದ್ದರು. ಇಂಥವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ 250 ರೂಪಾಯಿ ಪಾಸ್ ಬುಕ್ ಕೊಡುವ ವ್ಯವಸ್ಥೆ ಆ ದಿವಸ ಮಾಡಿ ಕೊಟ್ಟಿದ್ದರು. ನನ್ನ ಕ್ಷೇತ್ರದಲ್ಲಿ ಅಂದಾಜು ಹನ್ನೆರಡೂವರೆ ಲಕ್ಷ ರೂಪಾಯಿ ಮೌಲ್ಯದ ಪಾಸ್ ಬುಕ್‌ಗಳಿಂದ ಜಮಾ ಆಗಿದ್ದರೂ ಇಲ್ಲಿಯವರೆಗೆ ಯಾವುದೇ ರೀತಿಯ ಪರಿಹಾರ ರೈತರಿಗೆ ಸಿಕ್ಕಿಲ್ಲ. ಈ ಪಾಸ್ ಬುಕ್‌ಗಳಿಂದ ಏನೂ ಉಪಯೋಗವಾಗಿಲ್ಲ. ಇವತ್ತು ಬೆಲೆ ಕುಸಿದಿರುವಂಥ ಸಂದರ್ಭದಲ್ಲಿ ನಮ್ಮ ಭಾಗದಲ್ಲಿ ಹೆಚ್ಚಾಗಿ ಬೆಳೆಯುತ್ತಿರುವ, ಜೋಳ, ಸಜ್ಜೆ, ಗೋಧಿ, ಮುಸುಡಿ, ಸೂರ್ಯಕಾಂತಿ, ತೊಗರಿ, ಶೇಂಗಾ, ಇಂಥ ಬೆಳೆಗಳಿಗೆ ಸರ್ಕಾರ ನ್ಯಾಯವಾದ ಬೆಂಬಲ ಬೆಲೆಯನ್ನು ನಿಗದಿಪಡಿಸಿ, ರೈತರಿಗೆ ಅನುಕೂಲ ಮಾಡಿ ಕೊಡುವುದರ ಜೊತೆಗೆ, ನಮ್ಮ ಭಾಗದಲ್ಲಿ ರೈತ ತಾನು ಬೆಳೆದಿರುವ ಬೆಳೆಗಳಾದ ಜೋಳವನ್ನೇ ಹೆಚ್ಚಾಗಿ ಮನೆಯಲ್ಲಿ ಊಟಕ್ಕೆ ಉಪಯೋಗಿಸುವುದರಿಂದ, ಈ ಭಾಗದಲ್ಲಿ ಭತ್ತವನ್ನು ಹೇಗೆ ರೇಷನ್ ಡಿಪೋದ ಮೂಲಕ ಕೊಡುತ್ತೀರೋ ಅದೇ ರೀತಿಯಲ್ಲಿ ಇದರ ವ್ಯವಸ್ಥೆ ಸರ್ಕಾರ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು :— ಈ ಬಗ್ಗೆ ಒಂದು ಗಂಟೆಗಳ ಕಾಲ ಚರ್ಚೆ ಮಾಡೋಣ ಎಂದು ನಿರ್ಧರಿಸಿದ್ದೆವು. ಅದೇ ರೀತಿ ತಾವು ಕೂಡ ಇಲ್ಲಿಯವರೆಗೆ ಸಹಕಾರ ಮಾಡಿದಿರಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಈ ವಿಷಯದ ಮೇಲೆ ಎಷ್ಟು ಹೊತ್ತು ಬೇಕಾದರೂ ಮಾತನಾಡೋಣ, ಅದೇ ರೀತಿಯಲ್ಲಿ ಆ ಬಿಲ್ ಬಗ್ಗೆ ಕೂಡ ಚರ್ಚೆ ಮಾಡೋಣ, ಅದರ ಬಗ್ಗೆ ನಮಗೇನೂ ಯಾವ ಉದ್ದೇಶವಿಲ್ಲ, ಅದನ್ನು ಮುಂದಕ್ಕೆ ಹಾಕಬೇಕು ಎನ್ನುವ ಉದ್ದೇಶ ನಮಗೆ ಇಲ್ಲ, ಇಲ್ಲಿ ಬಹಳ ಪ್ರಮುಖವಾದ ವಿಷಯ ಚರ್ಚೆಯಾಗುತ್ತಿದೆ ಇದಕ್ಕೆ ತಾವು ದಯಮಾಡಿ ನಿರ್ಬಂಧ ಹಾಕಬೇಡಿ. ನಾವು ಕೇಳಿದ ಪ್ರಕಾರ ಒಪ್ಪಿಕೊಂಡರು ಐದು ನಿಮಿಷ ಮಾತನಾಡುತ್ತೇವೆಂದು ಹೇಳಿದ್ದೆವು ಅದೇ ಪ್ರಕಾರ . ಸುಮಾರು ಹತ್ತು ಜನ ಸದಸ್ಯರು ಐದು ನಿಮಿಷಗಳಲ್ಲಿ ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ರೈತರ ಎಷ್ಟೋ ವಿಷಯಗಳನ್ನು ಹೇಳಿದರು. ಏಕೆಂದರೆ, ಈ ದಿವಸ ಕೊನೆಯ ದಿವಸ. ಈ ವಿಚಾರದ ಬಗ್ಗೆ ನಿಜ ಹೇಳಬೇಕೆಂದರೆ ನಾನು ಇನ್ನು ಮಾತನಾಡಬೇಕು ಎಂದು ಇದ್ದೆ. ಆದರೆ ನಾನು

ಮಾತನಾಡಲಿಲ್ಲ. ಬೇರೆ ಬೇರೆ ಶಾಸಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಆಗುವ ರೈತರ ಸ್ಥಿತಿಯ ಬಗ್ಗೆ ಹೇಳುತ್ತಿದ್ದಾರೆ. ಒಂದು ವಾರದಿಂದಲೂ ಕೆಲವರಿಗೂ ಅವಕಾಶ ಸಿಕ್ಕಿಲ್ಲ. ಇವತ್ತು ಸಾಯಂಕಾಲದವರೆಗೆ ಕುಳಿತುಕೊಂಡು ಬಿ.ಎ.ಸಿ.ಯಲ್ಲಿ ಈಗಾಗಲೇ ತೀರ್ಮಾನವಾಗಿರುವಂತೆ ನಾಲ್ಕೈದು ಬಿಲ್‌ಗಳ ಬಗ್ಗೆ ಚರ್ಚೆ ಮಾಡೋಣ.

ಅಧ್ಯಕ್ಷರು :— ಆ ಬಿಲ್‌ಗಳನ್ನು ಮೂವ್ ಮಾಡುವುದಕ್ಕೆ ತಾವುಗಳು ಅನುವು ಮಾಡಿ ಕೊಟ್ಟಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ರೈತರ ಸಮಸ್ಯೆಯ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕಾಗುತ್ತದೆ.

ಅಧ್ಯಕ್ಷರು :— ಪ್ರಾಮುಖ್ಯತೆ ಇಲ್ಲವೆಂದು ನಾನು ಹೇಳುತ್ತಿಲ್ಲ. ಇದರ ಬಗ್ಗೆ ಚರ್ಚೆ ಮಾಡುವುದು ಬೇಡವೆಂದು ನಾನು ಹೇಳುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ತಾವು ಈಗಾಗಲೇ ಅವಕಾಶವನ್ನು ಕೊಟ್ಟಿದ್ದೀರಿ. ಆದ್ದರಿಂದ ದಯವಿಟ್ಟು ಇದನ್ನು ಮತ್ತೆ ಮುಂದುವರಿಸಿ. ಆ ನಂತರ ಬಿಲ್ ಬಗ್ಗೆಯೂ ಸಹ ಚರ್ಚೆ ಮಾಡೋಣ.

ಅಧ್ಯಕ್ಷರು :— ಯೂನಿವರ್ಸಿಟಿ ಬಿಲ್‌ಗೆ ಮೂರು ಗಂಟೆಯನ್ನು ನಿಗದಿ ಮಾಡಲಾಗಿತ್ತು. ನೆನ್ನೆದಿವಸ ಮತ್ತೆ ಎರಡು ಗಂಟೆಯನ್ನು ನಿಗದಿ ಮಾಡಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ರೈತರ ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಚರ್ಚೆ ಮಾಡಲು ಸಮಯವನ್ನು ನಿಗದಿ ಮಾಡಲಾಗಿತ್ತು.

ಅಧ್ಯಕ್ಷರು :— ಇದಕ್ಕೆ ಸಮಯವನ್ನು ಯಾವತ್ತೂ ಫಿಕ್ಸ್ ಮಾಡಿಲ್ಲ. ಕಳೆದ 8-10 ದಿವಸಗಳಿಂದ ಈ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್ :— ಮೊನ್ನೆ ನಡೆದಂಥ ಬಿ.ಎಸ್.ಎ. ಸಭೆಯಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ಇರತಕ್ಕಂಥ ಪ್ರಸ್ತಾವನೆಯನ್ನು ಈಗ ತೆಗೆದುಕೊಳ್ಳುವುದು ಬೇಡ. ಮೊದಲು ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಚರ್ಚೆ ಮಾಡೋಣವೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ.

ಅಧ್ಯಕ್ಷರು :— ಬೆಲೆ ಕುಸಿತದ ಬಗ್ಗೆ ಚರ್ಚೆ ಮಾಡಲು ಸಮಯವನ್ನು ಯಾವತ್ತೂ ಕೂಡ ನಿಗದಿ ಮಾಡಿಲ್ಲ. ಡಾ: ರಾಜ್ ಕುಮಾರ್ ಅಪಹರಣ ಕುರಿತು ಮತ್ತು ಇನ್ನು ಅನೇಕ ಮುಖ್ಯವಾದ ವಿಷಯಗಳನ್ನು ಚರ್ಚೆ ತೆಗೆದುಕೊಂಡಿದ್ದರಿಂದ ಬೆಲೆ ಕುಸಿತದ ವಿಷಯ ಮುಂದೆ ಹೋಗುತ್ತಿತ್ತು. ಮೊದಲು ಈ ವಿಷಯದ ಬಗ್ಗೆ ನಿಮ್ಮ ಕಡೆಯಿಂದ 5 ಜನ ಮಾತನಾಡುತ್ತೇವೆಂದು ಲಿಸ್ಟ್ ಕೊಟ್ಟಿದ್ದರು. ಆದರೆ ಈಗ 12 ಜನ ಮಾತನಾಡಬೇಕೆಂದು ಹೆಸರನ್ನು ಕೊಟ್ಟಿದ್ದಾರೆ. ಈ ರೀತಿ ಆದರೆ ನಾನೇನು ಮಾಡುವುದು.

ಶ್ರೀ ಜಗದೀಶ್ ಶೆಟ್ಟರ್ :— ಈ ವಿಷಯದ ಬಗ್ಗೆ ಒಂದು ವಾರದಿಂದ ಚರ್ಚೆ ನಡೆಯುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದವರು ಇದುವರೆಗೂ ಒಂದು ಹೇಳಿಕೆಯನ್ನು ಮಾಡಲಿಲ್ಲ. ಸರ್ಕಾರ ಹೇಳಿಕೆ ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ಈ ವಿಷಯ ಮುಕ್ತಾಯ ಆಗುತ್ತಿತ್ತು.

ಶ್ರೀ ಟಿ.ಎನ್. ಸುಬ್ಬಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ತಾವು ಖಾಸಗಿ ಬಿಲ್‌ಗೆ ಕೊನೆಯಲ್ಲಿ ಅವಕಾಶ ಮಾಡಿಕೊಡಬೇಕು.

ಡಾ: ಜಿ. ಪರಮೇಶ್ವರ :— ಮಾನ್ಯ ಅಧ್ಯಕ್ಷರೆ, ಇದಕ್ಕೊಂದು ಅವಧಿಯನ್ನು ತಾವು ಫಿಕ್ಸ್ ಮಾಡಬೇಕು. ಏಕೆಂದರೆ ಈ ವಿಷಯದ ಬಗ್ಗೆ ಇನ್ನು 12 ಜನ ಮಾತನಾಡುವವರು ಇದ್ದಾರೆಂದು ತಾವು ಹೇಳುತ್ತಿದ್ದೀರಿ. ಇವತ್ತು ಸಭೆಯ ಕೊನೆಯ ದಿವಸವಾಗಿದ್ದು, ಇನ್ನು ಅನೇಕ ಬಿಲ್‌ಗಳ ಮೇಲೆ ಚರ್ಚೆ ಮಾಡಬೇಕಾಗಿದೆ.

ಶ್ರೀ ಜಗದೀಶ್ ಶೆಟ್ಟರ್ :— ನಾವು ಕೇವಲ 5 ಜನ ಮಾತ್ರ ಮಾತನಾಡುತ್ತೇವೆಂದು ನಾವು ಒಪ್ಪಿಕೊಂಡಿಲ್ಲ. ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಐದು ಜನ ಸಜೆಶನ್ ಮಾಡಿದ್ದಾರಷ್ಟೆ. ಇದು ಬಹಳ ಪ್ರಾಮುಖ್ಯವಾದಂಥ ವಿಷಯವಾಗಿರುವುದರಿಂದ ಕೇವಲ ಐದು ಜನ ಮಾತ್ರ ಮಾತನಾಡಬೇಕೆಂದು ತಾವು ಬಾರ್ಗೇನ್ ಮಾಡುವುದಕ್ಕೆ ಹೋಗಬೇಡಿ.

ಡಾ: ಜಿ. ಪರಮೇಶ್ವರ :— ಮಾನ್ಯ ಅಧ್ಯಕ್ಷರೇ, ಈ ಚರ್ಚೆ ಹೀಗೆ ಮುಂದುವರಿಯುತ್ತಾ ಹೋಗುತ್ತದೆ. ಇವತ್ತು ಅಧಿವೇಶನ ಕೊನೆಯ ದಿವಸವಾಗಿರುವುದರಿಂದ, ತಾವು ದಯಮಾಡಿ ಇದಕ್ಕೊಂದು ಅವಧಿಯನ್ನು ನಿಗದಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ಇವತ್ತಿನ ದಿವಸ ಸದನ ಮುಗಿಯುವುದರೊಳಗಾಗಿ ಯೂನಿವರ್ಸಿಟಿ ಬಿಲ್ ಅನ್ನು ಪಾಸ್ ಮಾಡಿ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ :— ಮಾಡೋಣ.

\+ ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) :— ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕೃಷಿ ಉತ್ಪನ್ನಗಳಾದ ಅಡಿಕೆ, ತೆಂಗು ಮತ್ತು ಭತ್ತ, ಆಲೂಗಡ್ಡೆ, ಗೋವಿನ ಜೋಳ, ತೊಗರಿ ಮತ್ತು ತಂಬಾಕು, ಈ ಎಲ್ಲಾ ಬೆಳೆಗಳ ಬೆಲೆ ಕುಸಿತವಾಗಿರುವ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಚರ್ಚೆ ಮಾಡಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಅನೇಕ ಚಿಂತನೆಗಳು ಕೂಡ ಆಯಿತು. ಹಾಗೆಯೇ ಬೆಲೆ ಸ್ಥಿರೀಕರಣದ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ಅನೇಕ ಸದಸ್ಯರು ಒತ್ತಾಯ ಮಾಡಿದರು. ನಾನೊಬ್ಬ ಬರಗಾಲದ ಬವಣೆಯ ನಾಡು ಆದ ಉತ್ತರ ಕರ್ನಾಟಕದಿಂದ ಬಂದಂಥ ಶಾಸಕನಾಗಿದ್ದೇನೆ. ಬಾಗಲಕೋಟೆ

ಮತ್ತು ಬಿಜಾಪುರ ಹಾಗೂ ಸಮೀಪದ ಜಿಲ್ಲೆಗಳಲ್ಲಿ ಜೋಳ ಪ್ರಮುಖ ಬೆಳೆಯಾಗಿದೆ. ಸನ್ಮಾನ್ಯ ಸದಸ್ಯರಾದ ಸುಣಗಾರ್‌ರವರು ಹೇಳಿದ ಹಾಗೆ ಜೋಳದ ಜೊತೆಗೆ ಸಜ್ಜೆ ಮತ್ತು ಇತರ ಕಾಳುಗಳನ್ನು ನಮ್ಮ ಭಾಗದಲ್ಲಿ ಬೆಳೆಯುತ್ತಾರೆ. ರೈತರ ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಅನೇಕ ದಿವಸಗಳಿಂದ ಚರ್ಚೆ ನಡೆಯುತ್ತಿದೆ. ಹಾಗೆಯೇ ಇದರ ಬಗ್ಗೆ ಆಕ್ರೋಶವೂ ಕೂಡ ವ್ಯಕ್ತವಾಗುತ್ತಿದೆ. ರೈತರ ನೆರವಿಗೆ ಇವತ್ತಿನ ದಿವಸ ಸರ್ಕಾರ ಧಾವಿಸಿ ಬರಬೇಕು. ಇವತ್ತಿನದಿವಸ ರೈತರು ಬಹಳ ಸಂಕಷ್ಟದಲ್ಲಿ ಇರುವುದರಿಂದ, ಸರ್ಕಾರ ಮಾನವೀಯತೆಯ ದೃಷ್ಟಿಯಿಂದ ಇದನ್ನು ಪರಿಗಣನೆ ಮಾಡಿ ಅವರ ಸಹಾಯಕ್ಕೆ ಧಾವಿಸಿ ಬಂದು, ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಈಡಾಗಿರತಕ್ಕಂಥ ರೈತನ ಜೀವನಕ್ಕೆ ಒಂದು ನೆಮ್ಮದಿಯ ವಾತಾವರಣವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ತೆಂಗು, ಮುಸುಕಿನ ಜೋಳ ಮತ್ತು ಭತ್ತ ಬೆಳೆದಂಥ ರೈತನ ನೆರವಿಗೆ ಕೆಲವು ಸಂದರ್ಭಕ್ಕೆ ಅನಿವಾರ್ಯವಾಗಿ ಹಿಂದೆ ಇದ್ದಂಥ ಎಲ್ಲಾ ಸರ್ಕಾರಗಳು ತಕ್ಕಮಟ್ಟಿಗೆ ರೈತನ ನೆರವಿಗೆ ಬಂದಿವೆ. ಬಿಳಿ ಜೋಳ ಬೆಳೆಯತಕ್ಕಂಥ ನಮ್ಮ ಭಾಗದ ರೈತರು, ನಿಮಗೆ ರೈತರಲ್ಲವೆ? ಈಗಾಗಲೇ ಎಲ್ಲದಕ್ಕೂ ಬೆಂಬಲ ಬೆಲೆಯನ್ನು ಘೋಷಣೆ ಮಾಡಲಾಗಿದೆ. ಸಾಧ್ಯವಾದ ಮಟ್ಟಿಗೆ ಸರ್ಕಾರ ಖರೀದಿಯ ಪ್ರಕ್ರಿಯೆಗಳನ್ನು ಮಾಡಿದೆ. ಇವತ್ತು ಜೋಳ ನಮ್ಮ ಭಾಗದ ಜೀವನಾಡಿಯಾಗಿದೆ. ಇವತ್ತಿನ ದಿವಸ ನಮ್ಮ ಕಡೆ ಶ್ರೀಮಂತರಾಗಲಿ ಅಥವಾ ಬಡವರಾಗಲಿ ಬೆಳಗ್ಗೆಯಿಂದ ರಾತ್ರಿಯವರೆಗೆ ಜೋಳವನ್ನು ಗುತ್ತಿ, ಬಿತ್ತಿ ಬೆಳೆದು ಅದನ್ನೆ ಆಹಾರವಾಗಿ ಸ್ವೀಕರ ಮಾಡಿ ಬದುಕತಕ್ಕಂಥ ಸ್ಥಿತಿ ನಮ್ಮ ಕಡೆ ಇದೆ. ಇತ್ತೀಚೆಗೆ ಬೇಳೆ ಕಾಳು ಮತ್ತು ಇತರ ದವಸಧಾನ್ಯಗಳ ಬೆಲೆ ಕುಸಿದಂತೆ ಜೋಳದ ಬೆಲೆಯೂ ಕೂಡ ಕುಸಿದಿದೆ. ಬಿಳಿ ಜೋಳಕ್ಕೆ ಬಾಗಲಕೋಟೆ ಮತ್ತು ಬಿಜಾಪುರ ಯಾವರೀತಿಯಾಗಿ ಪ್ರಸಿದ್ಧವಾಗಿದೆಯೋ ಅದೇ ರೀತಿ ಮಹಾರಾಷ್ಟ್ರದಲ್ಲಿರುವ ಸಾಂಗ್ಲಿ ಭಾಗದಲ್ಲಿಯೂ ಕೂಡ ಬಿಳಿ ಜೋಳವನ್ನು ಹೇರಳವಾಗಿ ಬೆಳೆಯುತ್ತಾರೆ. ಈ ಬಾರಿ ಮಹಾರಾಷ್ಟ್ರದ ಸಾಂಗ್ಲಿ ಭಾಗದಲ್ಲಿ ಹೆಚ್ಚು ಜೋಳ ಬೆಳೆದು ನಮ್ಮ ಭಾಗಕ್ಕೆ ಸರಬರಾಜು ಮಾಡಿರುವಂಥ ಹಿನ್ನೆಲೆಯಲ್ಲಿ ನಮ್ಮ ಭಾಗದಲ್ಲಿ ಜೋಳದ ಬೆಲೆ ಕ್ವಿಂಟಲ್‌ಗೆ ಸುಮಾರು 350 ರಿಂದ 400 ರೂಪಾಯಿವರೆಗೆ ಕುಸಿದಿದೆ. ಮಹಾರಾಷ್ಟ್ರದಲ್ಲಿಯೂ ಕೂಡ ಸಾವಿರಾರು ಕ್ವಿಂಟಲ್ ಜೋಳವನ್ನು ಮಾರಾಟ ಮಾಡತಕ್ಕಂಥ ಒಂದು ಕಾರ್ಯಕ್ರಮ ನಡೆಯುತ್ತಿದೆ. ಹಿಂದಿನ ವರ್ಷಕ್ಕಿಂತ ಈ ಸಾರಿ ಸುಮಾರು 3 ಲಕ್ಷ ಟನ್‌ನಷ್ಟು ಜೋಳ ಹೆಚ್ಚು ಉತ್ಪಾದನೆಯಾಗಿರುವ ಕಾರಣದಿಂದ ಜೋಳದ ಬೆಲೆ ಬಹಳಷ್ಟು ಕುಸಿದಿದೆ. ಆದ್ದರಿಂದ, ಜೋಳವನ್ನು ಬೆಳೆದಂಥ ರೈತ ಸಂಕಷ್ಟಕ್ಕೆ ಈಡಾಗಿದ್ದಾನೆ ಎಂದು ನಮ್ಮ ಭಾಗಕ್ಕೆ ಪ್ರವಾಸ ಮಾಡಿದಂಥ ಮಾನ್ಯ ಆಹಾರ ಸಚಿವರಾದಂಥ ಶ್ರೀಮಾನ್ ಇನಾಂದಾರ್ ರವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಜೋಳ ಬೆಳೆದ ರೈತನ ನೆರವಿಗೆ ಸರ್ಕಾರ ಬರಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇದೇ ಸೀಜನ್‌ನಲ್ಲಿ ಕಳೆದ ವರ್ಷ ಒಂದು ಕ್ವಿಂಟಲ್ ಜೋಳದ ಧಾರಣೆ ಸುಮಾರು 850 ರಿಂದ 1000 ರೂಪಾಯಿವರೆಗೆ ಇತ್ತು. ಆದರೆ ಇವತ್ತಿನದಿವಸ ಜೋಳದ ಧಾರಣೆ ಒಂದು ಕ್ವಿಂಟಾಲಿಗೆ ಸುಮಾರು 350 ರಿಂದ 400 ರೂಪಾಯಿಗಳವರೆಗೆ ಬೆಲೆ ಕುಸಿದಿರುವುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಬಾಗಲಕೋಟೆ ಭಾಗದಲ್ಲಿ ಬೆಳೆದಂಥ ಜೋಳವನ್ನು ಇವತ್ತಿನದಿವಸ ದಾಸ್ತಾನು ಇಟ್ಟುಕೊಳ್ಳುವುದಕ್ಕೆ ಸಹ ಆಗುತ್ತಿಲ್ಲ. ಇಲ್ಲಿ ರೈತರು ಬೆಳೆದಿರತಕ್ಕಂಥ ಜೋಳವನ್ನು ಹಗೇವಿನಲ್ಲಿ ಇಟ್ಟು ಕೊಳೆಯುವಂಥ ಒಂದು ಸಂದಿಗ್ಧದ ಪರಿಸ್ಥಿತಿ ಇವತ್ತಿನ ದಿವಸ ನಿರ್ಮಾಣವಾಗಿದೆ. ಹಾಗೆಯೇ ಹಗೇವಿನಲ್ಲಿ ಇಡತಕ್ಕಂಥ ಜೋಳವನ್ನು ಖರೀದಿ ಮಾಡುವುದಕ್ಕೆ ವ್ಯಾಪಾರಸ್ಥರು ಮುಂದೆ ಬರುತ್ತಿಲ್ಲ. ಈಗಾಗಲೇ ವ್ಯಾಪಾರಸ್ಥರು ಖರೀದಿ ಮಾಡಿರುವ ಜೋಳವನ್ನು ಉಗ್ರಾಣದಲ್ಲಿ ಇಡತಕ್ಕಂಥ ಒಂದು ಸ್ಥಿತಿ ವ್ಯಾಪಾರಸ್ಥರಿಗೂ ಸಹ ಬಂದಿದೆ. ನಾನು ರೈತನ ಮಗನಾಗಿರುವುದರಿಂದ ಒಂದು ವಾಸ್ತವಿಕ ಸ್ಥಿತಿಯನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಅದೇನೆಂದರೆ, 1972ನೇ ಇಸವಿಯಲ್ಲಿ ಬಿಜಾಪುರ, ಗುಲ್ಬರ್ಗ ಮತ್ತು ಬಾಗಲಕೋಟೆ ಭಾಗಗಳಲ್ಲಿ ಭೀಕರವಾದಂಥ ಕ್ಷಾಮ ಬಂದಿತ್ತು. ಆ ಸಂದರ್ಭದಲ್ಲಿ ನಾನು ಪಿ.ಯು.ಸಿ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆಗ ನಮ್ಮ ತಂದೆಯವರು ಸುಮಾರು 40 ಕ್ವಿಂಟಲ್ ಜೋಳವನ್ನು ಪ್ರತಿ ಕ್ವಿಂಟಲಿಗೆ 425 ರೂಪಾಯಿಗಳಂತೆ ಮಾರಾಟ ಮಾಡಿ ಬಂದೆ ಎಂದು ನಮ್ಮ ಮನೆಯ ಮಂದಿಯ ಜೊತೆಯಲ್ಲಿ ಅವರ ಸಂತೋಷವನ್ನು ಹಂಚಿಕೊಂಡಿದ್ದರು. 1972ರಲ್ಲಿಯ ಜೋಳದ ಬೆಲೆ ಒಂದು ಕ್ವಿಂಟಲಿಗೆ 425 ರೂಪಾಯಿ ಇತ್ತು. ಈಗ 2000ನೇ ಇಸವಿಯಲ್ಲಿ ನಾವು ಇದ್ದೇವೆ. ಅಂದರೆ 28 ವರ್ಷಗಳ ನಂತರವು ಜೋಳದ ಧಾರಣೆ ಕನಿಷ್ಠ ಒಂದು ಕ್ವಿಂಟಲಿಗೆ 350 ರೂಪಾಯಿಗೆ ಬೆಲೆ ಇಳಿದಿರತಕ್ಕಂಥ ಸಂದಿಗ್ಧ ಪರಿಸ್ಥಿತಿಯನ್ನು ಇವತ್ತಿನ ದಿವಸ ನಾವೆಲ್ಲ ನೋಡುತ್ತಿದ್ದೇವೆ. ಈ ಸಂದರ್ಭದಲ್ಲಿ ರೈತರ ನೆರವಿಗೆ ಬರಬೇಕಾಗಿರುವಂಥದ್ದು ಸರ್ಕಾರದ ಕರ್ತವ್ಯವಾಗಿದೆ. ಅದ್ದರಿಂದ ಆದಷ್ಟು ಬೇಗ ರೈತರ ನೆರವಿಗೆ ಸರ್ಕಾರ ಬರಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ನನ್ನಲ್ಲಿ ಕೂಡ ಒಂದು ಜಿಜ್ಞಾಸೆ ಬಂದಿದೆ. ಏನೆಂದರೆ, ಇವತ್ತಿನದಿವಸ ಅಡಿಕೆ ಮತ್ತು ತೆಂಗು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಹೋಗುತ್ತದೆ ಮತ್ತು ನಮ್ಮ ರಾಜ್ಯ ವ್ಯಾಪ್ತಿಯಲ್ಲಿಯೂ ಕೂಡ ಮಾರಾಟವಾಗುತ್ತದೆ. ಬೆಂಬಲ ಬೆಲೆಗೆ ಒಂದು ಯೋಜನೆಯನ್ನು ಮಾಡುವಂಥದ್ದು ಹಾಗೂ ಅದರ ಬಗ್ಗೆ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳುವಂಥದ್ದನ್ನು ಮಾಡುತ್ತಾ ಬಂದಿದೆಯೋ ಹೇಗೆ? ಆಹಾರ ಬೆಳೆಯಾದುದರಿಂದಾಗಿ ಅವರು ಬದುಕುವುದಕ್ಕೆ ಯಾವುದಾದರೂ ಒಂದು ಆಹಾರಪದಾರ್ಥಗಳಿದ್ದರೆ ಬೆಂಬಲ ಬೆಲೆಯ ಪರಿಮಾಣದೊಳಗೆ ಬರುತ್ತದೆಯೇ ಎನ್ನುವ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಸುಣಗಾರರವರು ತೊಗರಿಯ ಬೆಳೆಯ ಬಗ್ಗೆ ಹೇಳಿದರು, ಹಲವೊಂದು ಸದಸ್ಯರು ತಮ್ಮ ಭಾಗದಲ್ಲಿ ಬೆಳೆದಂತಹ ಬೆಳೆಯ ಬಗ್ಗೆ, ಅದರ ಬೆಲೆ ಕುಸಿದ ಬಗ್ಗೆ ಇವತ್ತು ವಿಶ್ಲೇಷಣೆಯನ್ನು

ಮಾಡಿದ್ದಾರೆ. ಉತ್ತರ ಕರ್ನಾಟಕದ ಪ್ರಮುಖ ಬೆಳೆಯಾದ ಜೋಳ, ಇತರ ಬಗ್ಗೆ ಚಿಂತನೆಯಾಗಬೇಕು. ಆ ಭಾಗದ ಬಡವರ ಬೆಳೆಯಾದ ಈ ಜೋಳ ಇತರ ಬೆಲೆ ಕುಸಿತದ ಬಗ್ಗೆ ಸರ್ಕಾರ ಆ ರೈತನ ನೆರವಿಗೆ ಬರಬೇಕಾಗುತ್ತದೆ. ಆ ಭಾಗದಲ್ಲಿ ಜೋಳವನ್ನು ಬೆಳೆಯುತ್ತಿರುವ ರೈತನು ಒಂದು ತೀರ್ಮಾನವನ್ನು ಮಾಡುತ್ತಾನೆ, ಇನ್ನು ಮುಂದೆ ನಾವು ಜೋಳವನ್ನು ಬೆಳೆಯುವುದು ಬೇಡ ಎನ್ನುವ ಸಾಮೂಹಿಕವಾಗಿ ತೀರ್ಮಾನವನ್ನು ಮಾಡಿದರೆ ಅದರ ಮುಂದಿನ ಪರಿಸ್ಥಿತಿಯ ಬಗ್ಗೆ ಊಹೆಯನ್ನು ಈ ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅವರು ಆ ರೀತಿಯಾಗಿ ತೀರ್ಮಾನವನ್ನು ಮಾಡಿದರೆ ಬಡವನು ಹೊಟ್ಟೆಗೆ ಹಿಟ್ಟು ಇಲ್ಲದಂತಹ ಪರಿಸ್ಥಿತಿಯಾಗುತ್ತದೆ. ಮಾನ್ಯ ಖರ್ಗೆಯವರು ಕೂಡ ಅನೇಕ ಸಲ ಒತ್ತಾಯವನ್ನು ಮಾಡಿದ್ದಾರೆ, ಆ ಕಡೆಯ ಭಾಗದವರು ತೆಂಗು ಮತ್ತು ಭತ್ತದ ಬಗ್ಗೆ ಮಾತನಾಡುತ್ತಾರೆ, ನೀವು ಜೋಳದ ವಿಷಯವಾಗಿ ಮಾತನಾಡಬೇಕೆಂದು ಹೇಳಿದ್ದೇನೆ. ನಮ್ಮವರೆ 3 ಜನ ಸಚಿವರಾಗಿದ್ದಾರೆ, ಅವರು ಕೂಡ ಇಲ್ಲೇ ಉಪಸ್ಥಿತರಿದ್ದಾರೆ. ಮಾರುಕಟ್ಟೆಯ ಸಚಿವರಿಗೆ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ಮಾನ್ಯ ಚಿಮ್ಮನಕಟ್ಟಿ, ಮಾನ್ಯ ಕಾಶಪ್ಪನವರಲ್ಲಿ ಮಾನ್ಯ ರಂಗನಾಥರವರಲ್ಲಿಯೂ ಕೂಡ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ಜೋಳದ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕೆಂದು ಸರ್ಕಾರ ಕಾರ್ಯಕ್ರಮವನ್ನು ಕೂಡಲೇ ಹಾಕಿಕೊಳ್ಳಬೇಕು. ವಿಶೇಷವಾಗಿ ಮೇಲಿಂದಮೇಲೆ ಇದು ಆಗುವಂತಹದ್ದಲ್ಲ. ಸಂದರ್ಭಾನುಸಾರವಾಗಿ ಜೋಳದ ಬೆಲೆಯು ಕುಸಿಯುತ್ತದೆ. ಈ ಸಾರಿ ಅತ್ಯಂತ ದೈನಿಕ ಪರಿಸ್ಥಿತಿಯಲ್ಲಿ ಆ ರೈತನು ಸಂಕಟದಲ್ಲಿದ್ದಾನೆ. ಯಾವ ಕ್ರಮಗಳನ್ನು ಬೇಕಾದರೂ ತೆಗೆದುಕೊಂಡು ಸರ್ಕಾರವು ಬೆಂಬಲ ಬೆಲೆಯನ್ನು ನಿಗಧಿ ಮಾಡಬೇಕು. ರೈತನಿಗೆ ಬದುಕಲು ಅವಕಾಶವನ್ನು ಮಾಡಿಕೊಡಬೇಕು, ಹಿಂದೆ ರೈತನು ಯಾವ ರೀತಿಯಾಗಿ ಜೋಳವನ್ನು ಬೆಳೆಯುತ್ತಿದ್ದನು, ಆ ರೀತಿಯಾಗಿ ವಿಪುಲವಾಗಿ ಬೆಳೆಯಲು ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ ಶ್ರೀ ರೇವೂನಾಯಕ್ ಬೆಳಮಗಿ (ಕಮಲಾಪುರ) :— ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ನಾನು ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕರ್ನಾಟಕ ರಾಜ್ಯದ ರೈತರು ಸಂಕಷ್ಟದಲ್ಲಿರುವ ಬಗ್ಗೆ ಈಗಾಗಲೇ ಅನೇಕ ಹಿರಿಯ ಸದಸ್ಯರುಗಳು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳದೆ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ರೈತರು ಬೆಳೆಯುತ್ತಿರುವ ಬೆಳೆಗಳ ತೊಂದರೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ಭಾಗದಲ್ಲಿ, ತೊಗರಿ, ಜೋಳ, ಕುಸುಂಬಿ, ಸಜ್ಜೆ, ಉದ್ದು, ಹೆಸರು, ಮತ್ತು ಕಬ್ಬು ಹಾಗೂ ಬಾಳೆಯನ್ನು ಯಥೇಚ್ಛವಾಗಿ ಬೆಳೆಯುತ್ತೇವೆ. ನಮ್ಮ ಭಾಗದ ಪ್ರಮುಖ ಬೆಳೆಯಾದಂತಹ ತೊಗರಿಬೆಳೆಗೆ ಬೆಂಬಲ ಬೆಲೆಯನ್ನು ನಿಗಧಿಮಾಡತಕ್ಕಂತದ್ದು

ಅವಶ್ಯಕತೆ ಇದೆ. ಇವತ್ತಿನ ದಿವಸ ಯಾವುದೋ ಒಂದು ರಾಜಕೀಯ ಪಕ್ಷದವರು ರೈತರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆಂದು ಅಧಿಕಾರಕ್ಕೆ ಬರುತ್ತಾರೆ, ರೈತಾಪಿ ಜನರಲ್ಲಿ, ದೀನದಲಿತರು, ಅಲ್ಪಸಂಖ್ಯಾತರು, ಹಾಗೂ ಇನ್ನಿತರೆ ಜನಾಂಗದವರು ಸಹ ಸೇರಿರುತ್ತಾರೆ. ಇವತ್ತಿನ ದಿವಸ ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದ ತಕ್ಷಣವೆ ರೈತರನ್ನು ಮರೆಯುತ್ತಿದ್ದಾರೆ ಎನ್ನತಕ್ಕಂಥಾದ್ದು ನನ್ನ ಭಾವನೆಯಾಗಿದೆ. ಅಧಿಕಾರಕ್ಕೆ ಬಂದ ಯಾವುದೇ ಸರ್ಕಾರವಾಗಲಿ, ರೈತರ ಗೋಳನ್ನು ಅರ್ಥಮಾಡಿಕೊಂಡು ಅವರಿಗೆ ಸಹಾಯ ಮಾಡುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ನಮ್ಮ ಕಡೆ ರೈತರು ಬಿಸಿಲು, ಮಳೆ, ಚಳಿ ಎನ್ನದೆ ಹಗಲಿರುಳು ತೊಗರಿಬೆಳೆಯನ್ನು ಕಷ್ಟಪಟ್ಟು ಬೆಳೆಯುತ್ತಾರೆ. ಇದರ ಬಗ್ಗೆ ಕೆಲವೊಬ್ಬ ಶಾಸಕರಿಗೆ ಗೊತ್ತಿಲ್ಲದೆ ಇರಬಹುದು, ನಾನು ಈ ರೀತಿಯಲ್ಲಿ ಹೇಳುತ್ತಿದ್ದೇನೆಂದು ತಪ್ಪು ಭಾವಿಸಬಾರದು. ಏಕೆಂದರೆ, ನಾನು ಸಹ ಜಮೀನಿನಲ್ಲಿ ದುಡಿದು ಬಂದವನಾಗಿರುವುದರಿಂದ ನಾವು ಪಡತಕ್ಕಂತಹ ಕಷ್ಟವನ್ನು ಇಲ್ಲಿ ಹೇಳಿಕೊಳ್ಳುತ್ತಿದ್ದೇನೆ. ಇವತ್ತಿನ ದಿವಸ ಮಳೆ, ಚಳಿ, ಬಿಸಿಲು ಇದ್ದರೂ ಕೂಡ ನಾವು ಜಮೀನಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಹಾಗೆಯೇ ಜಮೀನಿನಲ್ಲಿ ಬಿತ್ತನೆ ಮಾಡುವಂತಹ ಸಂದರ್ಭದಲ್ಲಿ ಬಿತ್ತನೆ ಬೀಜ, ನೊಗ ಹೊತ್ತುಕೊಂಡು ಹೋಗಬೇಕು. ಒಂದು ಎಕರೆ ಜಮೀನಿನಲ್ಲಿ ತೊಗರಿ ಬೆಳೆಯನ್ನು ಬೆಳೆಯುವುದಕ್ಕೋಸ್ಕರ ಬಿತ್ತನೆ ಬೀಜ ಮತ್ತು ಮೊದಲಹಂತದಲ್ಲಿ ಮಿಲಾಥಿನ್ ಹಾಗೂ ಎರಡನೆಯ ಹಂತದಲ್ಲಿ ಎಂಡೋಸಲ್ಫೈನ್, ಹಾಗೂ 3ನೇಯ ಹಂತದಲ್ಲಿ ನೋವೋಕ್ರಾನ್ ಔಷಧಿಗಳನ್ನು ಸಿಂಪಡಿಸಬೇಕಾಗಿದ್ದು, ಈ ರೀತಿಯಾಗಿ ಸಾಕಷ್ಟು ಖರ್ಚು ರೈತರಿಗೆ ಆಗುತ್ತದೆ. ಒಂದು ವೇಳೆ ಮಳೆ ಹೆಚ್ಚು ಕಡಿಮೆಯಾದಾಗ ಬೆಳೆ ಸರಿಯಾಗಿ ಬರುವುದಿಲ್ಲ. ಭಗವಂತನು ರೈತರ ಮೇಲೆ ಕರುಣೆ ತೋರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಒಂದು ಎಕರೆ ಜಮೀನಿಗೆ 15 ಲೀಟರ್ ಔಷಧಿಯನ್ನು ಬೆನ್ನ ಮೇಲೆ ಹಾಕಿಕೊಂಡು ತೊಗರಿ ಬೆಳೆಗೆ ಸಿಂಪಡಣೆಮಾಡುವಾಗ ಅದರಿಂದ ಬರುವ ವಾಸನೆಯಿಂದ ಎಷ್ಟೋ ಜನ ರೈತರು ಸತ್ತಿರುವುದನ್ನು ನಾನು ನೋಡಿದ್ದೇನೆ, ಒಂದು ಎಕರೆ ತೊಗರಿ ಬೆಳೆಗೆ ಸುಮಾರು 14,000 ರೂಪಾಯಿಗಳು ಖರ್ಚಾಗುತ್ತಿದ್ದು, ಒಂದು ಎಕರೆ ಜಮೀನಿನಲ್ಲಿ ಕನಿಷ್ಠಪಕ್ಷ 10 ಕ್ವಿಂಟಾಲ್ ತೊಗರಿ ಬೆಳೆ ಬರಬೇಕಾಗಿರುತ್ತದೆ. ಆದರೆ ಇವತ್ತಿನ ದಿವಸ ಕೇವಲ 4 ಕ್ವಿಂಟಾಲ್ ತೊಗರಿ ಬೆಳೆಯು ಸಹ ಬರುತ್ತಿಲ್ಲ. ಆದ್ದರಿಂದ ತೊಗರಿ ಬೆಳೆಗೆ ಬೆಂಬಲ ಬೆಲೆಯನ್ನು ಫಿಕ್ಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೋದವರ್ಷ ತೊಗರಿ ಬೆಳೆ ಸರಿಯಾಗಿ ಬಾರದೆ ಇರುವುದರಿಂದ ನಮ್ಮ ಗ್ರಾಮದ ಗೌಡನು ಔಷಧಿಯನ್ನು ಸೇವಿಸಿ ಮರಣ ಹೊಂದಿದನು. ಇವತ್ತಿನದಿವಸ ನಮ್ಮ ಭಾಗದ ರೈತರು ಬಹಳ ಸಂಕಷ್ಟದಲ್ಲಿರುವುದರಿಂದ ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ರೈತರ ಹಿತವನ್ನು ಕಾಪಾಡುವುದಕ್ಕೋಸ್ಕರ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಈ ವರ್ಷ ಹೆಚ್ಚು ಮಳೆಯಾಗಿರುವುದರಿಂದ

ತೊಗರಿ ಬೇಳೆ ಸಂಪೂರ್ಣವಾಗಿ ಹಾಳಾಗಿದ್ದು, ಇದರ ಜೊತೆಗೆ ಜೋಳದ ಬೆಲೆಯಲ್ಲಿಯೂ ಸಹ ತುಂಬಾ ಕಡಿಮೆ ಆಗುತ್ತಿದೆ. ಆದ್ದರಿಂದ ರೈತ ಬೆಳೆದಂತಹ ಬೆಳೆಗೆ ಸರಾಸರಿ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ಪರಿಶೀಲನೆ ಮಾಡುವುದಕ್ಕೋಸ್ಕರ ಒಂದು ಸದನ ಸಮಿತಿಯನ್ನು ರಚನೆ ಮಾಡಿ ರೈತ ಬೆಳೆದಂತಹ ಬೆಳೆಗೆ ಒಂದು ನಿಗಧಿಯಾದ ಬೆಲೆಯನ್ನು ಫಿಕ್ಸ್ ಮಾಡಿದರೆ ಒಳ್ಳೆಯದು. ಇವತ್ತಿನ ದಿವಸ ಒಬ್ಬ ಬಟ್ಟೆ ವ್ಯಾಪಾರಸ್ಥ ಒಂದು ವಸ್ತುವನ್ನು ಮಾರಾಟ ಮಾಡುವಾಗ ತನ್ನ ಲಾಭವನ್ನು ಸೇರಿಸಿ ಮಾರಾಟ ಮಾಡುತ್ತಾನೆ. ಆದರೆ ಇವತ್ತಿನ ದಿವಸ ರೈತರು ಬೆಳೆದಿರತಕ್ಕಂತಹ ಬೆಳೆಗಳಿಗೆ ಯಾವುದೇ ರೀತಿಯಾದಂತಹ ಬೆಲೆಯನ್ನು ನಿಗಧಿ ಮಾಡಿಲ್ಲ. ಆದ್ದರಿಂದ ರೈತ ಬೆಳೆದಿರತಕ್ಕಂತಹ ಬೆಳೆಗೆ ಎಷ್ಟು ಖರ್ಚು ಆಗುತ್ತದೆ ಎಂಬುದರ ಬಗ್ಗೆ ಸರ್ವೇಮಾಡುವುದರ ಬಗ್ಗೆ ಇದುವರೆವಿಗೂ ಯಾರು ಸಹ ನಿಗಾ ವಹಿಸಿಲ್ಲ. ಇವತ್ತಿನ ದಿವಸ ಕೇಂದ್ರ ಸರ್ಕಾರವಾಗಲಿ, ಅಥವಾ ರಾಜ್ಯ ಸರ್ಕಾರವಾಗಲಿ ಒಟ್ಟಿಗೆ ಸೇರಿಕೊಂಡು ರೈತರು ಬೆಳೆಯುತ್ತಿರುವ ಜೋಳ, ಗೋಧಿ, ತೊಗರಿ ಬೇಳೆ, ಅಥವಾ ಇತರ ಯಾವುದೇ ಬೆಳೆಯಾಗಲಿ ಬೆಳೆಯುವುದಕ್ಕೆ ಎಷ್ಟು ಖರ್ಚು ಆಗುತ್ತದೆ ಎಂಬುದನ್ನು ತಿಳಿದುಕೊಂಡು ಒಂದು ನಿರ್ದಿಷ್ಟವಾದ ಬೆಲೆಯನ್ನು ಫಿಕ್ಸ್ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ರೈತ ಪಡತಕ್ಕಂತಹ ಕಷ್ಟದ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಕಡಲೆಕಾಯಿ ಬೆಳೆಗೆ ಔಷಧಿಯನ್ನು ಹೊಡೆಯುವಾಗ ಕಾಲಿಗೆ ಬೂಟು ಹಾಕಿಕೊಳ್ಳಬೇಕು, ಆದರೆ ಬೂಟು ಇಲ್ಲದೆ ಇರತಕ್ಕಂತಹ ಬಡವರು ಚಿಂದಿ ಬಟ್ಟೆಯನ್ನು ಸುತ್ತಿಕೊಂಡು ಔಷಧಿಯನ್ನು ಸಿಂಪಡಿಸುವುದರಿಂದ ಕಾಲಿನೊಳಗೆ ಔಷಧಿ ಸೇರಿಕೊಳ್ಳುತ್ತದೆ. ಇಷ್ಟೊಂದು ಕಷ್ಟಪಟ್ಟು ಬೆಳೆಯನ್ನು ಬೆಳೆಯುವ ರೈತನಿಗೆ ಅವರು ಖರ್ಚು ಮಾಡುವ ಹಣವನ್ನು ಗಣನೆಗೆ ತೆಗೆದುಕೊಂಡು, ಬೆಳೆಗೆ ಒಂದು ನಿರ್ದಿಷ್ಟವಾದ ಬೆಲೆ ಬರುವಂತೆ ಮಾಡುವುದಕ್ಕೋಸ್ಕರ, ಒಂದು ಸದನ ಸಮಿತಿಯನ್ನು ರಚನೆ ಮಾಡಿ ರೈತನು ಖರ್ಚು ಮಾಡುತ್ತಿರುವ ಹಣವನ್ನು ಪರಿಶೀಲನೆ ಮಾಡಿ ರೈತನು ಬೆಳೆದಿರತಕ್ಕಂತಹ ಬೆಳೆಗೆ ಒಂದು ನಿರ್ದಿಷ್ಟವಾದ ಬೆಲೆಯನ್ನು ನಿಗಧಿಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್) :— ಮಾನ್ಯ ಅಧ್ಯಕ್ಷರೆ, ಈವರೆಗೆ ರೈತರು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಇಲ್ಲದೆ, ರಾಜ್ಯದಲ್ಲಿ, ಯಾವುದೇ ಬೆಳೆ ಇರಬಹುದು. ಗೋವಿನಜೋಳ, ಭತ್ತ, ಜೋಳ, ರಾಗಿ ಹೀಗೆ ರೈತ ಬೆಳೆದ ಎಲ್ಲ ಬೆಳೆಗಳ ಬೆಲೆ ಕುಸಿದು ರೈತರಿಗೆ ಆಗಿರತಕ್ಕ ಅನ್ಯಾಯದ ಬಗ್ಗೆ ಪಕ್ಷಾತೀತವಾಗಿ ಎಲ್ಲ ಸದಸ್ಯರು ತಮ್ಮ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ರೈತ ಇವತ್ತು ಅವನ ಉತ್ಪಾದನಾ ವೆಚ್ಚ ಅವನು ಕೊಳ್ಳತಕ್ಕ ಬೀಜ, ಗೊಬ್ಬರ, ಔಷಧಿ ಅವನು ಬೆಳೆಗಳನ್ನು ಬೆಳೆಯುವುದಕ್ಕೆ ತೊಡಗಿಸತಕ್ಕ ಹಣ ಅದಕ್ಕೆ ಪ್ರತಿಫಲವಾಗಿ ಬರತಕ್ಕ ಬೆಲೆ ಇದನ್ನು ಎಲ್ಲಾ ಸದಸ್ಯರು ವಿರೋಧಪಕ್ಷದವರೂ ಹಾಗೂ ಆಡಳಿತ ಪಕ್ಷದವರು ಮನಗಂಡಿದ್ದಾರೆ. ನಾನು

ಹೆಚ್ಚು ವಿವರಗಳಿಗೆ ಹೋಗದೆ, ಒಂದು ವಿಚಾರವನ್ನು ತಮ್ಮ ಮೂಲಕ ಈ ಸದನದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ದುಡಿಮೆಗೆ ಪ್ರತಿಫಲ ಸಿಗಬೇಕೆನ್ನುವುದೇ ಮೂಲ ಉದ್ದೇಶ. ರೈತನನ್ನು ಹೊರತುಪಡಿಸಿ ಎಲ್ಲ ವರ್ಗದವರಿಗೆ ಅವರುಗಳು ವ್ಯಾಪಾರಸ್ಥರು ಇರಬಹುದು, ಸರ್ಕಾರಿ ನೌಕರರು ಇರಬಹುದು, ಯಾರೇ ಇದ್ದರೂ ಸಹ ಅವರಿಗೆ ನಿರ್ದಿಷ್ಟವಾಗಿ ನಿಖರವಾದ ತನ್ನ ವರಮಾನ ಗೊತ್ತಿರುತ್ತದೆ. ಅವರು ಜೀವನ ಮಾಡುವುದಕ್ಕೆ, ಸರಿಯಾದ ಒಂದು ವ್ಯವಸ್ಥೆಯಿದೆ. ಆದರೆ ರೈತನಿಗೆ ಆ ವ್ಯವಸ್ಥೆಯಿಲ್ಲ. ಇವತ್ತು ಅಸಂಘಟಿತ ರೈತರು ರಾಷ್ಟ್ರದಲ್ಲಿ ನೂರಕ್ಕೆ ಎಪ್ಪತ್ತರಷ್ಟು ರೈತರು ಇದ್ದಾರೆ. ಅವರು ಸಂಘಟನೆ ಇಲ್ಲದಿರುವಂಥ ವರ್ಗ. ರಾಜಕೀಯ ಪಕ್ಷಗಳು ಆ ಕಡೆ ಕುಳಿತಾಗ ಏನು ಮಾಡಿದಿರಿ, ಈ ಕಡೆ ಕುಳಿತಾಗ ಏನು ಮಾಡಿದಿರಿ ನಿಮ್ಮ ಸರ್ಕಾರ ಕೇಂದ್ರಸರ್ಕಾರ ಮತ್ತು ರಾಜಕೀಯ ಪಕ್ಷಗಳು ರೈತರ ಸಮಸ್ಯೆಗೆ ಸಂಪೂರ್ಣವಾಗಿ ಮೂಲಭೂತವಾಗಿ ಪರಿವರ್ತನೆ ಮಾಡಿಕೊಳ್ಳದೆ ಆತನ ಅವ್ಯವಸ್ಥೆಯನ್ನು ವ್ಯವಸ್ಥಿತವಾಗಿ ರೂಪುಗೊಳಿಸದೆ ಅದರ ಕಡೆಗೆ ಪ್ರಯತ್ನ ನಡೆದಿದೆಯೇ ಅಂದರೆ ಅದು ಬಹಳ ವಿರಳ. ಈ ಒಂದು ಚರ್ಚೆ ಸದನದ ಮೂಲಕ ಹೊರಗೆ ಬಂದರೆ ಒಳ್ಳೆಯದು. ರೈತ ಇವತ್ತು ಸಂಕಷ್ಟದಲ್ಲಿದ್ದಾನೆ. ಈಗಲಾದರೂ ರೈತನಿಗೆ ಪ್ರತಿಫಲ ಸಿಗುವಂತೆ ಮಾಡಲು ಏನಾದರೂ ಒಂದು ಪರಿಹಾರ ಕಂಡುಹಿಡಿಯಬೇಕೆಂದು ಅದರ ಬಗ್ಗೆ ಚಿಂತನೆ ಮಾಡಬೇಕೆಂದು ಪ್ರತಿಯೊಬ್ಬ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಸದ್ಯದ ಪರಿಸ್ಥಿತಿಯನ್ನು ನಿಭಾಯಿಸುವುದು ಹೇಗೆ? ಒಮ್ಮಿಂದೊಮ್ಮೆಲೆ ಬೆಲೆ ಕುಸಿತವಾಗಿದೆ. ಸರ್ಕಾರ ರೈತರ ಬೆಳೆಗಳಿಗೆ ಬೆಂಬಲ ಬೆಲೆಯನ್ನು ಕೊಟ್ಟು ಕೊಂಡುಕೊಂಡರೆ ಅವರಿಗೆ ಲಾಭವಾಗುತ್ತದೆ. ಕನಿಷ್ಠ ಬೆಂಬಲ ಬೆಲೆಯನ್ನಾದರೂ ಕೊಟ್ಟು ಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬೇಕು. ನೂರಾರು ಕೋಟಿ ರೂಪಾಯಿ ನಿಧಿಯನ್ನು ಮಾಡಿ ಬಿದ್ದ ಬೆಲೆಯನ್ನು ಸುಧಾರಿಸಲಿಕ್ಕೆ ಬೆಂಬಲ ಬೆಲೆ ಕೊಟ್ಟು ಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತಿದೆ. ಇದರಿಂದ ರೈತನಿಗೆ ಪರಿಹಾರ ಎಷ್ಟರಮಟ್ಟಿಗೆ ಆಗುತ್ತದೆಂಬುದರ ಬಗ್ಗೆ ಆತ್ಮಾವಲೋಕನ ಮಾಡಬೇಕಾಗುತ್ತದೆ. ಇವತ್ತು ಕೇಂದ್ರ ಸರ್ಕಾರ ಆಮದು ಮತ್ತು ರಫ್ತು ನೀತಿಯಿಂದ ಜಾಗತಿಕ ಮುಕ್ತ ಮಾರುಕಟ್ಟೆ ವ್ಯವಸ್ಥೆಯಿಂದ ಈ ಎಲ್ಲ ಸಮಸ್ಯೆಗಳು ಉದ್ಭವವಾಗಿವೆ. ನಮ್ಮ ಉತ್ಪಾದನಾ ವೆಚ್ಚ ಅವುಗಳಿಗೆ ಸಮಗ್ರವಾದ ವಿಚಾರ ಮಾಡದೆ ಮತ್ತು ಒಂದು ನೀತಿಯನ್ನು ರೂಪಿಸದೆ ನೀವು ಹೇಳತಕ್ಕ ಮಾತು ಕಾರ್ಯಾಚರಣೆಗೆ ಬರುವುದಿಲ್ಲ, ರೈತನಿಗೆ ಸರಿಯಾದ ಬೆಲೆ ಸಿಗುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗಿ, ಎಲ್ಲ ಪಕ್ಷದವರು ವಿರೋಧಪಕ್ಷದವರು ಮುಖ್ಯಮಂತ್ರಿಗಳು ಸರ್ವರು ದೆಹಲಿಗೆ ಹೋಗಿ ಆಮದು ನೀತಿಯಿಂದ ದುಷ್ಪರಿಣಾಮವಾಗಿದೆ, ರೈತನ ಬೆಳೆಗಳಿಗೆ ಬೆಲೆ ಕುಸಿದಿದೆ ಅದನ್ನು ನಿವಾರಿಸುವುದಕ್ಕೆ ಪ್ರಯತ್ನ ಒಂದು ಚಳುವಳಿಯಾಗಬೇಕು. ರಾಜ್ಯ ಸರ್ಕಾರ ಕೊಂಡುಕೊಳ್ಳಲಿಕ್ಕೆ ನೂರು ಕೋಟಿ ರೂಪಾಯಿ ನಿಧಿ ಏನು ಇಟ್ಟಿದ್ದೀರಿ ಅದಕ್ಕಿಂತ ಇನ್ನು ಹೆಚ್ಚಿನ ಹಣವನ್ನು

ಇಷ್ಟು ಬೆಂಬಲ ಬೆಲೆಯನ್ನು ಕೊಟ್ಟು ಕೊಂಡುಕೊಳ್ಳುವ ವ್ಯವಸ್ಥೆ ಆಗಬೇಕು. ಅದರ ಜೊತೆಗೆ ಶಾಶ್ವತವಾದ ಒಂದು ವ್ಯವಸ್ಥೆಯಾಗಬೇಕು. ಮೊನ್ನೆ ತಾನೇ ಒಂದು ಪ್ರಶ್ನೆಗೆ ಉತ್ತರ ಕೊಟ್ಟಾಗ ಸಕ್ಕರೆ ಕಾರ್ಖಾನೆಗಳವರು ರೈತರಿಗೆ 75 ಕೋಟಿ ರೂಪಾಯಿ ಹಣವನ್ನು ಕೊಟ್ಟಿಲ್ಲ. ರೈತನು ಬೆಳೆದ ಬೆಳೆಗಳಿಗೆ ಆತ ಮಾಲನ್ನು ಮಾರಾಟ ಮಾಡಿದಾಗ ಹಣವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಲಿಲ್ಲ. ಎಪಿಎಂಸಿಯಲ್ಲಿ ದಳ್ಳಾಲಿಗೆ ಮಾರಾಟ ಮಾಡಿದಂತಹ ಮಾಲಿಗೆ ಕಾನೂನು ಪ್ರಕಾರ ಹಣವನ್ನು ಕೊಡಬೇಕು. ಬೆಲೆಗಳು ಬಿದ್ದಾಗ ಆತನ ಮಾಲನ್ನು ಕೊಳ್ಳತಕ್ಕ ವ್ಯವಸ್ಥೆ ಇನ್ನು ಜಾರಿಗೆ ಬಂದಿಲ್ಲ. ಹಸಿರು ಕ್ರಾಂತಿ ಮತ್ತು ಕ್ಷೀರ ಕ್ರಾಂತಿಯೆಂದು ಹೇಳಿ ಹೊಸ ವಿಧಾನಗಳು ಹೊಸ ತಳಿ ರಸಗೊಬ್ಬರ ಔಷಧಿಗಳನ್ನು ಸಾಲ ಪಡೆದು ಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ ಸಾಲಗಾರರನ್ನಾಗಿ ಮಾಡಿದ್ದಾರೆ. ಆದರೆ ಅವನು ಸಾಲವನ್ನು ತೀರಿಸುವುದಕ್ಕೆ ಅವನು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಸಿಗುವ ಚಿಂತನೆಯನ್ನು ಈ ದೇಶದಲ್ಲಿ ಎಲ್ಲೂ ಮಾಡಿಲ್ಲ. ಇದುವರೆಗೆ ನಡೆದದ್ದು ಅಸಂಘಟಿತ ರೈತರ ವಿಚಾರದಲ್ಲಿ ರಾಜಕೀಯ ಪಕ್ಷಗಳು ಅವರ ಅಸಂಘಟಿತ ಅವ್ಯವಸ್ಥೆಯನ್ನು ಬಳಸಿಕೊಂಡು ರಾಜಕೀಯ ಮಾಡಿದ್ದು ಆಯಿತು. ನಮಗೆ ರೈತ ಅಸಂಘಟಿತನಾಗಿದ್ದಾನೆಂದು ಪೂರ್ಣ ಅರಿವು ಇದೆ. ಇಡೀ ದೇಶದಲ್ಲಿ ರೈತರು ಸಂಘಟಿತರಾಗಿ ಹೋರಾಟ ಮಾಡುವುದನ್ನು ಅನಿವಾರ್ಯವಾಗಿದೆ. ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ರೈತ ಬೆಳೆದಂತಹ ಬೆಳೆಗಳಿಗೆ ಯೋಗ್ಯ ಬೆಲೆ ಕೊಡಿಸಲಾಗುವುದು ಎಂದು ಹೇಳುತ್ತಾರೆ. ಎಲ್ಲ ರಾಜಕೀಯ ಪಕ್ಷಗಳು ಚುನಾವಣೆಗೆ ಇಳಿದಾಗ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ರೈತ ಬೆಳೆದಂತಹ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿ ಮಾಡುತ್ತೇವೆಂದು ಹೇಳುತ್ತಾರೆ. ಈ ವಿಚಾರದಲ್ಲಿ ರೈತರು ಸಂಘಟಿತರಾಗಿ ಹೋರಾಟ ಮಾಡುವುದು ಅನಿವಾರ್ಯವಾಗಿದೆ. ಆ ಕೆಲಸ ನಡೆದಿದೆ. ಪಕ್ಷ ಭೇದವನ್ನು ಮರೆತು ಪ್ರತಿಯೊಂದು ಪಕ್ಷಗಳು ಈ ಬಗ್ಗೆ ಚಿಂತನೆಯನ್ನು ಮಾಡಬೇಕು. ಆಡಳಿತ ಪಕ್ಷ ಮತ್ತು ವಿರೋಧಪಕ್ಷಗಳು, ಗ್ಲೋಬಲೈಸೇಷನ್, ಹಾಗೂ ನಮ್ಮ ಉತ್ಪಾದನಾ ವೆಚ್ಚ, ಅದಕ್ಕೆ ಸಿಗತಕ್ಕ ಬೆಲೆ ಇದರ ಬಗ್ಗೆ ಒಂದು ಸಮಗ್ರ ನೀತಿಯನ್ನು ರೂಪಿಸಬೇಕು. ಅದರ ಮೂಲಕ ಆಡಳಿತ ಪಕ್ಷದವರು, ವಿರೋಧಪಕ್ಷದವರು ರೈತ ವರ್ಗದಿಂದ ಬಂದಂತಹ ನಾವುಗಳೆಲ್ಲ ಚಿಂತನೆಯನ್ನು ಮಾಡಿ ಅದಕ್ಕೆ ಒಂದು ಹೊಸ ರೂಪವನ್ನು ಕೊಡಬೇಕಾಗುತ್ತದೆ. ಈಗಿರುವ ಅವ್ಯವಸ್ಥೆಯನ್ನು ಒಂದು ವ್ಯವಸ್ಥೆಗೆ ತರಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಮುಂದಾಗಬೇಕು. ಹೊಸ ಚಿಂತನೆಯನ್ನು ಮಾಡಬೇಕಾಗುತ್ತದೆ. ದುಡಿದ ಮನುಷ್ಯನಿಗೆ ಯೋಗ್ಯ ಬೆಲೆ ಸಿಗದೆ ವಿಷ ಕುಡಿದು ಸಾಯುತಕ್ಕದ್ದು, ಅವನು ಸತ್ತಾಗ ಅವನಿಗೆ ಪರಿಹಾರವನ್ನು ಕೊಡತಕ್ಕದ್ದು ಆ ಘಟ್ಟವನ್ನು ತಲುಪಿದ್ದೇವೆ. ಈವೊಂದು ಚಿಂತಾಜನಕ ಪರಿಸ್ಥಿತಿಯನ್ನು ನೋಡಿ, ಸಾಯುವುದಕ್ಕೆ ಮನುಷ್ಯನನ್ನು ಬಿಟ್ಟಿದ್ದೇವೆ. ದುಡಿಯುವ ಮನುಷ್ಯನನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರಕ್ಕೆ ಆಗಿಲ್ಲ. ದುಡಿಯುವ ಮನುಷ್ಯನಿಗೆ

ರಕ್ಷಣೆ ಕೊಟ್ಟು ಅವನ ಆರ್ಥಿಕಾಭಿವೃದ್ಧಿಯಾಗಬೇಕು. ಆದರೆ ರೈತ ವಿಷ ಕುಡಿದು, ಆತ್ಮಹತ್ಯೆ ಮಾಡಿಕೊಳ್ಳತಕ್ಕದ್ದು ಈ ಸ್ಥಿತಿಗೆ ರಾಜ್ಯದ ರಾಜಕಾರಣದಿಂದ ರೈತನನ್ನು ಈ ಮಟ್ಟಕ್ಕೆ ತಳ್ಳಿದ್ದೇವೆ. ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಿಯೋಗ ದೆಹಲಿಗೆ ಹೋಗಿ ರೈತ ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಸಿಗತಕ್ಕ ವ್ಯವಸ್ಥೆ ಮಾಡಬೇಕು. ಬೆಲೆ ಬಿದ್ದಾಗ ಬೆಂಬಲ ಬೆಲೆಯನ್ನು ಕೊಟ್ಟು ಖರೀದಿ ಮಾಡುವುದಕ್ಕೆ ಕೂಡಲೇ ವ್ಯವಸ್ಥೆ ಮಾಡಿ. ಬೆಲೆಗಳು ಬಿದ್ದಾಗ ಸ್ವಲ್ಪಮಟ್ಟಿಗಾದರೂ ಯೋಗ್ಯ ಬೆಲೆ ಸಿಗುವಂತಹ ವ್ಯವಸ್ಥೆಯಾಗಬೇಕು. ಶಾಶ್ವತ ಪರಿಹಾರದ ಬಗ್ಗೆ ಚಿಂತನೆ ಆಗಬೇಕು. ಹಸಿರು ಕ್ರಾಂತಿಯಿಂದ ರಕ್ತ ಕ್ರಾಂತಿಗೆ ಹೋಗುವ ಕಾಲದಲ್ಲಿ ಶಾಸನ ಸಭೆಗಳಲ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ಇವತ್ತು ರೈತ ಸಮಾಜದಿಂದ ಬಂದಂತಹ ಜನ ಮೇಲೆ ಎದ್ದುಬಂದು ಕ್ರಾಂತಿಯನ್ನು ಮಾಡುವಾಗ ದಿನಾದೀತು ಎಂಬುದನ್ನು ನೀವು ವಿಚಾರ ಮಾಡಬೇಕು. ಈ ದಿಸೆಯಲ್ಲಿ ಪಕ್ಷಾತೀತವಾಗಿ ಒಂದು ಶಾಶ್ವತ ಪರಿಹಾರ ಕಂಡುಹಿಡಿಯಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಈಗ ಸಭೆಯನ್ನು ಮುಂದೂಡಿ ಪುನಃ ಸಭೆಯು ಮಧ್ಯಾಹ್ನ 3.15 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು 2 ಗಂಟೆ 09 ನಿಮಿಷಗಳಿಗೆ ಮುಂದೂಡಲ್ಪಟ್ಟಿತು)

ಸದನವು ಮತ್ತೆ 3 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು.

(ಸಭಾಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

5. ಪ್ರಕಟಣೆ

ಅಧ್ಯಕ್ಷರು :— ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ: 24-11-2000ರಂದು ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ-2000ವನ್ನು ಯಾವುದೇ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತೇವೆ.

ನಂತರ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 119ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ:24-11-20001ರಂದು ಕರ್ನಾಟಕ ಬಾಡಿಗೆ ವಿಧೇಯಕ-2000ವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತೇವೆ.